ವಿಮಾನ ಬಲಕ್ಕೆ ಇದೊಂದು ಭಾರಿ ಪೆಟ್ಟು ಹಾಗೆ ಎಂದು ಭಾವಿಸಲಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ತಂದೆ ತಾಯಿಗಳಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಸಾಂತ್ವನ ಮತ್ತು ಶಾಂತಿ ಸಮಾಧಾನ ಧೈರ್ಯಗಳು ಸಿಗಬೇಕು ಎನ್ನತಕ್ಕಂಥಾದ್ದು ಈ ಸದನದ ಹಾರೈಕೆ. ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಣೆ ಮಾಡಿ ಅವರಿಗೆ ಗೌರವ ಸಲ್ಲಿಸೋಣ.

(ಸಭೆಯು ಮೃತರ ಗೌರವಾರ್ಥ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು.)

1991-92ನೇ ಸಾಲಿನ ಆಯವ್ಯಯದ ಮೇಲೆ ಹಡೆದ ಸಾಮಾನ್ಯ ಚರ್ಚೆಗೆ– ಮುಖ್ಯಮಂತ್ರಿಗಳವರಿಂದ ಉತ್ತರ.

ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಉಪನಾಯಕರು ಹಾಗೂ ಆ ಕಡೆ ಮತ್ತು ಈ ಕಡೆ ಕುಳಿತಿರತಕ್ಕಂತಹ ಮಾನ್ಯ ಸದಸ್ಯರುಗಳು ಆಯವ್ಯಯ ಪತ್ರದ ಚರ್ಚೆಯಲ್ಲಿ ಭಾಗವಹಿಸತಕ್ಕಂತಹ ಕಾಲದಲ್ಲಿ ತಮ್ಮ ಅನಿಸಿಕೆಗಳನ್ನೂ ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಸಹಜವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕಂತಹ ಕಾಲದಲ್ಲಿ ಟೀಕೆ ಟಿಪ್ಪಣಿಗಳು ಬರತಕ್ಕಂತಹ ನಿರೀಕ್ಷೆಯನ್ನು ನಾವು ಮಾಡಬೇಕು. ನಾನು ಆ ಟೀಕೆ ಟಿಪ್ಪಣಿಗಳನ್ನು ಕೆಲವೊಮ್ಮೆ ನಮ್ಮ ಆಡಳಿತದ ಭವಿಷ್ಯದ ಚಿಂತನೆ ಮತ್ತು ಚೌಕಟ್ಟಿನಲ್ಲಿ ಸದುಪಯೋಗದ ದೃಷ್ಟಿಯಿಂದ ಅವು ಒಳ್ಳೆಯ ಮಾರ್ಗ ದರ್ಶನಗಳು ಎಂದು ನಾನು ಕರೆಯುತ್ತೇನೆ. ಆ ರೀತಿ ಕರೆದರೆ ತಪ್ಪಲ್ಲವೆಂದು ನನ್ನ ಭಾವನೆ. ಒಂದು ವಿಚಾರವನ್ನು ಸಮರ್ಥನೆ ಮಾಡಬೇಕಾದರೆ ಅಥವಾ ವಿರೋಧ ಮಾಡಬೇಕಾದರೆ, ವಿಷಯವನ್ನು ಪ್ರತಿಪಾದನೆ ಮಾಡಬೇಕಾದರೆ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂತಹ ಸಂದರ್ಭದಲ್ಲಿ ಕೆಲವೊಮ್ಮೆ ವಿರೋಧಪಕ್ಷದ ಸಾಲಿನಲ್ಲಿ ಕುಳಿತಿರತಕ್ಕಂತಹ ಮಾನ್ಯ ಸದಸ್ಯರುಗಳಷ್ಟೇ ಅಲ್ಲ ಈ ಕಡೆ ಕುಳಿತಿರತಕ್ಕಂತಹ ಮಾನ್ಯ ಸದಸ್ಯರುಗಳೂ ಕೂಡ ಇದು ಸರಿಯಲ್ಲ ಸರಿಯಾಗಿ ಆಗಬೇಕಾಗಿತ್ತು ಅಥವಾ ಇದು ಖಂಡನೀಯವೆಂದು ಹೇಳತಕ್ಕಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದು ತಪ್ಪು ಅಲ್ಲವೆಂದು ಹೇಳಿದ ಮೇಲೆ ವಿರೋಧಪಕ್ಷದ ಸಾಲಿನಲ್ಲಿ ಕುಳಿತಿರತಕ್ಕಂತಹ ಸದಸ್ಯರುಗಳು ಆ ರೀತಿಯಾದ ಒಂದು ವಿಚಾರವನ್ನು ಸಮರ್ಥನೆ ಮಾಡುವುದಕ್ಕೆ ಅಂದರೆ ನಾವು ಇಟ್ಟಿರತಕ್ಕಂತಹ ವಿಚಾರವನ್ನು ಸಮರ್ಥನೆ ಮಾಡುವುದಕ್ಕೆ ಸಾಧ್ಯವಾಗದೇ ವಿರೋಧವನ್ನು ವ್ಯಕ್ತಪಡಿಸಿದರೆ ಮತ್ತು ಆ ವಿರೋಧಕ್ಕೆ ಸಕಾರಣಗಳು ಇದ್ದರೆ, ಅದನ್ನು ಮೆಚ್ಚತಕ್ಕಂತಹ ಒಂದು ವಾದವನ್ನು ನಾವು ಮಾಡಬೇಕಾಗುತ್ತದೆ. ಅದನ್ನು ಮೆಚ್ಚಬೇಕಾಗುತ್ತದೆ. ಕಾರಣದ ಆಧಾರದ ಮೇಲೆ ವಾದವನ್ನು ಮಂಡನೆ ಮಾಡಿದಾಗ ಆ ವಾದಕ್ಕೆ ಪುಷ್ಟಿ ಕೊಡತಕ್ಕಂತಹ ಅಂಶಗಳ ಹಿನ್ನೆಲೆಯಲ್ಲಿ ನಾವು ಮೆಚ್ಚತಕ್ಕಂತಹ ವಿಚಾರಧಾರೆಯನ್ನು ಸರಕಾರದವರು ಇಟ್ಟುಕೊಂಡಿದ್ದೇನೆ. ಕಾರಣದ ಆಧಾರದ ಮೇಲೆ ಟೀಕೆ ಟಿಪ್ಪಣಿಗಳು ಬಂದರೆ ನಾವು ಸದಾ ಸ್ವಾಗತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸದನದ ಗಮನಕ್ಕೆ ತರುತ್ತಿದ್ದೇವೆ.

ಆದರ ಅರ್ಥ ವಿಷಯದ ಚರ್ಚೆಯ ಕಾಲದಲ್ಲಿ ಪ್ರತಿಪಾದನೆ ಮಾಡತಕ್ಕ ಕಾಲದಲ್ಲಿ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ವಿಷಯಗಳು ಈ ರೀತಿ ಬಂದಾಗ ನಾನು ವಿಷಯಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲತಕ್ಕ ಸದ್ವಿಚ್ಛೆಯಿಂದ ಆವೊಂದು ದೃಷ್ಟಿಯಿಂದ ಅವುಗಳನ್ನು ಪರಿಣಾಮಕಾರಿಯಾಗಿ ಮಾಡತಕ್ಕ ಒಂದು ವಿಚಾರಧಾರೆಯ ಹಿನ್ನೆಲೆಯಲ್ಲಿ ನಾನು ನನ್ನ ಉತ್ತರವನ್ನು ಕೊಡತಕ್ಕ ಪ್ರಯತ್ನ ಮಾಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಉಪನಾಯಕರು ಆದಿಯಾಗಿ ಆ ಕಡೆ ಈ ಕಡೆ ಮಾನ್ಯ ಸದಸ್ಯರು ಅದನ್ನು ಒಪ್ಪುತ್ತಾರೆ, ಮೆಚ್ಚುತ್ತಾರೆ ಎಂದು ನಾನು ಭಾವಿಸುತ್ತೇನೆ.

ಏಕೆಂದರೆ ಆಡಳಿತದಲ್ಲಿ ಸಹಜವಾಗಿ ನಮಗೆ ಗೊತ್ತಿದ್ದರೂ ಕೂಡಾ ಕೆಲವು ದೃಷ್ಟಿಯಿಂದ ನ್ಯಾಯವನ್ನು ದೊರಕಿಸಿ ಕೊಡತಕ್ಕ ಸಂದರ್ಭದಲ್ಲಿ ಅಡೆತಡೆಗಳು ಬರುವುದರಿಂದ ಅದು ಹಣಕಾಸಿನ ವಿಚಾರ ಇರಬಹುದು, ಮತ್ತೊಂದು ಇರಬಹುದು ಬೇರೆ ಕಾರಣಗಳು ಇರಬಹುದು ಅದನ್ನು ಸಾಧನೆ ಮಾಡಿ ತೋರಿಸುತ್ತೇವೆ ಎನ್ನತಕ್ಕ ಮಾತನ್ನು ಆಡಿದ್ದೇವೆ. ವಾಸ್ತವಿಕ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನೀರಾವರಿಗೆ ಇನ್ನು ಜಾಸ್ತಿ ಹಣವನ್ನು ಕೊಡಬೇಕಾಗಿತ್ತು ಎಂದು ಮಾನ್ಯ ಸದಸ್ಯರು ಪ್ರತಿಪಾದನೆ ಮಾಡಿದರೆ ಅದು ನೈಜವಾಗಿರತಕ್ಕ ವಿಚಾರವಾಗಿದ್ದರೆ ನಾವು ಹಣವನ್ನು ಜಾಸ್ತಿ ಕೊಡುವುದಕ್ಕೆ ನಾವು ಯೋಜನೆಯ ಗಾತ್ರದ ದೃಷ್ಟಿಯಿಂದ ಇಂಟರ್‌ನಲ್ ಅಲೋಕೇಶನ್ ಅವರ ದೃಷ್ಟಿಯಿಂದ ಹಣವನ್ನು ನಿರೀಕ್ಷಿತ ಮಟ್ಟದಲ್ಲಿ ಕೊಡುವುದಕ್ಕೆ ಆಗಿಲ್ಲವೆನ್ನುವ ಮಾತನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆಯವ್ಯಯ ಪತ್ರವನ್ನು ರಚನೆ ಮಾಡತಕ್ಕ ಕಾಲದಲ್ಲಿ ಅದನ್ನು ಮಂಡನೆ ಮಾಡತಕ್ಕ ಕಾಲದಲ್ಲಿ ಅದನ್ನು ಪ್ರತಿಪಾದನೆ ಮಾಡತಕ್ಕ ಕಾಲದಲ್ಲಿ ಹೇಳುವುದು ಕೂಡಾ ಕರ್ನಾಟಕ ರಾಜ್ಯದ ಹಿತ ದೃಷ್ಟಿಯಿಂದ ನಾವು ಈ ಅಭಿಪ್ರಾಯವನ್ನು ಇಟ್ಟಿದ್ದೇವೆ ಎನ್ನುವ ಮಾತನ್ನು ಹೇಳುವುದನ್ನು ಬಿಟ್ಟರೆ ಇನ್ನೊಂದು ಮಾತನ್ನು ನಾನು ಆಡಲಾರೆ. ಮಾಡುವುದಕ್ಕೆ ಸಾಕಷ್ಟು ವಿಚಾರಗಳಿವೆ. ಸಾಕಷ್ಟು ಹಣ ಬೇಕಾಗುತ್ತದೆ ಎನ್ನತಕ್ಕ ಮಾತನ್ನು ನಾನು ನೇರವಾಗಿ ಈ ಸಂದರ್ಭದಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ.

ಆ ದೃಷ್ಟಿಯಿಂದ ನಿಮ್ಮ ಟೀಕೆ ಟಿಪ್ಪಣಿಗಳನ್ನು ನಾನು ಸದಾ ಸ್ವಾಗತ ಮಾಡುತ್ತೇನೆ. ನಾನು ಯಾವುದೇ ಒಂದು ವಿಚಾರಕೋಸ್ಕರ ಹೇಳುತ್ತಿಲ್ಲ. ಅದಕ್ಕೆ ನೈಜವಾದ ಕಾರಣಗಳು ಇದ್ದಾಗ ಅದನ್ನು ಮೆಚ್ಚಬೇಕು, ಒಪ್ಪಬೇಕು ಎನ್ನುವ ದೃಷ್ಟಿಯಿಂದ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಚರ್ಚೆಯ ಕಾಲದಲ್ಲಿ ತಮ್ಮ ಅಭಿಪ್ರಾಯಗಳು ಏನಿವೆ ಆ ಕಡೆಯವರದು ಮತ್ತು ಈ ಕಡೆಯವರು ಏನು ಹೇಳಿದ್ದಾರೆ ವಿರೋಧ ಪಕ್ಷದ ನಾಯಕರ ಆದಿಯಾಗಿ ನಾನು ಅಧ್ಯಕ್ಷರ ಮುಖಾಂತರ ತಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಲವಾರು ವಿಷಯಗಳ ಮೇಲೆ ಸದಸ್ಯರು ಬೆಳಕು ಚೆಲ್ಲತಕ್ಕ ಪ್ರಾಮಾಣಿಕ ಪ್ರಯತ್ನ ಇಲ್ಲಿ ನಡೆದಿದೆ. ಮುಖ್ಯವಾಗಿ ಇಲ್ಲಿ ಚರ್ಚೆಯಲ್ಲಿ ಭಾಗವಹಿಸಿರತಕ್ಕ ಅನೇಕ ಮಾನ್ಯ ಸದಸ್ಯರುಗಳು ಇನ್ನು ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಕಾಲದ ಅಭಾವದಿಂದ ಸಾಧ್ಯವಾಗಿಲ್ಲ. ಆ ಸಾಧ್ಯತೆ ಇನ್ನು ಕೂಡಿ ಬರಲಿ ಎನ್ನುವ ಹೆಬ್ಬಯಕೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಆ ಸಾಧ್ಯತೆ ಕೂಡಿ ಬರುತ್ತದೆ ಎಂದು ನಾನು ಹೇಳಬಲ್ಲೆ. ಚರ್ಚೆಗೆ ಸಾಕಷ್ಟು ಕಾಲ ಸಿಗಲಿ. ಹಲವಾರು ವಿಷಯಗಳು ಚರ್ಚೆಗೆ ಒಳಪಟ್ಟಿವೆ ಎನ್ನತಕ್ಕ ಮಾತನ್ನು ಆಡಿದ್ದೇನೆ. ಚರ್ಚೆಯ ಕಾಲದಲ್ಲಿ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿದ್ದರಿಂದ ಅದಕ್ಕಾಗಿ ವ್ಯಯವಾಗಿರತಕ್ಕ ಸಮಯ ಸುಮಾರು 9 ಗಂಟೆ 44 ನಿಮಿಷಗಳು. ಸುಮಾರು ಹತ್ತತ್ತಿರ 10 ಗಂಟೆಗಳ ಕಾಲ ಎಂದು ಇಟ್ಟುಕೊಳ್ಳೋಣ. ಅಷ್ಟು ಸಮಯವನ್ನು ಚರ್ಚೆಗೆ ವಿನಿಯೋಗ ಮಾಡಿದ್ದಾರೆ.

ಚರ್ಚೆಯಲ್ಲಿ ಭಾಗವಹಿಸಿರುವ ಒಟ್ಟು ಸದಸ್ಯರ ಸಂಖ್ಯೆ 17-18 ಸದಸ್ಯರ ಸಂಖ್ಯೆ 17-18 ಸದಸ್ಯರು, ಇವತ್ತು ಮಾತನಾಡಿದವರನ್ನು ಸೇರಿಸಿಕೊಂಡರೆ 20 ಜನ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸುವುದನ್ನು ಸಾಧ್ಯವಾಗಿದೆ. ಇದರಲ್ಲಿ ಒಂದೆರಡು ಅಂಕಿಅಂಶಗಳು ವ್ಯತ್ಯಾಸವಿರಬಹುದು. ಇವತ್ತು ಎಷ್ಟು ಜನರು ಮಾತನಾಡಿದ್ದಾರೆನ್ನುವ ಅಂಕಿ ಅಂಶಗಳು ನನಗೆ ಸಿಕ್ಕಿಲ್ಲ. ಚರ್ಚೆಯಲ್ಲಿ ನಮ್ಮ ಪಕ್ಷದ ವತಿಯಿಂದ, ಜನತಾ ದಳದವರು ಪಕ್ಷೇತರರು ಮಿತ್ರರು ಜನತಾ ಪಾರ್ಟಿಯವರು, ಭಾರತೀಯ ಜನತಾ ಪಾರ್ಟಿಯವರು ಇತ್ಯಾದಿ ಇತ್ಯಾದಿ ಎಲ್ಲರೂ ಭಾಗವಹಿಸಿದ್ದಾರೆ. ನಾನು ವಿಷಯಗಳನ್ನು ಪ್ರತಿಪಾದನೆ ಮಾಡತಕ್ಕ ವಿಚಾರದಲ್ಲಿ ಅವರು ಹಲವಾರು ಅಭಿಪ್ರಾಯಗಳನ್ನು

ವ್ಯಕ್ತಪಡಿಸುವ ಮುಖಾಂತರ ಸರ್ಕಾರದ ಗಮನವನ್ನು ಸೆಳೆದಿರುವುದಕ್ಕಾಗಿ ನಾನು ಅಭಿನಂದಿಸುತ್ತೇನೆ ಎನ್ನುವ ಮಾತನ್ನು ಮೊದಲೇ ಪ್ರಕಟಣೆ ಮಾಡಿದ್ದೇನೆ. ನಾನು ಮೊದಲನೆಯದಾಗಿ ಪ್ಲಾನಿಂಗ್ ಅಲೋಕೇಶನ್ ಏನಿದೆ, ಅದರ ಬಗ್ಗೆ ತಮ್ಮ ಗಮನಹರಿಸತಕ್ಕಂಥ ವಿಚಾರ ಹೆಚ್ಚು ಅಡಗಿದೆ ಎಂದು ನಾನು ಭಾವಿಸುತ್ತೇನೆ. ನಾನು ಹಿಂದಿನ ವರ್ಷಕ್ಕೆ ಹೋಗಲಾರೆ. ಒಂದೇ ಒಂದು ವಿಚಾರವನ್ನು ಪೂರ್ವಭಾವಿಯಾಗಿ ಈ ಸದನದಲ್ಲಿ ಮಾನ್ಯ ಸದಸ್ಯರ ಗಮನವನ್ನು ತಮ್ಮ ಮೂಲಕ ಸೆಳೆದರೆ ತಪ್ಪಾಗಲಾರದು ಎಂದು ಭಾವಿಸಿದ್ದೇನೆ. ತಮಗೆ ಗೊತ್ತಿರುವ ಹಾಗೆ ಎಂಟನೇ ಪಂಚವಾರ್ಷಿಕ ಯೋಜನೆಯ ಚರ್ಚೆಯ ಪ್ರಾರಂಭವೇ ಆಗಿಲ್ಲ. ಈಗಾಗಲೇ ವರ್ಷ ಕಳೆದು ಹೋಗುತ್ತಿದೆ. ಇದು ಈ ವರ್ಷ ಪ್ರಾರಂಭವಾಗುವ ಸ್ಥಿತಿ ಕಾಣೆಸುತ್ತಿಲ್ಲ. ಏಕೆಂದರೆ ಚುನಾವಣೆಗಳು ಮೇ ತಿಂಗಳಲ್ಲಿ ಮುಗಿದರೆ, ಜೂನ್ ತಿಂಗಳಲ್ಲಿ ಹೊಸ ಸರ್ಕಾರದ ರಚನೆ ಕೇಂದ್ರದಲ್ಲಿ ಆದರೆ, ಆಮೇಲೆ ಅವರು ಚರ್ಚೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಯ ಗಾತ್ರದ ಬಗ್ಗೆ ಈ ರಾಷ್ಟದಲ್ಲಿ ಪ್ರಾರಂಭ ಮಾಡಿ ಮುಗಿಸಿ ಅನಂತರ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಅವರ ಸಭೆಯನ್ನು ಕೂಡ ಕರೆದು ನಂತರ ಅವರು ಒಪ್ಪಿಕೊಳ್ಳುವುದರೊಳಗೆ ವರ್ಷದ ಆರ್ಥಿಕ ವರ್ಷ ಮುಕ್ತಾಯ ಆಗುತ್ತದೆ.

ನನ್ನ ಪ್ರಕಾರ ಈ ವರ್ಷ ಎಂದರೆ, 1991-92ರಲ್ಲಿ ಎಂಟನೇ ಪಂಚವಾರ್ಷಿಕ ಯೋಜನೆ ಪ್ರಾರಂಭ ಆಗತಕ್ಕಂಥ ಲಕ್ಷಣಗಳು ಎಳ್ಳಷ್ಟೂ ಕೂಡ ನಮಗಾಗಲೀ, ನಿಮಗಾಗಲೀ ಯಾರಿಗೂ ಕೂಡಾ ಕಾಣೆಸುತ್ತಿಲ್ಲ. ಅದರ ಅರ್ಥ 1991-92ನೇ ಸಾಲು ಏನು ಮುಂದಿನ ಏಪ್ರಿಲ್‌ನಿಂದ ಪ್ರಾರಂಭವಾಗುತ್ತದೆ. ಈ ಆರ್ಥಿಕ ವರ್ಷ ಪಂಚವಾರ್ಷಿಕ ಯೋಜನೆಯಿಂದ ಹೊರಗೇ ಉಳಿದಿರತಕ್ಕಂಥ ವರ್ಷ ಎಂದು ನಾವು ಇವತ್ತು ಮಾತನಾಡತಕ್ಕದ್ದು ಬಹಳ ಒಳ್ಳೆಯದು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನ ಸೆಳೆಯುತ್ತಿದ್ದೇನೆ, ನಾನು ಹಿಂದೆ ಕೂಡ ಸದನದಲ್ಲಿ ಹೇಳಿದ್ದ ನೆನಪು ಇದೆ. ಇವತ್ತು ಹಲವಾರು ರಾಜಕೀಯ ವಿದ್ಯಮಾನಗಳ ಬೆಳವಣೆಗೆ ರಾಷ್ಟ್ರಮಟ್ಟದಲ್ಲಿ ಆಗಿರತಕ್ಕಂಥ ಒಂದು ಕಾರಣದ ಹಿನ್ನೆಲೆಯಲ್ಲಿ ಎಂಟನೇ ಪಂಚವಾರ್ಷಿಕ ಯೋಜನೆಯ ವಿಚಾರಕ್ಕೆ ಹೋಗಿಲ್ಲ. ಪುಣ್ಯಕ್ಕೆ ಯೋಜನಾ ಆಯೋಗದವರು ನಮಗೆ ಕೊನೆಯಪಕ್ಷ 1991--92ನೇ ಇಸವಿಯ ಆರ್ಥಿಕ ವರ್ಷದ ಒಂದು ಯೋಜನೆ ಗಾತ್ರದ ಬಗ್ಗೆ ನಮ್ಮ ರಾಷ್ಟದ ಎಲ್ಲಾ ರಾಜ್ಯಗಳಿಗೆ ಸಂಬಂಧಪಟ್ಟಂತೆ ನಿಗದಿ ಮಾಡಿಕೊಟ್ಟರು ಎನ್ನತಕ್ಕದ್ದು ಒಂದು ಸಂತೋಷದ ವಿಚಾರ. ಈ ವಿಚಾರದ ಬಗ್ಗೆ ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. ಇಷ್ಟನ್ನು ಬಿಟ್ಟರೆ ನಾವು ಬೇರೆ ಏನೂ ಹೇಳುವುದಕ್ಕೆ ಬರುವುದಿಲ್ಲ. ಇದರಲ್ಲಿ ಏನಾಗಿದೆ ಎಂದರೆ, ಕೆಲವು ವಿಚಾರಗಳನ್ನು ಯೋಜನಾ ಆಯೋಗದವರ ಮುಂದೆ ನಾನೇ ಪ್ರಸ್ತಾಪ ಮಾಡಿದೆ. ಯೋಜನೆಯ ಗಾತ್ರವನ್ನು ನಿಗಧಿ ಮಾಡತಕ್ಕಂಥ ಕಾಲದಲ್ಲಿ ಕೆಲವು ವಿಚಾರಗಳ ಬಗ್ಗೆ ಗಾಡ್ಗೀಳ್ ಸೂತ್ರದ ಬಗ್ಗೆ ಇರಬಹುದು, ಅದೂ ಕೂಡಾ ಅಂತಿಮ ತೀರ್ಮಾನಕ್ಕೆ ಒಳಪಟ್ಟಿಲ್ಲ. ಆದ್ದರಿಂದ ಕೆಲವು ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತದೆ, ಸೆಂಟ್ರಲ್ ಅಸಿಸ್ಟೆಂಟ್ ಪಡೆಯತಕ್ಕಂಥ ವಿಚಾರದಲ್ಲಿ, ಅದು ಎನ್.ಡಿ.ಸಿ. ಮುಂದೆ ಬರಬೇಕು ಎಂದರು. ಮತ್ತೊಂದು ಮಾರ್ಕೆಟ್ ಬಾರೋಯಿಂಗ್ ಮತ್ತು ನೆಗೋಶಿಯೇಟ್ ಲೋನ್ಸ್ ಈ ವಿಚಾರದಲ್ಲಿ ಕೂಡ, ನಿಜ ಹೇಳಬೇಕು ಎಂದರೆ, ಪ್ಲಾನ್ ಸಹಿತ 1991-92ರಲ್ಲಿ ಅದಕ್ಕೆ ಇದು ಸೇರಿಕೊಂಡಿಲ್ಲ, ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ತಮಗೆ ಕೂಡ ಇದು ಗೊತ್ತಿದೆ ಮತ್ತು ತಾವು ಇದನ್ನು ಸಹ ಪ್ರಸ್ತಾಪ ಮಾಡಿದ್ದೀರಿ ಎಂದು ನನ್ನ ಭಾವನೆ. ಮಾರ್ಕೆಟ್ ಬಾರೋಯಿಂಗ್ ಮತ್ತು ನೆಗೋಶಿಯೇಟ್ ಲೋನ್ಸ್ ಬಿಟ್ಟು 1991-92ನೇ ಸಾಲಿನ ಆರ್ಥಿಕ ವರ್ಷದ ಗಾತ್ರ 1510 ಕೋಟಿ ರೂಪಾಯಿ

ನಾವು ಅದನ್ನು ಸ್ಪಷ್ಟಪಡಿಸಿದ್ದೇವೆ; ಇದನ್ನೂ ಕೂಡಾ ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ಯೋಜನಾ ಗಾತ್ರ ಇನ್ನೂ ಸ್ವಲ್ಪ ದೊಡ್ಡದಾಗುತ್ತದೆ.

1600 ಕೋಟೀನೋ ಅಥವಾ ಸ್ವಲ್ಪ ಹೆಚ್ಚಿಗೆಯೇ ಎಂದು ಈಗಲೇ ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಅದು ಅಂತಿಮವಾಗಿ ಎನ್.ಡಿ.ಸಿ.ಯಲ್ಲಿ ತೀರ್ಮಾನ ಆಗಬೇಕು ಎನ್ನತಕ್ಕಂಥ ವಿಚಾರ. ಇನ್ನೂ ಕೆಲವು ವಿಚಾರಗಳನ್ನು ನಾನು ಯೋಜನಾ ಆಯೋಗದವರ ಮುಂದೆ ಪ್ರಸ್ತಾಪ ಮಾಡಿದ್ದೆ. ನಾವು ಈಗ ಪವರ್ ಜನರೇಶನ್ ಮಾಡಿಕೊಳ್ಳಬೇಕು. ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಕೋರ್‌ಸೆಕ್ಟರ್‌ಗೆ ನೀವು ಒಪ್ಪಿಗೆ ಕೊಡುತ್ತಿಲ್ಲ. ನಮಗಾದರೂ ಬಿಡಿ, ಪವರ್ ಬಾಂಡ್ಸ್ ಆದರೂ ರೈಸ್ ಮಾಡಿ ಹಣವನ್ನು ಹುಡುಕಿಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ವಿದ್ಯುಚ್ಛಕ್ತಿ ಉತ್ಪಾದನೆ ನೀರಿನಿಂದ ಇರಬಹುದು, ಕೋಲ್‌ನಿಂದ ಇರಬಹುದು, ಮತ್ತೊಂದು ಯಾವುದೇ ಇರಬಹುದು. ಈ ವಿಚಾರದಲ್ಲಿ ನಮಗಾದರೂ ಬಿಡಿ ಎಂದು ಹೇಳಿದಾಗ ಅದು ಎನ್.ಡಿ.ಸಿ.ಯಲ್ಲಿ ತೀರ್ಮಾನ ಆಗಬೇಕಾಗುತ್ತದೆ, ಅದು ಪಾಲಿಸಿ ಮ್ಯಾಟರ್ ಆಗುತ್ತದೆ ಎಂದು ಕೇಂದ್ರದವರು ತಿಳಿಸಿದರು. ಮಾರ್ಕೆಟ್ ಬಾರೋಯಿಂಗ್, ಇದರ ಬಗ್ಗೆ ಕೂಡಾ ಯೋಜನಾ ಆಯೋಗದವರು ಹೇಳಿದರು. ಇದು ಕೂಡ ಎನ್.ಡಿ.ಸಿ.ಯಲ್ಲಿ ತೀರ್ಮಾನವಾಗಬೇಕು, ಇಥು ಕೂಡ ಪಾಲಿಮ್ಯಾಟರ್. ಎನ್.ಡಿ.ಸಿ. ಸೇರದೇ, ಅಂತಿಮವಾದ ತೀರ್ಮಾನ ಹೇಳುವುದಕ್ಕೆ ಯೋಜನಾ ಆಯೋಗದವರಿಗೆ ಸಾಧ್ಯವಿಲ್ಲ. ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಯೋಜನಾ ಗಾತ್ರ, 1991-92 ಏನಿದೆ, ಇದು 1510 ಕೋಟಿಗಿಂತ ಜಾಸ್ತಿ ಹೋಗತಕ್ಕ ಸಂದರ್ಭ ಇದೆ ಎನ್ನತಕ್ಕಂಥ ವಿಚಾರ. ಇದೇ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಈ ಸದನದ ಗಮನ ಸೆಳೆಯುತ್ತೇನೆ. ಇದನ್ನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದ್ದೇನೆ ಮತ್ತು ನಮ್ಮ ಬಜೆಟ್ ಭಾಷಣದಲ್ಲೂ ಪ್ರಸ್ತಾಪ ಮಾಡಿದ್ದೇನೆ. ಯಾವ ವಿಚಾರ ಎಂದರೆ, ನೀರಿನ ವಿಚಾರದಲ್ಲಿ ತಮಿಳುನಾಡಿಗೂ ಮತ್ತು ನಮಗೂ ಕಾವೇರಿ ವಿಚಾರದಲ್ಲಿ ಡಿಸ್‌ಪ್ಯೂಟ್ ಇದೆ. ಇದು ಟ್ರಿಬ್ಯುನಲ್ ಮುಂದೆ ಇದೆ. ಸುಪ್ರೀಂಕೋರ್ಟ್, ಟ್ರಿಬ್ಯುನಲ್ ಮುಂದೆ ಇರತಕ್ಕ ವಿಚಾರ ಯಾರೂ ಪ್ರಸ್ತಾಪ ಮಾಡುವ ಹಾಗಿಲ್ಲ. ಅದು ಸಬ್‌ಜ್ಯುಡೀಸ್, ಆ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಅಂಡರ್ ನಾನ್‌ಪ್ಲಾನ್ ಇರಬಹುದು. ಹೇಮಾವತಿ, ಹಾರಂಗಿ ಮತ್ತೊಂದು ಇರಬಹುದು. ಈ ಬೇಸಿನ್‌ನಲ್ಲಿರತಕ್ಕ ಎಲ್ಲಾ ನೀರಾವರಿ ಯೋಜನೆಗಳಿಗೆ ಹಣವನ್ನು ಯೋಜನೇತರ ವೆಚ್ಚದಲ್ಲಿ ನಾವು ಪ್ರತಿ ವರ್ಷ ಖರ್ಚು ಮಾಡುತ್ತಿದ್ದೇವೆ. ದಿ. ದೇವರಾಜ ಅರಸರವರ ಕಾಲದಿಂದ ಪ್ರಾರಂಭವಾದ ಈ ಯೋಜನೆಗಳಿಗೆ, ಅಷ್ಟು ವರ್ಷದಿಂದ ಹಣವನ್ನು ಹಾಕುತ್ತಿದ್ದೇವೆ. ಈ ರೀತಿ ಹಣವನ್ನು ಖರ್ಚು ಮಾಡತಕ್ಕ ಸಂದರ್ಭದಲ್ಲಿ ನಾನು ಒಂದೇ ಒಂದು ಹೊಸ ಸೂತ್ರವನ್ನು ಯೋಜನಾ ಆಯೋಗದ ಮುಂದೆ ಇಟ್ಟೆ. ಯಾವ ಸೂತ್ರ ಎಂದರೆ, 100 ಟಿ.ಎಂ.ಸಿ. ವಾಟರ್ ಇದೆಯೆಂದು ಇಟ್ಟುಕೊಳ್ಳೋಣ. ಈ ಬಗ್ಗೆ ವಿರೋಧ ಪಕ್ಷದ ನಾಯಕರು ಹೆಚ್ಚು ಗಮನ ಕೊಡಬೇಕು. ಈ ಒಂದು ಸೂತ್ರವನ್ನು ಯೋಜನಾ ಆಯೋಗದವರು ವಿರೋಧ ಮಾಡುವುದಕ್ಕೆ ಆಗಿಲ್ಲ. 100 ಟಿ.ಎಂ.ಸಿ. ವಿಚಾರದಲ್ಲಿ ನಮಗೂ ಮತ್ತು ಕಾವೇರಿಗೂ ಡಿಸ್‌ಪ್ಯೂಟ್ ಇದೆಯೆಂದು ತಿಳಿದುಕೊಳ್ಳೋಣ. ಉದಾಹರಣೆಗೆ 100 ಟಿ.ಎಂ.ಸಿ. ಇದೆ ಎಂದು ಇಟ್ಟುಕೊಳ್ಳೋಣ. ನಮಗೆ ಸೇರತಕ್ಕದ್ದು 40 ಟಿ.ಎಂ.ಸಿ., ಅವರಿಗೆ ಸೇರತಕ್ಕ 40 ಟಿ.ಎಂ.ಸಿ. ಬಗ್ಗೆ ಜಗಳ ಇಲ್ಲ. ಒಂದು ಹನಿ ನೀರು ಮುಟ್ಟಬಾರದು, ಪೂರ್ತಿ ತಮಿಳುನಾಡಿಗೆ ಬರಬೇಕು, ಮೆಟ್ಟೂರು ಜಲಾಶಯಕ್ಕೆ ಬರಬೇಕು ಎಂದು ಅವರೂ ಹೇಳಲಿಲ್ಲ.

ನಾನು ಹೇಳಿದೆ, ನಿಮಗೆ ಸೇರುವುದು ಇಷ್ಟು ಮಾತ್ರ ಜಾಸ್ತಿ ಅಲ್ಲ. ಅವರು ಹೇಳುತ್ತಾರೆ, ನಿಮಗೆ ಇಷ್ಟು ಸೇರುವುದು, ಇದಕ್ಕಿಂತ ಜಾಸ್ತಿ ಅಲ್ಲ ಎಂದು. ಎಂದರೆ, ಉದಾಹರಣೆಗೆ 40 ಟಿ.ಎಂ.ಸಿ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಹೆಚ್ಚು ವಿವರಗಳಿಗೆ ಹೋಗುವುದು ಬೇಡ, ನಾನು ವಿವರಗಳಿಗೆ ಹೋಗುವುದಿಲ್ಲ. 100 ಟಿ.ಎಂ.ಸಿ. ಒಟ್ಟು ಪ್ರಮಾಣದ ವಿಚಾರ ಇದ್ದರೆ, ಇದರಲ್ಲಿ 40 ಅವರ ಷೇರು ಬಗ್ಗೆ ಅವರದೂ ಜಗಳ ಇಲ್ಲ. ಇದು ಒಟ್ಟು 80 ಟಿ.ಎಂ.ಸಿ. ಆಯಿತು. ಇನ್ನು 20 ಟಿ.ಎಂ.ಸಿ ಮಾತ್ರ ಉಳಿಯುತ್ತದೆ, ಈ 20ರಲ್ಲೇ ಜಗಳ ಇರುವುದು. ಇದರಲ್ಲಿ 15 ಅವರು ಕೇಳಿದರೆ, ನಾವು 12 ಅಥವಾ 15 ಕೇಳಬಹುದು, ಹೀಗಿದೆ ಜಗಳ. ನಾನು ಪ್ಲಾನಿಂಗ್ ಕಮೀಷನ್ ಮುಂದೆ ಹೇಳಿರುವುದು 80 ಟಿ.ಎಂ.ಸಿ.ವರೆಗೆ ಜಗಳ ನಮ್ಮಲ್ಲೂ ಇಲ್ಲ, ಅವರಲ್ಲೂ ಇಲ್ಲ. Why don't you admit under Plan? What right you have got to keep it out of Plan? ಎನ್ನತಕ್ಕ ಮಾತನ್ನು ನಾವು ಇಟ್ಟಿದ್ದೇವೆ. ಅವರು ಇದು ಹೊಸ ವಿಚಾರಧಾರೆ ಎಂದು ಹೇಳಿದರು ಇದು ಹೊಸದೇನೂ ಅಲ್ಲ, ನೀವು ಡಿಸ್‌ಪ್ಯೂಟ್ ಹೆಸರಿನಲ್ಲಿ ಇದನ್ನು ಪ್ಲಾನಿಂಗ್ ತರುತ್ತಾ ಇಲ್ಲ. ಇದು ರಾಷ್ಟ್ರೀಯ ಸಂಪತ್ತು. ಒಂದು ಯೋಜನೆಗೆ ಹಣ ಏನಾದರೂ ಕೊಟ್ಟರೆ, ತಮಿಳುನಾಡಿಗೂ 40ರವರೆಗೆ ಕೊಡಿ, ನಮಗೂ ಕೊಡಿ. ಮುಖ್ಯ ಮಂತ್ರಿಗಳ ಸಭೆಯಲ್ಲಿ ನನ್ನ ಪಕ್ಕದಲ್ಲೇ ತಮಿಳುನಾಡಿನ ಮುಖ್ಯಮಂತ್ರಿಗಳು ಕುಳಿತಿರತಕ್ಕಂಥ ಸಂದರ್ಭದಲ್ಲಿ ನಾನು ಇದನ್ನು ಪ್ರಸ್ತಾಪ ಮಾಡಿದೆ. ಪ್ರಧಾನ ಮಂತ್ರಿ ಚಂದ್ರಶೇಖರ್‌ರವರೂ ಇದ್ದರು. ಆ ಸಂದರ್ಭದಲ್ಲಿ, 40 ಪ್ಲಸ್ 40, ಒಟ್ಟು 80 ಟಿ.ಎಂ.ಸಿ. ಬಗ್ಗೆ ಯಾರದೂ ಜಗಳ ಇಲ್ಲ. ನಾವಿಬ್ಬರೂ ಸೇರಿ 80ರವರೆಗೆ ಹಣ ಕೊಡತಕ್ಕಂಥ ವಿಚಾರ ಮಾಡೋಣ. ಇನ್ನು 20 ಟಿ.ಎಂ.ಸಿ. ಬಗ್ಗೆ ಜಗಳ ಮಾಡಿಕೊಳ್ಳೋಣ. ಅಲ್ಲಿಯವರೆಗೆ ಪ್ಲಾನಿಂಗ್‌ನವರು ಯೋಜನಾ ಗಾತ್ರದ ಅಡಿಯಲ್ಲಿ ಏಕೆ ತರುತ್ತಾ ಇಲ್ಲ, ಹಣವನ್ನು ಏಕೆ ಅಲೋಕೇಟ್ ಮಾಡುತ್ತಾ ಇಲ್ಲ. ನೀವು ಮಾಡದೇ ಇರುವುದಕ್ಕೆ ಕಾರಣ ಏನು? ಎನ್ನುವ ಮಾತನ್ನು ನಾವು ಅಲ್ಲಿ ಪ್ರತಿಪಾದನೆ ಮಾಡಿ ಕೇಳಿದ್ದೇನೆ. ಯೋಜನಾ ಆಯೋಗದ ಉಪಾಧ್ಯಕ್ಷರೂ ನೇರವಾಗಿ ಒಪ್ಪಿಕೊಂಡರು. All the members were present.

ನಮ್ಮ ಆಫೀಸರು, ನಮ್ಮ ಟೀಮ್ of Officers ಹೋದಾಗ ಈ ವಿಚಾರವನ್ನು ಪ್ರತಿಪಾದನೆ ಮಾಡಿದಾಗ, ಎಲ್ಲರೂ ಒಪ್ಪಿಕೊಂಡರು. 20 ನೀವು ಕೊಡುವುದು ಬೇಡ, ಅದು ತೀರ್ಮಾನವಾಗಿ ಯಾರು ಯಾರಿಗೆ ನೀರು ಹೋಗುತ್ತದೋ ಅವರಿಗೆ ಹೋಗಲಿ. ಅಲ್ಲಿಯವರಿಗೆ ನೀವು ಹಣ ಕೊಡುವುದಿಲ್ಲ ಎಂದು ಹೇಳುವುದಕ್ಕೆ ಹಕ್ಕು ಇಲ್ಲ ಎನ್ನತಕ್ಕ ಮಾತನ್ನು ಒಪ್ಪಿಕೊಂಡರು. ಕೊನೆಗೆ, ಇದು ಎನ್.ಡಿ.ಸಿ. ಮುಂದೆ ತೀರ್ಮಾನ ಆಗಬೇಕೆಂದು ಒಂದು ಮಾತಲ್ಲಿ ಹೇಳಿದರು.

ಅದೇ ಬಂದಿರುವುದು ನಮಗೆ ಈಗ. ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ತರುವ ಹಾಗೆ ಇದ್ದರೆ ಎನ್.ಡಿ.ಸಿ. ಮುಂದೆ ತೀರ್ಮಾನವಾಗಬೇಕಾಗಿರುವ ಇಂತಹ ಅನೇಕ ವಿಚಾರಗಳು ಇವೆ. ಮಾರ್ಕೆಟ್ ಬಾರೋಯಿಂಗ್, ನೆಗೋಷಿಯೇಟೆಡ್ ಲೋನ್ಸ್, ಇರಿಗೇಷನ್ ಬಾಂಡ್ಸ್, ಪವರ್ ಬಾಂಡ್ಸ್ ಇಂತಹ ಇಪ್ಪತ್ತೆಂಟು ವಿಚಾರಗಳು ಎನ್.ಡಿ.ಸಿ. ಮುಂದೇ ಸೇರಬೇಕು. ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದ ಕಾಲದಲ್ಲಿ ಎನ್.ಡಿ.ಸಿ. ಬೆಂಗಳೂರಿನಲ್ಲಿ ನಡೆಯಬೇಕೆಂದು ನಿಗದಿ ಆಗಿತ್ತು. ಮಾನ್ಯ ವೀರೇಂದ್ರ ಪಾಟೀಲ್‌ರವರು ಆಗ ಮುಖ್ಯಮಂತ್ರಿಗಳಾಗಿದ್ದರು. ಈ ಸದನವನ್ನು ಬಿಟ್ಟುಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೆವು. ಆದರೆ ರಾಜಕೀಯ ಬೆಳವಣಿಗೆಗಳ ದೃಷ್ಟಿಯಿಂದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆ ಮುಂದಕ್ಕೆ ಹೋಯಿತು. ಇದರಿಂದ ನಮ್ಮ ರಾಜ್ಯದ ಪ್ರಶ್ನೆ ಅಷ್ಟೆ ಅಲ್ಲ, ಅಖಂಡ ಭಾರತದ ಎಲ್ಲಾ ರಾಜ್ಯಗಳ ಪ್ರಶ್ನೆಯೂ ಹಾಗೆಯೇ ಇದೆ. ಇದಕ್ಕಾಗಿ 1991-92ನೇ ಸಾಲಿನಲ್ಲಿ ಎಲ್ಲಾ ಸೇರಿ

ದಂಡ ತೆರಬೇಕಾಗಿದೆ. ಆ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ನಾವು ಹೋದ ಸಲದ ಪ್ಲಾನ್ ಸೈಜ್ ಬಗ್ಗೆ ಮಾತನಾಡುತ್ತಿದ್ದೆವು. ಮುಂದೆ ಇದು ಎಷ್ಟಾಗುತ್ತದೆ ಎಂದು ನಾನು ಈಗ ಹೇಳಲಾರೆ ಎಂದು ಹೇಳುತ್ತೇನೆ. ಕಳೆದ ಸಾರಿ ಅಂದರೆ 1989-90ರ ಯೋಜನಾ ವರ್ಷಕ್ಕೆ ಹೋಗುವ ಅಗತ್ಯತೆ ಇಲ್ಲ, ನಾನು ಒಪ್ಪುತ್ತೇನೆ. ಇಲ್ಲಿ ,1989-90ರಲ್ಲಿರತಕ್ಕಂಥ ಪ್ಲಾನ್ ಸೈಜ್ 1040 ಕೋಟಿ. 1990-91ನೇ ಸಾಲಿನಲ್ಲಿ 1145 ಕೋಟಿ ಆಯಿತು. ರಿವೈಸ್ಡ್ ಪ್ಲಾನ್ ಸೈಜ್ 1990-91 ಈ ತಿಂಗಳಿಗೆ ಏನು ಮುಗಿಯುತ್ತದಲ್ಲ ಅದು, 1145 ಕೋಟಿ. ಇದು 10.1 ಪರ್ಸೆಂಟಿಗೆ ವರ್ಕ್‌ಔಟ್ ಆಗುತ್ತದೆ. 1991-92ಕ್ಕೆ 1510 ಕೋಟಿ ಏನು ನಿಗದಿ ಆಗಿದೆ ಅದು 36.1 ಪರ್ಸೆಂಟಿಗೆ ವರ್ಕ್‌ಔಟ್ ಆಗುತ್ತದೆ. ಒಂದೇ ಸಾರಿಗೆ ಸುಮಾರು 25-26 ಪರ್ಸೆಂಟ್ ಜಂಪ್ ಸಿಕ್ಕಿದೆ. For the first time in the History of Karnataka State ಪ್ಲಾನ್ ಸೈಜ್ ಈ ರೀತಿಯಾಗಿ ದೊಡ್ಡದಾಗಿದೆ. ಇದಕ್ಕೆ ಯೋಜನಾ ಆಯೋಗದವರು ಒಪ್ಪಿಗೆ ಕೊಟ್ಟಿದ್ದಾರೆ. ಬಹಳ ಸಂತೋಷ. ನಾವು ಇಡೀ ದಿವಸ ಅವರ ಹತ್ತಿರ ಚರ್ಚೆ ಮಾಡಿದಾಗ 25ರಷ್ಟು ಪರ್ಸೆಂಟ್ ಜಂಪ್ ಸಿಕ್ಕಿರತಕ್ಕಂಥಾದ್ದು ಬಹಳ ಸಂತೋಷದ ವಿಷಯ. ಅದಕ್ಕೆ ನಾವು ಹಲವಾರು ಇಲಾಖೆಗಳಿಗೆ those come under core sector like, Irrigation Power Generation, Industries etc.

ಅದು ಇಂಡಸ್ಟ್ರೀಸ್ ಇರಬಹುದು, ಮತ್ತೊಂದು ಇರಬಹುದು ಅದಕ್ಕೆಲ್ಲಾ ಹಣ ಜಾಸ್ತಿ ಇಟ್ಟಿದ್ದೇವೆ. ಇಡುವುದಕ್ಕೆ ಸಾಧ್ಯವಾಯಿತು. ಇದೇ ರೀತಿಯಾಗಿ ನಾನ್ ಪ್ಲಾನ್‌ನಲ್ಲೂ ಹಣ ಜಾಸ್ತಿ ಇಡುವುದಕ್ಕೆ ಸಾಧ್ಯವಾಗಿದೆ. ಪ್ಲಾನ್ ಸೈಜ್ ಜಾಸ್ತಿಯಾಗುವ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಕನಿಷ್ಟ ಪಕ್ಷ 1510 ಕೋಟಿಗೆ ನಮಗೆ ಏನು ಒಪ್ಪಿಗೆ ಕೊಟ್ಟಿದ್ದಾರೆ ಅದಕ್ಕಾಗಿ ಯೋಜನಾ ಆಯೋಗಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನಮಗೆ ಶೇಕಡ 25ರಷ್ಟು ಜಂಪ್ ಸಿಕ್ಕಿದೆ, ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಇದಕ್ಕಾಗಿ ನಾವು ಬಹಳ ಒಳ್ಳೆಯ ರೀತಿಯಲ್ಲಿ ನಮ್ಮ ಸಂಪನ್ಮೂಲಗಳನ್ನು ಹುಡುಕತಕ್ಕಂಥ ಸಂದರ್ಭದಲ್ಲಿ ನಾವು ಇರಬೇಕಾಗುತ್ತದೆ. ಪ್ಲಾನ್ ಸೈಜ್ ದೊಡ್ಡದು ಮಾಡಿಕೊಂಡು ಬರುವುದು ಬಹಳ ಸುಲಭ. ಅದಕ್ಕೆ ನಾವು ಸಂಪನ್ಮೂಲಗಳನ್ನು ಹುಡುಕದೇ ಇದ್ದರೆ, ಡೆಫಿಸಿಟ್ ಸಿಕ್ಕಾಬಟ್ಟೆ ಜಾಸ್ತಿಯಾಗಿ ಅದನ್ನು ತುಂಬಿಕೊಳ್ಳುವುದು ಕಷ್ಟವಾಗುತ್ತದೆ. ಅದಕ್ಕಾಗಿ ರಿಸೋರ್ಸಸ್ ಮೊಬಿಲೈಜೇಷನ್‌ಗೆ ಹೆಚ್ಚಾಗಿ ಗಮನ ಕೊಡಬೇಕಾದ ಸಂದರ್ಭ ಇದೆ. ಬಹಳ ಬ್ಯಾಲೆನ್ಸ್ ಆಗಿಹೋಗಬೇಕೆಂಬ ದೃಷ್ಟಿ, ವಿಚಾರ ಇಟ್ಟುಕೊಂಡು ಹೋಗಿದ್ದೇನೆ. Plan size ಅವರೇನೋ ಜಾಸ್ತಿ ಕೊಡುವುದಕ್ಕೆ ತಯಾರಾಗಿದ್ದಾರೆ. 1510 ಕೋಟಿ ಅಲ್ಲದೆ, ಇನ್ನೂ ಜಾಸ್ತಿ ಕೂಡ ಕೊಡುವುದಕ್ಕೆ ತಯಾರಾಗಿದ್ದಾರೆ. ನಾವು ಇಷ್ಟೆಲ್ಲಾ ಸಂಪನ್ಮೂಲ ಮಾಡಿಕೊಡುತ್ತೇವೆ ಎಂದರೆ they were ready but we are not prepared. ಏತಕ್ಕೆಂದರೆ ಡೆಫಿಸಿಟ್ ಸಿಕ್ಕಾಪಟ್ಟೆ ಜಾಸ್ತಿ ಮಾಡಿಕೊಂಡು, ಕೊರತೆ ಜಾಸ್ತಿಯಾಗಿ ಬಹಳ ದೊಡ್ಡ ಯೋಜನಾ ಗಾತ್ರ ಮಾಡಬೇಕೆಂದು ಹೋಗಿ ಅದು ಆಗದಿದ್ದರೆ ಅದರಿಂದ ಜನತೆಗೆ ನಂಬಿಕೆದ್ರೋಹ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಎಷ್ಟು ಬೇಕೋ ಅಷ್ಟು ಮಾಡಿದ್ದೇವೆ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. 1991-92ರಲ್ಲಿ ಸಂಪನ್ಮೂಲ ಕ್ರೋಢೀಕರಣ ಮಾಡುವುದಕ್ಕೆ ಎಷ್ಟು ಶಕ್ತಿ ಇದೆ ಅಷ್ಟಕ್ಕೆ ಮಾತ್ರ ಇದನ್ನು ಸೀಮಿತಗೊಳಿಸಬೇಕೆಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಹೇಳಿದ್ದಾರೆ.

ಸಮಾಜವಾದದ ಸಿದ್ಧಾಂತದ ಹಿನ್ನೆಲೆಯಲ್ಲಿ ಬಂದಂತಹದರಲ್ಲಿ ನಾನು ಒಬ್ಬನೇ ಅಲ್ಲ, ಶ್ರೀ ಚಂದ್ರೇಗೌಡರು ಇರಬಹುದು ಹಾಗೆಯೇ ಹಲವಾರು ಜನಗಳು ಇಲ್ಲಿ ಕುಳಿತುಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರು ಕೂಡ ಇದ್ದಾರೆ. ನಾವೆಲ್ಲಾ ಇಲ್ಲಿ ಬಂದಿದ್ದೇವೆ.

ನಿಜ ಸಿದ್ಧಾಂತದ ದೃಷ್ಟಿಯಲ್ಲಿ ನಾವೆಲ್ಲಾ ಬಂದಿದ್ದೇವೆ. ಸೈದ್ಧಾಂತಿಕವಾದ ವಿಚಾರಗಳು ಬಂದಾಗ ಅದು ನಂಬಿಕೆ ಪ್ರಶ್ನೆ ಪ್ರತಿಪಾದನೆ ಮಾಡತಕ್ಕಂಥಾದ್ದು ಸಕಾರಣಗಳು ಬಂದಾಗ ನಾವು ಮಾಡಿಕೊಳ್ಳಬೇಕಾಗುತ್ತದೆ. ಸಮಾಜವಾದ ಸಿದ್ಧಾಂತದಲ್ಲಿ ವಿಚಾರ ಬಂದಾಗ ಹಲವಾರು ಜನರು ಇದರ ಬಗ್ಗೆ ಬೇಕಾದಷ್ಟು ವ್ಯಾಖ್ಯಾನ ಮಾಡಿದ್ದಾರೆ. ಹೊತ್ತಿಗೆಗಳನ್ನು ಬರೆದಿಟ್ಟು ಹೋಗಿದ್ದಾರೆ. ಲೇಖನಗಳನ್ನು ಬರೆದಿಟ್ಟು ಹೋಗಿದ್ದಾರೆಂದು ಅಲ್ಲ. ವಿಚಾರಧಾರೆಗಳಿಗೆ ಕೊರತೆ ಇಲ್ಲ ಎಂದು ಅಲ್ಲ, ಆದರೆ ನನಗನಿಸುತ್ತದೆ. ಇತ್ತೀಚೆಗೆ ಆ ಚರ್ಚೆ ಕೂಡಾ ಕಡಿಮೆಯಾಗುತ್ತಿದೆ. ಇದು ನನಗೆ ಖೇದವಾಗತಕ್ಕಂಥ ವಿಚಾರ. ಮನಸ್ಸಿಗೆ ಸಮಾಧಾನ ತರುತ್ತಿಲ್ಲ. ಹಿಂದೆ ನಾವು ಎಲ್ಲ ಬಹಳ ಚರ್ಚೆ ಮಾಡಿದ್ದೇವೆ. ಅದರಿಂದ ಎಷ್ಟು ಉಪಯೋಗವಾಗಿದೆ ಎನ್ನತಕ್ಕದ್ದು ಬೇರೆ. ಆದರೆ ಈಗ ಆ ಚರ್ಚೆ ನಿಂತು ಹೋಗಿದೆಯಲ್ಲ ಎನ್ನತಕ್ಕಂಥ ಅಂಶ ನನ್ನ ಮನಸ್ಸಿಗೆ ತುಂಬಾ ನೋವು ತರುತ್ತದೆ. ಹಿಂದೆ ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ನಡೆದಂಥಹ ಕಾಲದಲ್ಲಿ ಸಮಾಜವಾದ ಸಿದ್ಧಾಂತದ ಬಗ್ಗೆ ಗಂಟೆಗಟ್ಟಲೆ ಚರ್ಚೆ ನಡೆದಿದೆ. ಅದು ರೆಕಾರ್ಡ್‌ನಲ್ಲಿದೆ. ಸಮಾಜವಾದ ಸಿದ್ಧಾಂತದಲ್ಲಿ ಬಂಗಾರಪ್ಪನವರ ಹಿನ್ನೆಲೆ, ಶ್ರೀಮಾನ್ ಚಂದ್ರೇಗೌಡರ ಹಿನ್ನೆಲೆ, ಮತ್ತೊಬ್ಬರ ಹಿನ್ನೆಲೆ ಏನು ಎನ್ನುವುದನ್ನು ಬಿಟ್ಟರೆ ಬೇರೆ ಯಾರೂ ಇದರ ಬಗ್ಗೆ ಚರ್ಚೆ ಆಗುತ್ತಿಲ್ಲ. ಅದಕ್ಕೆ ಈಗಿನ ಪೀಳಿಗೆ ಏನೋ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರ ಬಗ್ಗೆ ಹೇಳಬೇಕೆಂದು ಅಲ್ಲ. ಜನಸಾಮಾನ್ಯರ ಬಗ್ಗೆ ಹೇಳಬೇಕೆಂದು ಅಲ್ಲ, ಸಮಾಜವಾದ ಸಿದ್ಧಾಂತದ ಬಗ್ಗೆ ತಾತ್ವಿಕ ವಿಚಾರಧಾರೆಗಳ ಬಗ್ಗೆ ಸೈದ್ಧಾಂತಿಕ ವಿಚಾರಧಾರೆಗಳ ಬಗ್ಗೆ ಕಾರ್ಯಕ್ರಮಗಳ ಬಗ್ಗೆ ಚಿಂತನಾ ಕಾರ್ಯಕ್ರಮಗಳಿಗೆ ರೂಪಣೆ ಕೊಡತಕ್ಕಂಥ ಅದಕ್ಕೊಂದು ಚೌಕಟ್ಟು ಕೊಟ್ಟು ಮಾತನಾಡತಕ್ಕಂಥಾದ್ದು ಕೂಡ ಇತ್ತೀಚಿನ ದಿವಸಗಳಲ್ಲಿ ಬಹಳ ಕೊರತೆ ಬಿದ್ದಿರತಕ್ಕಂಥಾದ್ದು ಎಲ್ಲರ ಮನಸ್ಸಿಗೆ ಖೇದ ತಂದಿದೆ. ನನಗನಿಸುತ್ತದೆ ಈ ಸದನದಲ್ಲಿ ಸೈದ್ಧಾಂತಿಕ ವಿಚಾರಧಾರೆಗಳ ಬಗ್ಗೆ ಚರ್ಚೆ ಇಟ್ಟರೆ ಮತ್ತೊಂದು ಸಾರಿ ಏನಾದರೂ ಅದು ಚಿಂತನೆ ಮರುಕಳಿಸುತ್ತದೆಯೋ ಏನೋ ಎನ್ನುವ ಆಸೆ. ಅದನ್ನು ತಮಗೆ ಬಿಟ್ಟಿದ್ದೇನೆ. ಈ ಸದನಕ್ಕೆ ಬಿಟ್ಟಿದ್ದೇನೆ. ನಾನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದೆ.

ಸಿದ್ಧಾಂತಗಳ ಮೇಲೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಲ್ಲಿ ಸ್ಪಷ್ಟವಾದ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತನ್ನ ಗತಿಯನ್ನು ಗುರುತು ಮಾಡಿ ಅದು ಹೋದಾಗ ಅದರಿಂದ ಪ್ರತಿಫಲ ಪ್ರಮಾಣದ ದೃಷ್ಟಿಯಿಂದ, ಜನಸಾಮಾನ್ಯರ ದೃಷ್ಟಿಯಿಂದ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಅದು ಬಹುದೂರ ಸಹಾಯ ಮಾಡುತ್ತದೆ ಎನ್ನುವ ನಂಬಿಕೆ ನನ್ನದು. ಇದನ್ನು ನಾನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿದೆ. ಅದು ಬಿಟ್ಟರೆ ಬೇರೇನೂ ಇಲ್ಲ. ಆ ಕಾಲದಲ್ಲಿ ನಾವು ಕುಳಿತುಕೊಂಡಿದ್ದಾಗ ಮಾನ್ಯ ಅಧ್ಯಕ್ಷರು ಆ ಕಡೆ ಇದ್ದರು. ಆ ಕಾಲದಲ್ಲಿ ಎಂತೆಂತಹ ಗಂಭೀರವಾದ ವಿಷಯಗಳು ಚರ್ಚೆಗೆ ಬರುತ್ತಿದ್ದವು. ಮಾನ್ಯ ಕೆ.ಎಚ್.ಪಾಟೀಲರು ಕೂಡ ಆ ಕಡೆ ಇದ್ದರು. ಆ ಸಂದರ್ಭದಲ್ಲಿ ಅಲ್ಲಿ ಕುಳಿತುಕೊಂಡಿದ್ದಾಗ 1967ನೇ ಇಸವಿಯಿಂದ ನನ್ನ ಅನುಭವದಲ್ಲಿ ಹೇಳುವುದಾದರೆ ಎಂತೆಂಥ ಬಿರುಸುಬಾಣಗಳು ಇಲ್ಲಿ ನಡೆಯುತ್ತಿದ್ದುವು, ಚರ್ಚೆಗಳು ನಡೆಯುತ್ತಿದ್ದವು. ಈಗ ಅದರ ಸಂಪರ್ಕ ಬಹು ಕಡಿದು ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳುವುದು ಬಿಟ್ಟರೆ ನನಗೆ ಏನೂ ಉಳಿದಿಲ್ಲ ತಮಗೂ ಉಳಿದಿಲ್ಲ ಮತ್ತು ನಮಗೂ ಏನೂ ಉಳಿದಿಲ್ಲ.

ಅಧ್ಯಕ್ಷರು : ಅದಕ್ಕೂ ಕೂಡ ದುಷ್ಕಾಲ ಬಂದಿದೆ.

ಶ್ರೀ ಎಸ್. ಬಂಗಾರಪ್ಪ : ಅದಕ್ಕೂ ದುಷ್ಕಾಲ ಬಂದಿದೆ. ಬರಗಾಲ ಬಂದಂತೆ.

ಶ್ರೀ ವಾಟಾಳ್ ನಾಗರಾಜ್: ಸದಸ್ಯರು ಸಭೆಯಲ್ಲಿ ಕುಳಿತುಕೊಳ್ಳುವುದೇ ಕಷ್ಟವಾಗಿದೆ. ಇನ್ನು ಸಿದ್ಧಾಂತಗಳ ಬಗ್ಗೆ ಮಾತನಾಡುವುದು ಆಮೇಲೆ ನೋಡೋಣ. ಸದಸ್ಯರು ಬಂದು ಕುಳಿತುಕೊಂಡರೆ ಸಾಕಾಗಿದೆ.

ಶ್ರೀ. ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ನಾನು ಒಂದು ವಿಚಾರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು ವರ್ಷದಿಂದ ವರ್ಷಕ್ಕೆ ನಾವು ಇವತ್ತು ಎಷ್ಟು ಜಾಸ್ತಿ ಸಾಲದ ಹೊರೆ ಮಾಡಿಕೊಂಡು ಹೋಗುತ್ತಿದ್ದೇವೆ. ಇವತ್ತು ನಾವು ಸಾಲ ತೀರಿಸಿ ನಮ್ಮ ಆರ್ಥಿಕ ಅಭಿವೃದ್ಧಿಗೆ ಗಮನ ಕೊಡಬೇಕಾಗಿದೆ ಬೇರೆ ದಾರಿ ಉಳಿದಿಲ್ಲ. ಮಾನ್ಯ ಅಧ್ಯಕ್ಷರೇ, 31.3.1990ರಿಂದ ಇಲ್ಲಿಯವರೆಗೆ the total debt of the State is Rs. 4246.25 crores.

The debt repayment during 1989-90 – Rs. 604.90 crores. In 1990-91, the debt repayment was Rs.596.56 crores and in 1991-92 of Rs. 724.93 crores. ನಮ್ಮ ಪರಿಸ್ಥಿತಿ ಇದು. ಸಾಲ ಹೇಗೆ ಆಯಿತು. ಏನಾಯಿತು ಎನ್ನುವ ವಿಚಾರಕ್ಕೆ ತಾವು ಕೂಡ ಹೇಳಿದ್ದೀರಿ. ನಾವು ಕೂಡ ಹೇಳಿದ್ದೇವೆ. ನಾನು ಇದನ್ನು ಯಾರ ಮೇಲಾದರೂ ತಪ್ಪು ಹೊರಿಸುವುದಕ್ಕೆ ಹೇಳುತ್ತಿಲ್ಲ.

ಇದು ವಾಸ್ತವಾಂಶ. ನಮ್ಮ ಕರ್ನಾಟಕ ರಾಜ್ಯದ ಮೇಲಿರತಕ್ಕಂಥ ಸಾಲದ ಹೊರೆ. ಇವತ್ತು ಪ್ಲಾನ್ ಸೈಜ್‌ಜಾಸ್ತಿ ಮಾಡಿಕೊಂಡರೆ ರಿಸೋರ್ಸಸ್ ಮೊಬಲೈಸೇಷನ್ ನಾವೇನಾದರೂ ಮಾಡಿದರೆ ಇವತ್ತು ಸಾಲ ತೀರಿಸಿ ನೀರಾವರಿ ಅಭಿವೃದ್ಧಿ ಮಾಡಬೇಕು. ಸಾಲ ತೀರಿಸಿ ಜೊತೆ ಜೊತೆಗೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕು, ಸಾಲ ತೀರಿಸುವ ಜೊತೆಯಲ್ಲೇ, ವ್ಯವಸಾಯ ಕ್ಷೇತ್ರ, ಕೈಗಾರಿಕಾ ಕ್ಷೇತ್ರ ನಾವು ಅಭಿವೃದ್ಧಿ ಮಾಡಿಕೊಳ್ಳಬೇಕು. ಯೋಜನೇತರ ವೆಚ್ಚದಲ್ಲಿ ಇರತಕ್ಕಂಥ ಸೋಶಿಯಲ್ ವೆಲ್‌ಫೇರ್ ಇಲಾಖೆಗೆ ಸೇರಿರತಕ್ಕಂಥ ಕಾರ್ಯಕ್ರಮಗಳು ಇರಬಹುದು, ಬಡಬಗ್ಗರ ಕಾರ್ಯಕ್ರಮ ಇರಬಹುದು. ಇವೆಲ್ಲವನ್ನೂ ಹಾಕಿಕೊಂಡು ಈ ರೀತಿ ಹೋಗತಕ್ಕಂಥ ವಿಚಾರಧಾರೆಯನ್ನು ನಾವು ಇಟ್ಟುಕೊಂಡಿದ್ದೇವೆ. ಆದ್ದರಿಂದ ನಾವು ಸಾಲದ ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ಒಳ್ಳೆಯದು ಎನ್ನುವ ದೃಷ್ಟಿಯಿಂದ ಮೊಟ್ಟ ಮೊದಲನೆಯದಾಗಿ ಇದನ್ನು ಇಟ್ಟಿದ್ದೇನೆ. ಮತ್ತೊಂದು ವಿಚಾರ, ಸಾಲದ ಹೊರೆ ಜಾಸ್ತಿಯಾಗತಕ್ಕಂಥಾದ್ದಕ್ಕೆ ಏನು ಕಾರಣ ಎನ್ನತಕ್ಕಂಥಾದ್ದು, ನನ್ನ ಬಜೆಟ್ ಸ್ಪೀಚ್‌ನಲ್ಲೂ ಸಹಾ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯಲ್ಲಿ ಬಂದಿರತಕ್ಕಂಥ ಬಂಗಾರಪ್ಪನವರು ಅಥವಾ ವಿರೋಧಪಕ್ಷದ ನಾಯಕರು, ಅಥವಾ ಮತ್ತೊಬ್ಬರು ಇರಬಹುದು, ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಸಮಾಜವಾದಿ ಸಿದ್ಧಾಂತ ಬರೀ ಚರ್ಚೆಗೋಸ್ಕರ ಹುಟ್ಟಿದೆ ಎಂದು ಹೇಳಬಾರದು. ಜನಸಾಮಾನ್ಯರ ಹಿತದೃಷ್ಟಿಯಿಂದ ಅನುಕೂಲವಾಗಬೇಕೆಂದು ಚರ್ಚೆ ಮಾಡುತ್ತೇವೆಯೇ ವಿನಃ ಅದನ್ನು ಬಿಟ್ಟು ಇಲ್ಲಿ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಸಮಾಜವಾದಿ ಸಿದ್ಧಾಂತದ ಬಗ್ಗೆ ಪ್ರೊಫೆಸರ್ ನಂಜುಂಡಸ್ವಾಮಿಯವರು ಬೇಕಾದರೆ ಗಂಟೆಗಟ್ಟಲೆ ವ್ಯಾಖ್ಯಾನ ಮಾಡಬಲ್ಲರು. ಇವತ್ತು ಎಷ್ಟೇ ವ್ಯಾಖ್ಯಾನವನ್ನು ಅವರು ಮಾಡಿದರೂ, ನಾವು ಮಾಡಿದರೂ, ಯಾರೂ ಮಾಡಿದರೂ ಪರಿಸ್ಥಿತಿ ಸಂಪೂರ್ಣವಾಗಿ ಜನಸಾಮಾನ್ಯರಿಗೆ ಫಲ ಮುಟ್ಟಲಿ ಎನ್ನುವ ಉದ್ದೇಶದಿಂದ ಮಾಡುತ್ತೇವೆ. ಅದು ಬಿಟ್ಟು ನಾವು ಏನೂ ಮಾಡುತ್ತಿಲ್ಲ. ಏನಾದರೂ ಮಾಡಿ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ, ಒಂದು ಸಾರಿ ಸಮಾಜವಾದಿ ಸಿದ್ಧಾಂತದ ಬಗ್ಗೆ ಚರ್ಚೆ ಸದನದಲ್ಲಿ ನಡೆಯಲಿ ಎನ್ನುವ ಆಸೆಯಿಂದ ಇದನ್ನು ನಾನು ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದೇನೆ. ಒಂದು ಸಾರಿ ಮುಂದಿನ ಸಿಟಿಂಗ್‌ನಲ್ಲಾದರೂ ಈ ಚರ್ಚೆ ಬರಲಿ. ಆಮೇಲೆ ನಮ್ಮ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟಾರ್ ಎಂಟರ್‌ಪ್ರೈಸಸ್‌ಗಳು ಒಟ್ಟು 61 ಇವೆ. ಅವುಗಳಲ್ಲಿ the public sector enterprises making losses for continuously for the last 3 years i.e., 1987-88, 1988-89 and 1989-90 ಇವು ಎಷ್ಟಿವೆ ಎಂದರೆ (Ninteen)

19 ಇದ್ದಾವೆ. 61ರಲ್ಲಿ 19 ಕಳೆದ ಮೂರು ವರ್ಷದಲ್ಲಿ ಲಾಸ್ ಮಾಡುತ್ತಿವೆ. The public sector undertakings making profits continously for 3 years i.e., 1987-88, 1988-89 and 1989-90 - only 17. Then Sir, the public sector enterprises fluctuate between profits and losses in 1987-88, 1988-89 and 1989-90-25.

ಅಲ್ಪ ಸ್ವಲ್ಪ ಪ್ರಾಫಿಟ್ ಬರಬಹುದು, ಲಾಸ್ ಆಗಬಹುದು, ಇಂಥಾವು 25 ಇವೆ. ಅವು ತಲೆ ಎತ್ತಿ ನಿಲ್ಲುವುದಕ್ಕೆ ಶಕ್ತಿಯನ್ನು ತುಂಬಿ ನಾವು ಹೊಸ ಹೊಸ ರೀ-ಅಲೋಕೇಷನ್ ಎಷ್ಟೇ ಮಾಡಿದರೂ ಕೂಡಾ ಒಂದೊಂದು ಸಾರಿ ತಲೆ ಎತ್ತುತ್ತವೆ. ಮತ್ತೊಂದು ಸಾರಿ ತಲೆ ಕೆಳಗೆ ಹಾಕುತ್ತಿವೆ. ಅಂಥಾವು 25 ಇವೆ. ನಮ್ಮ ಮೇಲೆ ಹೆಚ್ಚಾಗಿ ಸಾಲ ಬರುವುದಕ್ಕೆ ಇವೆಲ್ಲಾ ಕಾರಣವಾಗಿವೆ. ಈಗ ಉದಾಹರಣೆಗೆ ಮೈಸೂರು ಸೋಪ್ಸ್ ಅಂಡ್ ಡಿಟರ್‌ಜೆಂಟ್ ಫ್ಯಾಕ್ಟರಿಯನ್ನೇ ತೆಗೆದುಕೊಳ್ಳೋಣ. ಸುಮಾರು 50-60 ಕೋಟಿ ರೂಪಾಯಿ ಸಾಲ ಎಷ್ಟೋ ವರ್ಷಗಳಿಂದ ಅದರ ತಲೆ ಮೇಲಿದೆ. ಇಂಥಾವು ಬಹಳ ಇವೆ. ಇದರಲ್ಲಿ 19 ತಲೆ ಎತ್ತುವ ಹಾಗೆಯೇ ಇಲ್ಲ. ಬಹಳ ವರ್ಷಗಳಿಂದ ಹಾಗೆ ಬಿದ್ದಿವೆ. ಇವತ್ತು ಅಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರ ಹಿತ ಅನುಸರಿಸಿ ನಾವು ಅದರ ಬಗ್ಗೆ ಏನಾದರೂ ಇತಿಶ್ರೀ ಹಾಡಬೇಕು, ಚರಮಗೀತೆ ಹಾಡಬೇಕು. ಇಲ್ಲದಿದ್ದರೆ ನಾವು ಎಲ್ಲಿಂದ ಇದಕ್ಕೆ ಹಣ ಕೊಡುವುದಕ್ಕಾಗುತ್ತದೆ? ತೆರಿಗೆದಾರರ ಹಣವನ್ನು ತೆಗೆದುಕೊಂಡು ಹೋಗಿ ಅದರ ಹೊಟ್ಟೆ ತುಂಬುವುದೆ?. ತಾವು ಕೂಡ ಮಂತ್ರಿ ಮಂಡಲದಲ್ಲಿದ್ದು ತೀರ್ಮಾನ ಮಾಡಿದ್ದೀರಿ. ಇದು ಪಕ್ಷ ಪಂಗಡದ ಪ್ರಶ್ನೆ ಅಲ್ಲ, ನಾನು ಬೇಧ ಮರೆತು ಮಾತನಾಡುತ್ತಿದ್ದೇನೆ. ಸಂಪೂರ್ಣವಾಗಿ ಹಣವನ್ನು ತೆಗೆದುಕೊಂಡು ಹೋಗಿ ಇವುಗಳನ್ನು ರೀಹೆಬೀಲಿಟೇಷನ್ ಮಾಡುವುದಕ್ಕೆ ಕೊಡುತ್ತೇವೆ. ಕೆಲವು ಸಾರಿ ನಾವು ಗ್ಯಾರಂಟಿ ಕೊಡುತ್ತೇವೆ. ಆ ಹಣವನ್ನು ತೀರಿಸುವುದಕ್ಕಾಗುವುದಿಲ್ಲ. ಇದನ್ನು ನಾನು ಹೃದಯಾಂತರಾಳದಿಂದ ಹೇಳತಕ್ಕ ಮಾತು. ಇದಕ್ಕೆ ಏನಾದರೂ ಮಾಡಿ ನಾವು ಅಂತಿಮವಾಗಿ ಇತಿಶ್ರೀ ಹಾಡಬೇಕು.

ಯಾವ ಯಾವ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಲಾಸ್‌ನಲ್ಲಿ ಇದೆ ಎಂದು ನಾನು ಆಗಲೇ ಹೇಳಿದ್ದೇನೆ. ಇವುಗಳಿಂದ ನಾವು ಮುಕ್ತರಾಗಬೇಕು, ನಾವು ಕೈ ತೊಳೆದುಕೊಳ್ಳುವುದು ಒಳ್ಳೆಯದು. ಇದು ನಮ್ಮ ಸರ್ಕಾರದ ವಿಚಾರಧಾರೆ. ಇಲ್ಲದಿದ್ದರೆ ಏನು ಆಗುತ್ತದೆ? ಆಲ್‌ರೈಟ್ ಬೇಡ ಎಂದು ಬಿಟ್ಟುಬಿಡೋಣ, ನನ್ನ ಆಕ್ಷೇಪಣೆ ಇಲ್ಲ, ಬಿಟ್ಟರೆ ಏನು ಮಾಡಬೇಕು? ಹಣ ತೆಗೆದುಕೊಂಡು ಹೋಗಿ ಮತ್ತು ಮತ್ತೂ ತುಂಬತಕ್ಕಂಥಹ ಒಂದು ಕೆಲಸ ಮಾಡಬೇಕು. ಹೊಟ್ಟೆ ತುಂಬುವಂತೆ ಮಾಡಬೇಕು. ಮಾಡಲು ಮತ್ತೆ ಸಾಲ ಮಾಡಲೇ ಬೇಕು. ತೆರಿಗೆದಾರರ ಹಣ ಅದು. ಹಣವನ್ನು ತಿರುಗಿ ಕೊಡುತ್ತೇವೆ ಎನ್ನತಕ್ಕ ಗ್ಯಾರಂಟಿ ಕೊಡತಕ್ಕ ಪರಿಸ್ಥಿತಿಯಲ್ಲಿ ಅವುಗಳು ಇಲ್ಲ, ಅದು ಬರುವ ಹಾಗೆಯೇ ಇಲ್ಲ. ಇವತ್ತು ಎಲ್ಲವನ್ನೂ ತೆಗೆದುಕೊಂಡು ಇಂಪ್ರೂವ್ ಮಾಡಬೇಕೆಂಬ ಅಭಿಪ್ರಾಯ ಅಲ್ಲ, ಯಾವುದಾದರೂ ಹೀಗೆ ಮಾಡುವುದಕ್ಕೆ ಬರುವುದಿದ್ದರೆ ಅದನ್ನು ಸರಿಪಡಿಸೋಣ. ನಾನು ಬೇಡ ಎನ್ನುವ ದೃಷ್ಟಿಯಿಂದ ಹೇಳಿಲ್ಲ. ಬರುವುದಿಲ್ಲ ಎನ್ನತಕ್ಕ ಅಭಿಪ್ರಾಯ ಬಂದರೆ ನಾವು ಕೈ ತೊಳೆದುಕೊಳ್ಳುವುದು ಬಹಳ ಒಳ್ಳೆಯದು. By disinvesting our money in such public sector undertakings, let us divert those money for definite programmes. ನಾವು ತೆಗೆದುಕೊಂಡು ಹೋಗಿ ಕಾಮನ್ ಪೂಲ್‌ಗೆ ಹಾಕಬೇಕೆಂದು ಹೇಳುವುದಿಲ್ಲ. ಈಗ ಉದಾಹರಣೆಗೆ ಕಾಟೇಜ್ ಇಂಡಸ್ಟ್ರೀಸ್ ಬಗ್ಗೆ ನಾವು ಮಾತನಾಡಿದ್ದೇವೆ. ಇವತ್ತು ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಮತ್ತು ಪ್ರೊಡಕ್ಷನ್ ಓರಿಯಂಟೆಡ್ ಎಂದು ಇದೆ. ನಾವು ಹಣವನ್ನು ಡೈವರ್ಟ್ ಮಾಡಬೇಕು. ಹಲವಾರು ಟ್ಯಾಕ್ಸ್‌ಗಳ ಮುಖಾಂತರ ಹಾಕತಕ್ಕಂಥದ್ದು. ಹಣವನ್ನು ತೆಗೆದುಕೊಂಡು ಹೋಗಿ ಇಲ್ಲಿ

ಹಾಕುತ್ತೇವೆ. ಅಡಿಷನಲ್ ರಿಸೋರ್ಸ್ ಬಗ್ಗೆ ಎಷ್ಟೋ ಎಂದು ಹೇಳುತ್ತೇವೆ. ಬರೀ ಹತ್ತು ಕೋಟಿ ರೂಪಾಯಿ ಚಿಲ್ಲರೆ ಬಿಟ್ಟು ಬಿಟ್ಟರೆ ನಾವು ಡೈರೆಕ್ಟ್ ಟ್ಯಾಕ್ಸ್‌ನ್ನು ಮುಟ್ಟುವುದಕ್ಕೆ ಹೋಗಿಲ್ಲ, ವಾಸ್ತವವಾಗಿ ನಾವು ಕನ್‌ಸಿಷನ್ ಕೊಟ್ಟಿದ್ದು ಮತ್ತೊಂದು ತಾವು ನೋಡಿ ಬಿಟ್ಟರೆ, "ನೀವು ಟ್ಯಾಕ್ಸ್ ಭಾರೀ ಹಾಕಿದ್ದೀರಿ ಎಂದು ಹೇಳತಕ್ಕ ಮಾತು ಏನಿದೆ, ಅಷ್ಟೂ ಆಗತಕ್ಕದ್ದಕ್ಕೆ ಈ ಬಜೆಟ್‌ನಲ್ಲಿ ಸ್ಕೋಪ್ ಇಲ್ಲ ಎಂದು ನಾನು ಭಾವನೆ ಮಾಡಿದ್ದೇನೆ. ಏಕೆಂದರೆ ಲಾಸ್ಟ್ ಇಯರ್ ಅಡಿಷನಲ್ ರಿಸೋರ್ಸ್ ಮೊಬಿಲೈಸೇಷನ್ 147 ಕೋಟಿ ರೂಪಾಯಿ ಇದೆ. ತಮಗೆ ಗೊತ್ತಿರುವ ಹಾಗೆ ಈ ಇಯರ್ ಎಂಡಿಂಗ್ ಅಂದರೆ 1991ಕ್ಕೆ 147 ಕೋಟಿ ರೂಪಾಯಿ ಇದೆ. It is hardly about Rs.10 crores. Concession about 6 and odd crores. ಉಳಿಯತಕ್ಕದ್ದು ಬರೇ 6ರಿಂದ 7ವರೆ ಕೋಟಿ ರೂಪಾಯಿಗಳು ಮಾತ್ರ. This is almost a taxless budget.

ಇವನ್ನು ನಾನು ಹೇಳಿದ್ದುದು ಅಲ್ಲ. ಹಲವಾರು ಪತ್ರಿಕೆಗಳು ಕೂಡ ಬರೆದಿದ್ದಾರೆ. ತಾವು ಕೂಡ ಅಭಿಪ್ರಾಯ ಪಟ್ಟಿದ್ದೀರಿ. ಆ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಅಭಿಪ್ರಾಯ ಪಟ್ಟು ಹೇಳಿದ್ದಾರೆ. ಅದರಲ್ಲಿ ಇಲ್ಲೆಲ್ಲಾ ಟ್ಯಾಕ್ಸ್ ಸ್ವಲ್ಪ ಜಾಸ್ತಿ ಅಥವಾ ಸ್ವಲ್ಪ ಕಡಿಮೆ ಎಂಬ ಭಾವನೆ ಇದೆ. ಏನಾದರೂ ಟ್ಯಾಕ್ಸನ್ನು ಅಜಸ್ಟ್‌ಮೆಂಟ್‌ಗೆ ಮಾಡಿದ್ದೇನೆಯೇ ವಿನಹ ಅದನ್ನು ಬಿಟ್ಟು ಬಿಟ್ಟರೆ ನಾವು ಹೆವಿ ಆಗಿ ಹಾಕುವುದಕ್ಕೆ ಹೋಗಿಲ್ಲ.

ಕೆಲವರು ಅನ್ನಬಹುದು, ಮುಂದೆ ಬರತಕ್ಕ ಚುನಾವಣೆಯ ದೃಷ್ಟಿಯಿಂದ ಈ ರೀತಿ ಮಾಡಿರಬಹುದು ಎಂದು. ಮಾನ್ಯ ಆಳ್ವರವರು ಅಭಿಪ್ರಾಯ ಪಟ್ಟಿರಬಹುದು. ಸಿಂಧ್ಯರವರು ಸಹ ಮೊದಲು ಅಭಿಪ್ರಾಯಪಟ್ಟರು. ಚುನಾವಣೆ ಇತ್ತು ಎನ್ನತಕ್ಕ ದೃಷ್ಟಿಯಿಂದ ತಾವು ಹೇಳಿದಿರಿ. ನನಗೆ ಗೊತ್ತಿರಲಿಲ್ಲ, ಚುನಾವಣೆ ಬರುತ್ತದೆಯೋ ಅಥವಾ ಇಲ್ಲವೋ ಎಂದು ನಮಗೆ ಗೊತ್ತಿರಲಿಲ್ಲ ಅಷ್ಟರೊಳಗೆ ನಾವು ಚುನಾವಣೆಯ ಸಿದ್ಧತೆಗಳನ್ನು ಮಾಡಿ ಇಟ್ಟಿದ್ದೆವು.

ಶ್ರೀ ವಾಟಾಳ್ ನಾಗರಾಜ್: ನಿಮಗೆ ಭವಿಷ್ಯ ಗೊತ್ತಿತ್ತು ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ: ಅದ್ದರಿಂದ ನೀವು ನೋಡಿ ಬಿಟ್ಟರೆ ನಿಮಗೇ ಗೊತ್ತಾಗುತ್ತದೆ. ಇದರಲ್ಲಿ ಕರ್ನಾಟಕ ರಾಜ್ಯದ ಜನತೆಯ ಮೇಲೆ ಹೊರೆ ಹಾಕುವುದಕ್ಕೆ ಇಲ್ಲಿ ನಾವು ಹೋಗಿಲ್ಲ ಎಂದು. ಈ ಪವರ್ ಟಿಲ್ಲರ್ಸ್ ಬಗ್ಗೆ ತಾವು ಭಾಷಣ ಮಾಡಿದ್ದು ನಾನು ನೋಡಿದೆ. ಬರೇ ಒಂದು ಲಕ್ಷ ರೂಪಾಯಿ ಬರುತ್ತದೆ ಇತ್ಯಾದಿ ಅದನ್ನು ಏಕೆ ಮುಟ್ಟುವುದಕ್ಕೆ ಹೋದಿರಿ ಎಂಬ ಅಭಿಪ್ರಾಯ. ಅದು ಸಣ್ಣ ಮತ್ತು ಅತಿ ಸಣ್ಣ ಫಾರ್ಮರ್ಸ್‌ಗೆ ಒಂದು ಲಕ್ಷ ರೂಪಾಯಿ ಬರತಕ್ಕದ್ದು ಹಾಗೆ ಎಂಬ ಅಭಿಪ್ರಾಯ ಇರಬಹುದು. ನಾನು ಒಂದೇ ಒಂದು ವಿಷಯ ಹೇಳುತ್ತೇನೆ. ಕರ್ನಾಟಕ ರಾಜ್ಯದ ರೈತರಿಗೆ ಸಂಬಂಧಪಟ್ಟ ವಿಚಾರದಲ್ಲಿ ಮೊನ್ನೆ ಕೂಡ ಅವರ ಜೊತೆ ಕುಳಿತುಕೊಂಡು ಮಾತನಾಡಿದ್ದೇವೆ. ಸುಮಾರು ಎರಡು ಎರಡೂವರೆ ಗಂಟೆಗಳಷ್ಟು ಕಾಲ ನಾವು ಮಾತುಕತೆ ಮಾಡಿದ್ದೇವೆ. ಬಹಳ ಸಂತೋಷ ವಾತಾವರಣದಲ್ಲಿ ಮಾತುಕತೆ ಮಾಡಿದ್ದೇವೆ. ಏಕೆಂದರೆ ಅಭಿಪ್ರಾಯವನ್ನು ಯಾವಾಗಲೂ ವಿನಿಮಯ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಅಗ್ರಿಕಲ್ಚರಲ್ ಸೊಸೈಟಿ ಹೆಚ್ಚು ಆಗಿದೆ. 75-76 ಪರ್ಸೆಂಟಿಗೆ ಮೇಲ್ಪಟ್ಟು ಇದೆ. ಈ ರೈತರನ್ನು ಬಿಟ್ಟು ನಮ್ಮ ಸರ್ಕಾರ ಯಾವುದೇ ವಿಚಾರ ಮಾತನಾಡುವುದಕ್ಕೆ ತಯಾರಿಲ್ಲ, ತಾವು ಕೂಡ ಮಾತನಾಡುವುದಕ್ಕೆ ತಯಾರು ಇಲ್ಲ. ಹಲವಾರು ಬೇಡಿಕೆಗಳನ್ನು ತಾವು ಇಟ್ಟಿದ್ದೀರಿ. ಬೇರೆಯವರು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಸರ್ಕಾರಕ್ಕೆ ಕೂಡ ಗೊತ್ತಿದೆ. ಇವೆಲ್ಲ ವಿಚಾರದ ಬಗ್ಗೆ ನಮಗೆ ಗೊತ್ತಿದೆ. ಅವರು ಬೇಡಿಕೆಗಳನ್ನು ಕೇಳುವುದಕ್ಕಿಂತ ಮುಂಚೆ ಮೊದಲೇ

ನಾವು ಕೆಲವು ತೀರ್ಮಾನ ಮಾಡಿದ್ದೇವೆ. ಇನ್ನು ಕೆಲವು ಬೇಡಿಕೆಗಳನ್ನು ಅವರು ಇಟ್ಟಿದ್ದಾರೆ. ತಪ್ಪಲ್ಲ. ಅದು ತಪ್ಪು ಎನ್ನತಕ್ಕ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಈ ವಿಚಾರದಲ್ಲಿ ಸಂಪೂರ್ಣವಾಗಿ, ಕೂಲಂಕುಷವಾಗಿ ನಾವು ತೀರ್ಮಾನ ಮಾಡಿ ಕೆಲವು ವಿಚಾರದಲ್ಲಿ ಕನ್‌ಸೇಷನ್ ಬಗ್ಗೆ ಕೂಡ ಹೇಳಿದ್ದೇವೆ. ನಿಜ ಹೇಳಬೇಕೆಂದರೆ ನಿಮ್ಮ ಬೇಡಿಕೆ ಅಲ್ಲ ಅಥವಾ ನಿಮ್ಮ ಬೇಡಿಕೆ ಇದೆಯೋ ಇಲ್ಲವೋ ನನಗೆ ನೆನಪು ಇಲ್ಲ, ಪವರ್ ಟಿಲ್ಲರ್ ವಿಚಾರದಲ್ಲಿ, I don't think that is there in these 26 demands .

ಪ್ರೊ. ಎಂ ಡಿ ನಂಜುಂಡಸ್ವಾಮಿ: ಬೇಡಿಕೆ ಇದೆ. ಟ್ರಾಕ್ಟರ್ ಬಗ್ಗೆ ಟಿಲ್ಲರ್ಸ್, ಟ್ರೈಲರ್ಸ್ ಬಗ್ಗೆ ಇದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ: ನಾವು ಸಹ ಡಿಮ್ಯಾಂಡ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ: ತಾವು ಕೂಡ ಡಿಮ್ಯಾಂಡ್ ಮಾಡಿದ್ದೀರಿ.

ಅದು ಒಂದು ಲಕ್ಷ ಚಿಲ್ಲರೆ ಎಷ್ಟೋ ಬರುತ್ತದೆ ಅದನ್ನು ವಿಚಾರ ಮಾಡೋಣ. ಅಂಥ ಹೊರೆ ಏನೂ ಅಗಲಾರದು, ಬಿಡಬೇಕೆಂದರೆ ಬಿಡೋಣ. ಆದರೆ ಇದು ಪವರ್ ಟಿಲ್ಲರ್‌ಗಳಿಗಾಗಿ ಮಾತ್ರ. ರೈತರಿಗೆ ಇದರಿಂದ ಹೆಚ್ಚಿನ ಹೊರೆ ಆಗದಿರಲಿ ಎಂಬ ಕಾರಣಕ್ಕಾಗಿ ಮಾತ್ರ ಆ ದೃಷ್ಟಿಯಿಂದ ಹೇಳಿತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟಿರತಕ್ಕಂಥ taxation measures ಬಿಲ್ ಅಮೆಂಡ್‌ಮೆಂಟ್ಸ್ ಮತ್ತೊಂದು ಬರುತ್ತದೆ. .....

ಶ್ರೀ ಡಿ.ಬಿ. ಚಂದ್ರೇಗೌಡ: ತಾವುಗಳು ಇದನ್ನು ಆಲೋಚನೆ ಮಾಡುತ್ತೇವೆ ಎಂದು ಹೇಳ ಬೇಡಿ. ಇದನ್ನು ಬಿಟ್ಟಿದ್ದೇವೆ ಎಂದು ಹೇಳಿಬಿಡಿ. ಮುಂದಕ್ಕೆ ಹೋಗ ಬಹುದು...

ಶ್ರೀ ಎಸ್. ಬಂಗಾರಪ್ಪ: ಆಯಿತು, ಸ್ವಾಮಿ ಬಿಟ್ಟಿದ್ದೇವೆ.

ಪ್ರೊ. ಎಂ.ಡಿ.ನಂಜುಂಡಸ್ವಾಮಿ: ಈ ರಿಯಾಯತಿ ಬರೀ ಟಿಲ್ಲರ್‌ಗಳಿಗೆ ಮಾತ್ರ ಏಕೆ? You try to say that power tiller is not a transport vehicle. Tractor is also not a transport vehicle. It is a tool of production.

ಶ್ರೀ ಎಸ್. ಬಂಗಾರಪ್ಪ: ಆ ಸಲಹೆಯನ್ನು ವಿಚಾರ ಮಾಡುತ್ತೇನೆ. ಇವೊತ್ತು ಮಾನ್ಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು, ಬಾಬಾಗೌಡ ಪಾಟೀಲರು, ಇನ್ನೂ ನೂರಾರು ಜನರು ಮೊನ್ನೆ ನಡೆದ ಒಂದು ಸಭೆಗೆ ಬಂದಿದ್ದರು. ಒಂದು ಸೌಹಾರ್ದಯುತ ವಾತಾವರಣದಲ್ಲಿ ಚರ್ಚೆ ಮಾಡಿದಂಥ ವಿಚಾರಗಳಲ್ಲಿ ಕೆಲವು ತಿದ್ದುಪಡಿಗಳನ್ನು ತರತಕ್ಕಂಥಾದ್ದು ಇದ್ದುದರಿಂದ ನಾವು ಆ ಬಗ್ಗೆ ವಿಚಾರ ಮಾಡಿದ್ದೇವೆ. ಇಲ್ಲಿ ಸದನ ಸೇರಿದ್ದರಿಂದ ಆ ಸಭೆಯಲ್ಲಿ ನಾವು ಸರಕಾರದ ವತಿಯಿಂದ ಬಾಯಿಬಿಡುವ ಪರಿಸ್ಥಿತಿಯಲ್ಲಿ ಇರಲಿಲ್ಲ, ಏನು ಹೇಳುವುದಿದ್ದರೂ ಅದನ್ನು ಸದನದಲ್ಲಿ ಹೇಳೋಣ ಎಂಬುದು ನಮ್ಮ ವಿಚಾರವಾಗಿತ್ತು. ನಾವು ಪ್ರತ್ಯೇಕವಾಗಿ ರೈತರುಗಳ ವಿಚಾರದಲ್ಲಿ ಸಾಲ ಮನ್ನಾದ ಬಗ್ಗೆಯೂ ಸೇರಿದಂತೆ 10 ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡತಕ್ಕಂಥ ವಿಚಾರವು ಏನಿದೆ, ಅದು ಸೇರಿದಂತೆ ಇನ್ನೂ ಹಲವಾರು ಬೇಡಿಕೆಗಳು ಏನಿದ್ದಾವೆ ಅವುಗಳನ್ನು ಮತ್ತು ಸದನದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು, ಉಪನಾಯಕರು, ಇತರ ಪಕ್ಷಗಳವರು ಎಲ್ಲರೂ ಏನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದೆಲ್ಲವನ್ನೂ ಸೇರಿಸಿ ಆ ಪ್ರತ್ಯೇಕವಾಗಿ ನಾನು ನಾಳೆ ನಾಡಿದ್ದರಲ್ಲಿ ನಾನು ಹೇಳಿಕೆಯನ್ನು ಕೊಡಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡಿದ್ದೇನೆ. ಆದುದರಿಂದ ಇವೊತ್ತು ಅದನ್ನು ಪ್ರಸ್ತಾಪಿಸುವುದಿಲ್ಲ ತಮ್ಮ ಅಪ್ಪಣೆ ಪಡೆದು ಅನಂತರ ಮಾತನಾಡುತ್ತೇನೆ. ಈ ಸಂದರ್ಭದಲ್ಲಿ ಅಕ್ಯುಮುಲೇಟೆಡ್ ಲಾಸ್ ಏನಿದೆಯಲ್ಲ ಈ

ವಿಚಾರದಲ್ಲಿ ನಾವು ಕೈತೊಳೆದುಕೊಳ್ಳತಕ್ಕದ್ದು ಬಹಳ ಒಳ್ಳೆಯದು. ಅದೇ ಹಣವನ್ನು ತೆಗೆದುಕೊಂಡು ನಾವು ಬೇರೆ ವಿಚಾರ ಮಾಡಬಹುದು. ಇವೊತ್ತು ಸೋಪ್ ಮಾಡತಕ್ಕಂಥಾದ್ದು ಸರ್ಕಾರದಲ್ಲಿ ಇರಬೇಕೆಂಬ ಒಂದು ಮಾತನ್ನು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಅಂಥ ಒಂದು ಅಭಿಪ್ರಾಯವು ಆ ಕಾಲದಲ್ಲಿ ಇತ್ತು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಸೋಪ್ ಮಾಡತಕ್ಕಂಥಾದ್ದು ಒಂದು ದೊಡ್ಡ ಇಂಡಸ್ಟ್ರಿ ಆಗಿತ್ತು. Aftar all soap making is a home industry now. ಬೇರೆ ಬೇರೆ ಖಾಸಗಿಯವರು ಕೂಡ ಈ ಇಂಡಸ್ಟ್ರೀಯನ್ನು ಮಾಡಿಕೊಂಡಿರಬಹುದು. ಈಗ ಸೋಪ್ ಇಂಡಸ್ಟ್ರೀಯು ಹೋಮ್ ಇಂಡಸ್ಟ್ರೀ ಆಗಿದೆ. ನಮ್ಮ ಶಿವಮೊಗ್ಗದಲ್ಲಿ ನಾಗಪ್ಪಶೆಟ್ಟಿಯವರು ಎಂದು ಒಬ್ಬ ಗಾಂಧಿವಾದಿಯವರು ಇದ್ದರು. ಅವರು ನ್ಯಾಶನಲ್ ಎಜುಕೇಶನ್ ಸೊಸೈಟಿ ವತಿಯಿಂದ ಈ ಒಂದು ಇಂಡಸ್ಟ್ರೀ ಮಾಡಿಸುತ್ತಾರೆ. ಇದೊಂದು ಆರ್ಗ್ಯುಮೆಂಟ್ ಎಂದು ನಾನು ಹೇಳುತ್ತಾ ಇದ್ದೇನೆ. ಅದು ಇರಬೇಕೆಂಬ ಒಂದು ಅಭಿಪ್ರಾಯವೂ ಇದೆ. ಅದರ ಬದಲು ನಮ್ಮ ಹಣವನ್ನು ಕಾಟೇಜ್ ಇಂಡಸ್ಟ್ರೀಸ್‌ಗೆ, ನೀರಾವರಿಗೆ, ಪವರ್ ಜನರೇಶನ್‌ಗೆ ಮುಂತಾದ ಕಡೆಗಳಿಗೆ ತೆಗೆದುಕೊಂಡು ಹೋಗಿ, ಅಭಿವೃದ್ಧಿಪಡಿಸಿ ಆ ಕಡೆಗೆ ಹೆಚ್ಚು ಗಮನವನ್ನು ಕೊಡುವುದು ಒಳ್ಳೆಯದೆಂದು ಆ ದೃಷ್ಟಿಯಿಂದ ಈ ಮಾತನ್ನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಇಂಥ ಸರಕಾರಿ ಸ್ವಾಮ್ಯದ ಉದ್ಯಮದಲ್ಲಿ ನಮಗೆ ಎಷ್ಟು ಹಣ ನಷ್ಟವಾಗುತ್ತಾ ಇದೆ. ಅಂದರೆ ನಾವು ಅದರಿಂದ ತಲೆ ಎತ್ತುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಆದುದರಿಂದ ನಾವು ಅಲ್ಲಿಂದ ಹಿಂದಕ್ಕೆ ಸರಿದುಕೊಳ್ಳುವುದು ಒಳ್ಳೆಯದು ಎಂದು ವಿಚಾರ ಮಾಡಬೇಕಾಗುತ್ತದೆ. ಪ್ರಾಫಿಟ್ ಮಾಡುವುದು ಎಂಪ್ಲಾಯ್‌ಮೆಂಟ್ ಕೊಡತಕ್ಕದ್ದಕ್ಕೂ, ಪ್ರೊಡಕ್ಟಿವ್ ಓರಿಯಂಟೇಶನ್ ಕಡೆಗೆ ನಾವು ಹೆಚ್ಚು ಗಮನ ಕೊಟ್ಟರೆ ಅದು ಜನಕ್ಕೆ ಅನುಕೂಲವಾಗುತ್ತದೆ ಮತ್ತು ಪರ್‌ಕ್ಯಾಪಿಟ ಇನ್‌ಕಂ ಕೂಡ ಜಾಸ್ತಿ ಆಗುವುದಕ್ಕೆ ಕಾರಣವಾಗುತ್ತದೆ. ಎಕನಾಮಿಕ್ ಗ್ರೋತ್‌ಗೂ ಕಾರಣವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸ್‌ನಲ್ಲೂ ಕೂಡ ಐ.ಎ.ಎಸ್. ಅಧಿಕಾರಿಗಳು ಇರತಕ್ಕಂಥಾದ್ದು, ತಾಂತ್ರಿಕವಾಗಿ ಅದನ್ನು ಬಿಟ್ಟು ತನಿಖೆ ಮಾಡಿಸಿ ಎಂದು ಹೇಳಿದ್ದೇನೆ...

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಅನೇಕ ಸದಸ್ಯರು ಮಾತನಾಡುತ್ತಾ ಆ ಸಂದರ್ಭದಲ್ಲಿ ಬೇಸಿಕ್ ಕಾನ್‌ಸೆಪ್ಟ್ ನಮಗೆ ಏನು ಇದೆ ಅದಕ್ಕೆ ವಿರುದ್ಧವಾಗಿ ನ್ಯಾಶನಲೈಸೇಶನ್.... ಈಗ ಖಾಸಗೀಕರಣದ ಬಗ್ಗೆ ಮಾತನಾಡುತ್ತಾ ಇದ್ದೀರಿ. ತಾವುಗಳು ಆ ಸಿದ್ಧಾಂತವನ್ನು ಹೇಳುತ್ತಾ ಇದ್ದೀರಿ. ಇದಕ್ಕೆ ಪ್ರಿಲ್ಯೂಡ್ ಪೀಠಿಕೆಯನ್ನು ಕೂಡ ಹಾಕಿದ್ದೀರಿ. ನಾನು ಏನು ವಿಚಾರಗಳನ್ನು ನಂಬಿದ್ದೆ ಅದರ ಬಗ್ಗೆ ಚರ್ಚೆಯಾಗುತ್ತಾ ಇಲ್ಲ. ಈಗ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ ನಮ್ಮ ಹಣವನ್ನು ತೆಗೆದುಕೊಂಡು ಹೋಗಿ ವ್ಯಯ ಮಾಡತಕ್ಕಂಥಾದ್ದು ಬೇಡ ಇದನ್ನು ಖಾಸಗೀಕರಣ ಮಾಡಬೇಕೆಂಬ ವಿಚಾರ ಇದ್ದಹಾಗೆ ಕಾಣುತ್ತದೆ. Let us have a house committee for that. You agree for that proposal. ತಾವು ಮಾತಾಡೋದು ನೋಡಿದರೆ ಇದೆಲ್ಲಾ ಸೂಚನೆಗಳು ಎಂಇಐ, ವಿಕ್ರಾಂತ್, ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ-ಇವುಗಳಲ್ಲೆಲ್ಲಾ ಸರ್ಕಾರದ ಹಣ ಬಹಳ ವ್ಯಯವಾಗುತ್ತಿದೆ. ಅದನ್ನು ಸಾರ್ವಜನಿಕರ ಹಿತಕ್ಕೆ ಉಪಯೋಗಿಸೋಣ ಅನ್ನುವುದಾದರೆ then you kindly agree for a house commitee. Let the house committee decide the modes.

ಡಾ. ಜೀವರಾಜ್ ಆಳ್ವ: ರಾಜಶೇಖರ ಮೂರ್ತಿಯವರು ಇಂಡಸ್ಟ್ರೀಸ್ ಮಿನಿಸ್ಟರಾಗಿದ್ದಾಗ ಒಂದು ಸಭೆಯ ಸಮಿತಿ ಮಾಡುತ್ತೇವೆಂದು ಒಪ್ಪಿಕೊಂಡಿದ್ದರು.

ಈಗ ಪೀಠಿಕೆ ಆಯ್ತು ಹೈ ಪವರ್ ಕಮಿಟಿ ಮಾಡ್ತೀವಂತ, ವಿಜಯನಗರ ಸ್ಟೀಲ್ ಪ್ಲಾಂಟ್‌ಗೆ ಯಾರನ್ನು ಹೈ ಪವರ್ ಕಮಿಟಿ ಮಾಡಿದರು? ಕೆ.ಎಸ್.ಆರ್.ಟಿ.ಸಿ. ಚಿಲ್ಲರೆ ಆಫೀಸರ್‌ನ್ನು ಚೇರ್‌ಮನ್ ಆಗಿ ಮಾಡಿದ್ದರು. To asses the strength of a multi-crore projectಗೆ ಮಾಡಿದರು ಮತ್ತು ಬ್ಯೂರೋ ಆಫ್ ಎಂಟರ್‌ಪ್ರೈಸಸ್‌ನಲ್ಲಿ ಯಾರು? ಆದ್ದರಿಂದ ನಿಮಗೆ ಆ ಭಾವನೆಗಳಿದ್ದರೆ ಹೌಸ್‌ಕಮಿಟಿ ಮಾಡಿ ಒಂದೊಂದು ಫ್ಯಾಕ್ಟರಿಗೂ ಹೋಗೋಣ ಮುಖ್ಯಮಂತ್ರಿಗಳವರ ಭಾವನೆಗಳು ಸರಿ ಎಂದು ನಾನು ಭಾವನೆ ಮಾಡ್ತೇನೆ ಅದರೆ ಅವು ನಿಜವಾಗಬೇಕಾದರೆ ಹೌಸ್‌ಕಮಿಟಿ ಆಗಬೇಕು ಮತ್ತು ಅದಕ್ಕೆ ಪೂರಕ ಉತ್ತರ ಈಗಲೇ ಕೊಟ್ಟರೆ ಸಂತೋಷ.

ಶ್ರೀ ವಾಟಾಳ್ ನಾಗರಾಜ್: ಈ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಬಂದದ್ದು ಕೆ.ಸಿ. ರೆಡ್ಡಿಯವರ ಕಾಲದಲ್ಲಿ ಇವಕ್ಕೆ ಒಂದು ಇತಿಹಾಸ, ಹಿನ್ನೆಲೆ ಇದೆ. ಮೈಸೂರು ಸಾಬೂನು ಎಂದರೆ ಏನೋ ಸಾಬೂನು ಎಂದಲ್ಲ, ಮೈಸೂರು ಸಾಬೂನು ಎಂದರೆ ವಿಶ್ವದಲ್ಲೇ ನಮ್ಮ ಮೈಸೂರಿನ ಹೆಸರು ಅತ್ಯಂತ ಪ್ರಚಾರವಾಗಿರುವ ಹಿನ್ನೆಲೆ ಇದೆ. ಕಾರ್ಖಾನೆಗಳನ್ನು ಕೊಟ್ಟುಬಿಡೊಣವೋ ಬಿಟ್ಟುಬಿಡೋಣವೋ ಎಂದು ಸಣ್ಣದಾಗಿ ಮಾತಾಡಿದ್ದೇವೆ. ಕೊನೆಗೆ, ಹೀಗೆ ಹೇಳಿ ಹೇಳಿ ಮಾರೇಬಿಡೋಣ ಎಂದು ಸಣ್ಣದಾಗಿ ಅಂತ ದೊಡ್ಡ ರಸ್ತೆಗೆ ತೆಗೆದುಕೊಂಡುಹೋಗಿ ಬೀಡ್ತಿವಿ. ಇದೆ ಸ್ನೇಹಿತರು ಹೇಳಿದ ಹಾಗೆ ಇದಕ್ಕೆ ಒಂದು ಸಮಿತಿ ಮಾಡಿ. ಈ ಕಾರ್ಖಾನೆಗಳಲ್ಲಿ ಏನೇನಾಗುತ್ತದೆ. ಯಾರಿಂದ ನಷ್ಟವಾಗ್ತಿದೆ.? 3600 ಟನ್ ಗಂಧದ ಮರವನ್ನು ಮಾರಕ್ಕೆ ಇಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಗಂಧದ ಕಾರ್ಖಾನೆ ನಷ್ಟದಲ್ಲಿದೆ ಎಂದು ಹೇಳುತ್ತಿದ್ದಾರೆ. ಒಂದಕೊಂದಕ್ಕೆ ತಾಳೆ ಇಲ್ಲ, ಯಾರೋ ತ್ಯಾಗ ಮಾಡಿ ದುಡಿದವರು ಕರ್ನಾಟಕಕ್ಕೆ ಕಾರ್ಖಾನೆ ತಂದಿದ್ದಾರೆ. ಇದಕ್ಕೆ ಇತಿಹಾಸ ಇದೆ. ಈಗ ಸಮಾಜವಾದದ ಸಿದ್ಧಾಂತದ ಬಗ್ಗೆ ಚರ್ಚೆ ನಡೆಸಬೇಕೆಂದು ಇದ್ದೀರಿ. ಈ ಚರ್ಚೆಗೂ ಕೃತಿಗೂ ಒಂದಕ್ಕೊಂದು ಸಂಬಂಧ ಬರುವುದಿಲ್ಲ. ತಮ್ಮ ಕಾಲದಲ್ಲಿ ಈ ತರಹ ಆಗಬಾರದು. ಈ ಕಾರ್ಖಾನೆಗಳನ್ನು ಏನು ಮಾಡಬೇಕು ಅಂತ ಒಂದು ಚಿಂತನೆ ನಡೆಯಲಿ, ಅದಕ್ಕೆ ಮೊದಲು ಹೋಲ್‌ಸೇಲಾಗಿ ಮಾಡುವ ಬಗ್ಗೆ ಯಾರೂ ಹೋಗಬಾರದು.

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಬಂಗಾರಪ್ಪನವರದು ರಾಷ್ಟ್ರೀಕರಣಕ್ಕಿಂತ ವ್ಯಕ್ತೀಕರಣ ಸಮಾಜವಾದಿ ಸಿದ್ಧಾಂಥ ಅಂತ ಹೇಳಬಹುದೇ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಇದು ಬಹಳ ಮುಖ್ಯವಾದ ವಿಷಯ. ರಾಷ್ಟ್ರೀಕರಣದಿಂದ ಖಾಸಗೀಕರಣಕ್ಕೆ ಬರುವ ಮಾತು ಪಡೆಯುತ್ತದೆ. ಈ ತೀರ್ಮಾನಕ್ಕೆ ಬರುವ ಮುಂಚೆ ನಾವು ಮಾಡಬೇಕಾದ ಪ್ರಾಮಾಣಿಕ ಪ್ರಯತ್ನ ಈ ರಾಷ್ಟ್ರೀಕರಣದಲ್ಲಿ ತಾತ್ವಿಕವಾದ ದೋಷಗಳಿವೆಯೇ ಎಂದು, ನಾವು ಪತ್ತೆಮಾಡುವ ಪ್ರಯತ್ನ ಮೊದಲು ನಾವು ಮಾಡಬೇಕು ಅಥವಾ ಸಾರ್ವಜನಿಕ ಉದ್ದಿಮೆಗಳಲ್ಲಿ ನಷ್ಟವಾಗಲು ಬೇರೆ ಏನಾದರೂ ಎಕ್ಸ್‌ಟ್ರಾ ಐಡಿಯಾಲಾರ್ಜಲ್ ರೀಜನ್ಸ್ ಇದೆಯೇ ಎಂದು ನೋಡಬೇಕು. ಇದಕ್ಕಾಗಿ ಹೌಸ್‌ಕಮಿಟಿಗೆ ರೆಫರ್ ಮಾಡಿ ಎಂದು ನಾನೂ ಏಕೆ ಒತ್ತಾಯ ಮಾಡುತ್ತೇನೆಂದರೆ ಹಲವಾರು ಸಾರ್ವಜನಿಕ ಉದ್ದಿಮೆ ಮುಚ್ಚಬೇಕೆಂದು ಯಾರು ಶಿಫಾರಸ್ಸು ಮಾಡಿದ್ದಾರೊ ಅವುಗಳ ನಷ್ಟಕ್ಕೂ ಕಾರಣ ಅವರೇ. ಇದು ನನ್ನ ಗಮನಕ್ಕೆ ಬಂದಿದೆ, ವಿವರವಾದ ಚರ್ಚೆ ಬಂದಾಗ ಸದನಕ್ಕೆ ತಿಳಿಸುತ್ತೇನೆ. ಆ ಕಾರಣದಿಂದ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ನಡೆಸಿ ಅನಂತರ ತಾತ್ವಿಕ ಬದಲಾವಣೆ ತೀರ್ಮಾನ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ನಷ್ಟ ಏತಕ್ಕೆ ಆಯಿತು? ಏನಾಯಿತು ಎನ್ನತಕ್ಕಂಥ ವಿಚಾರದಲ್ಲಿ ಈಗಾಗಲೇ ವರದಿಗಳು ಸಾಕಷ್ಟು ಪ್ರಮಾಣದಲ್ಲಿ ಒಂದೊಂದು ವಿಚಾರದ ಬಗ್ಗೆ ಇದ್ದಾವೆ. ಸದನದ ಸಮಿತಿಯನ್ನು ರಚನೆ ಮಾಡುವುದರ

ಮುಖೇನ ಎಷ್ಟು ನಷ್ಟವಾಗಿದೆ, ಇದನ್ನು ಅಂಕಿಅಂಶಗಳಿಂದ ನೋಡಬಹುದೇ ವಿನಹಾ ಏತಕ್ಕೆ ನಷ್ಟವಾಯಿತು ಎನ್ನತಕ್ಕಂಥದ್ದನ್ನು ನೋಡುವುದಕ್ಕೆ ಕೆಲವು ಟೆಕ್ನಿಕಲ್ ಆಸ್ಪೆಕ್ಟ್‌ಗಳು ಕೂಡ ಅದರಲ್ಲಿ ಬರುವುದರಿಂದ ಅದು ಸಾಧ್ಯವಾಗಲಾರದು, ಅದು ಅಷ್ಟು ಉಪಯೋಗವಾಗಲಾರದು. ಸರ್ಕಾರ ಅದಕ್ಕೆ ಒಪ್ಪಿಗೆಯನ್ನು ಕೊಟ್ಟರೂ ಕೂಡಾ ಅದರಿಂದ ಉಪಯೋಗವಾಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಈ ಸಲಹೆಯನ್ನು ನಾನು ಒಪ್ಪುತ್ತಿಲ್ಲ. ನಾವು ಕೂಡ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ, ಸಾರ್ವಜನಿಕ ವಲಯದಲ್ಲಿರತಕ್ಕಂಥ ಉದ್ಯಮಗಳು ಏನೇನು ಇದ್ದಾವೆ, ಅವುಗಳನ್ನು ತಲೆ ಎತ್ತದ ಹಾಗೆ ಮಾಡಬಹುದು, ಯಾವುದನ್ನು ಕೈಬಿಡಬಹುದು ಎನ್ನತಕ್ಕಂಥ ವಿಚಾರವನ್ನು ನಾವು ಉನ್ನತಮಟ್ಟದ ಸಮಿತಿಯನ್ನು ರಚನೆ ಮಾಡುತ್ತೇವೆ ಎನ್ನತಕ್ಕಂಥ ವಿಚಾರವನ್ನು ಈಗಾಗಲೇ ಸದನದಲ್ಲೂ ಕೂಡ ಪ್ರಸ್ತಾಪ ಮಾಡಿದ್ದೇವೆ. ಇದನ್ನು ನೇರವಾಗಿ ನಾವೇ ಹೋಗಿ ಮಾಡಬೇಕು ಎನ್ನುವ ಅಭಿಪ್ರಾಯವೇನೂ ಇಲ್ಲ. ನಾನು ಸಮಾಜವಾದಿ ಸಿದ್ಧಾಂತದ ವಿಚಾರವನ್ನು ಮಾತನಾಡಿ ಖಾಸಗೀಕರಣದ ವಿಚಾರವನ್ನು ಏತಕ್ಕೆ ಮಾತನಾಡುತ್ತಿದ್ದೇನೆಂದರೆ ಎಂದರೆ ಇದನ್ನು ಅನಿವಾರ್ಯತೆಯ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಸಮಾಜವಾದದ ನಂಬಿಕೆ ಮೊದಲ ಒಂದು ಭಾಗದ ಬಗ್ಗೆ ನನಗೆ ನಂಬಿಕೆ ಇದ್ದರೂ ಕೂಡ ವಾಸ್ತವಾಂಶದ ಆಧಾರದ ಮೇಲೆ ಅದು ಆಗುತ್ತಿಲ್ಲ ಎನ್ನತಕ್ಕಂಥ ಒಂದು ಕಾರಣದಿಂದ, ನೋವಿನಿಂದ ನಾನು ಮಾತನಾಡುತ್ತಿದ್ದೇನೆ. ಅದು ಬರುವ ಹಾಗೆ ಇಲ್ಲ. ಆರ್ಥಿಕ ಪರಿಸ್ಥಿತಿ ಅಥವಾ ಶಕ್ತಿಯ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಈ ಮಾತನ್ನು ಆಡಲೇಬೇಕಾಗುತ್ತದೆ. ನಾನು ಆ ದೃಷ್ಟಿಯಿಂದಲೇ ಹೇಳಿದ್ದೇನೆ. ಎಲ್ಲವನ್ನು ಕೂಡ ಸಾರ್ವಜನಿಕ ವಲಯದಲ್ಲಿಯೇ ಇಟ್ಟುಕೊಂಡು ಉದ್ಯಮಿಗಳೇ ಮುಂದೆ ಹೋಗಲಿ ಎಂದು ತಾವು ಯಾರಿಗೂ ಕೂಡಾ ಹೇಳಲಾರಿರಿ ಎಂದು ನಾನು ಭಾವಿಸಿದ್ದೇನೆ. ಇದರಲ್ಲಿ ಮಾಡಬೇಕು ಎಂದು ಹೇಳಿದರೆ ಸರ್ಕಾರದವರು ಒಪ್ಪಿಗೆ ಕೊಟ್ಟು ಮಾಡಿಕೊಂಡು ಹೋಗೋಣ. ಆದರೆ ಅಕ್ಯುಮ್ಯುಲೇಟೆಡ್ ಲಾಸಸ್ ವರ್ಷೇ, ವರ್ಷೇ ಅದು ಸಿಕ್ಕಾಪಟ್ಟೆ ಜಾಸ್ತಿಯಾಗುತ್ತಾ ಹೋಗುತ್ತಿದೆ. ಆ ದೃಷ್ಟಿಯಿಂದ ನಾನು ಹೇಳಿದ್ದೇನೆ. ಇವತ್ತು ಉದಾಹರಣೆಗೆ ಬಸ್‌ಗಳನ್ನು ಕೆಲವು ಮಾರ್ಗಗಳನ್ನು ಇನ್ನೂ ಕೂಡ ಖಾಸಗಿ ಕ್ಷೇತ್ರದಲ್ಲಿ ಇಟ್ಟಿದ್ದೇವೆ. ಅನೇಕ ಮಾರ್ಗಗಳನ್ನು ನಾವು ನಡೆಸುತ್ತಿದ್ದೇವೆ. ನಾವು ಹಸಿರು ಬಸ್‌ಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಮಾಡಿದ್ದೇವಲ್ಲಾ, ಅವುಗಳು ಚೆನ್ನಾಗಿಯೇ ಹೋಗುತ್ತಿದೆ. ವರದಿಗಳ ಪ್ರಕಾರ ಚೆನ್ನಾಗಿಯೇ ಹೋಗುತ್ತಿದೆ. ಇನ್ನು ಕೆಲವು ಕಡೆಗಳಲ್ಲಿ ಬಸ್‌ಗಳನ್ನು ಕೊಡುವುದಕ್ಕಾಗಿಲ್ಲ. ನಾವು ಎಲ್ಲಾ ರೋಡುಗಳನ್ನು ಸರಿ ಮಾಡಲಿಕ್ಕೆ ಆಗಿಲ್ಲ. ಕೆಲವು ಕಡೆ ರೋಡು ಸರಿ ಇದ್ದರೂ ಬಸ್‌ಗಳನ್ನು ಕೊಡಲಿಕ್ಕೆ ಆಗಿಲ್ಲ. ಅದಕ್ಕೋಸ್ಕರವೇ ಕೆಲವು ಮಾರ್ಗಗಳನ್ನು ನಾನು ಉದಾಹರಣೆಗೆ ಪ್ರಸ್ತಾಪ ಮಾಡಿದ್ದೇನೆ. ಮತ್ತೆ ತಾವು ಏನಾದರೂ ಸಲಹೆಯನ್ನು ಕೊಟ್ಟರೆ ಅದನ್ನು ಕೂಡಾ ಸರ್ಕಾರ ವಿಚಾರ ಮಾಡುತ್ತದೆ. ತಮಗೆ ಉದಾಹರಣೆಗೆ ಒಂದನ್ನು ಹೇಳುತ್ತೇನೆ. ಏನೋ ಬಸ್ಸನ್ನೇ ಓಡಿಸುವುದಕ್ಕೆ ತಮ್ಮಿಂದ ಆಗಿಲ್ಲ. ಏಕೆಂದರೆ ಅವರುಗಳು ಅರ್ಜಿಗಳನ್ನು ಕೊಡುತ್ತಿರುವುದು, ನಾವು ಬಸ್ಸನ್ನು ಕೊಡುತ್ತೇವೆ ಎಂದು ಹೇಳುತ್ತೇವೆ. ಆದರೆ ಬಸ್ಸನ್ನು ಕೊಡಲಿಕ್ಕೆ ಆಗದೇ ಇರುವಂಥದ್ದು ವಾಸ್ತವಾಂಶದ ದೃಷ್ಟಿಯಿಂದ. ಅದಕ್ಕೆ ನಾನು ಏನು ಹೇಳುತ್ತೇನೆ ಎಂದರೆ ಈಗ ಅವುಗಳನ್ನು ನಡೆಸುವುದಕ್ಕೆ ಕಾನೂನು ಪ್ರಕಾರ ಅವರಿಗೆ ಪರವಾನಿಗೆಯನ್ನು ಕೊಟ್ಟು ಹಣವನ್ನು ತೆಗೆದುಕೊಳ್ಳುವುದು ಮಾಡುವಂಥದ್ದನ್ನು ಮಾಡಿಕೊಳ್ಳಲಿ. ಇಲ್ಲದಿದ್ದರೆ ನಾವು ಆ ಮಾರ್ಗದಲ್ಲಿ ಬೆಳಿಗ್ಗೆ ಒಂದು ಬಸ್, ಮಧ್ಯಾಹ್ನ ಒಂದು ಬಸ್ ಸಾಯಂಕಾಲ ಒಂದು ಬಸ್ ಓಡಿಸುವ ಹಾಗಿದ್ದರೆ, ನಾನು ಹೇಳುವುದೇನೆಂದರೆ ಆ ರೋಡುಗಳನ್ನು ಹರಾಜು ಹಾಕುವುದು ಒಳ್ಳೆಯದು. ಇಲ್ಲದಿದ್ದರೆ ಟೆಂಡರನ್ನು ಓಪನ್ ಆಗಿ ಕರೆದು ಮಾಡಿಕೊಳ್ಳಬಹುದು. ಇದು ಒಂದು ಸಲಹೆ. ಇಲ್ಲದಿದ್ದರೆ ಜನರಿಗೆ ಸೌಲಭ್ಯಗಳನ್ನು ಕೊಡುವುದಕ್ಕೆ ಇಬ್ಬರಿಗೂ

ಸಾಧ್ಯವಾಗುವುದಿಲ್ಲ. ಅಂತಿಮವಾದಂಥ ತೀರ್ಮಾನವನ್ನೂ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಆಡಲಾರೆ. ಆದರೆ ಇದು ಖಾಸಗೀಕರಣದ ವಾದ ಎಂದು ಯಾರಾದರೂ ಹೇಳುವುದಾದರೆ ದಯಮಾಡಿ ಕ್ಷಮಿಸಬೇಕು. ಇದು ನಮಗೆ ಅನಿವಾರ್ಯವಾಗಿದೆ ಎನ್ನುವುದೇ ಒಂದು ಉತ್ತರ. ಇದು ಒಂದೇ ದೃಷ್ಟಿಯಿಂದ ಈ ರೀತಿಯಿಂದ ಮಾಡಿದ್ದೇವೆ. ಇಲ್ಲದಿದ್ದರೆ ಈ ವಿಚಾರವನ್ನು ಬಿಟ್ಟುಬಿಡಬೇಕು. ನಾವು ಬಸ್‌ಗಳನ್ನು ಜನರಿಗೆ ಕೊಡುವುದಕ್ಕಾಗುವುದಿಲ್ಲ. ಅವರು ಅರ್ಜಿಯನ್ನು ಕೊಡುವುದು ತಪ್ಪುವುದಿಲ್ಲ. ನಾವು ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳುವುದೂ ಕೂಡ ತಪ್ಪುವುದಿಲ್ಲ. ಅವರಿಗೆ ಸೌಲಭ್ಯವನ್ನು ಕೊಡುವುದಕ್ಕೂ ನಮ್ಮಿಂದ ಆಗುವುದಿಲ್ಲ. ಇದು ವಾಸ್ತವಾಂಶ ಈ ದೃಷ್ಟಿಯಿಂದ ಈ ಮಾತನ್ನು ಆಡಿದ್ದೇನೆ. ಕೆಲವು ಕಾರಣದಿಂದ ನಾವು ನಮ್ಮ ಹಣವನ್ನು ಅಲೋಕೇಟ್ ಮಾಡಬೇಕಾದರೆ, ಯಾವ ಯಾವ ಸೆಕ್ಟಾರ್‌ನಿಂದ ಅಂದರೆ ಅದರಲ್ಲಿಯೂ ಕೋರ್ ಸೆಕ್ಟಾರ್‌ಗೆ ನಾವು ಅಲೋಕೇಟ್ ಮಾಡಬೇಕಾದರೆ ಹೆಚ್ಚಿನ ಗಮನವನ್ನು ಕೊಡುತ್ತಾ ಬಂದಿದ್ದೇವೆ. This is the history of the State financial position. ಪೊಜಿಷನ್‌ನ್ನು ನೋಡಿಕೊಂಡು ಮಾಡುತ್ತಾ ನಾವು ಬಂದಿದ್ದೇವೆ. ಇಲ್ಲಿ ತಮ್ಮ ಗಮನವನ್ನು ಸೆಳೆಯಲಿಕ್ಕೆ ಬಯಸುವುದೇನೆಂದರೆ ಇರಿಗೇಷನ್‌ಗೆ 1989-90ರಲ್ಲಿ 209.40 ಕೋಟಿ ರೂಪಾಯಿಗಳನ್ನು ನಾವು ಒಟ್ಟು ಕೊಟ್ಟಿದ್ದೇವೆ. ಅಲ್ಲಿಗೆ ಇನ್ನೂ ಹತ್ತು ಕೋಟಿ ರೂಪಾಯಿ ಎಂದು ಇಟ್ಟುಕೊಂಡರೆ 1990-91ರಲ್ಲಿ ಅಂದರೆ ಈ ವರ್ಷದಲ್ಲಿ ಈ ತಿಂಗಳಿಗೆ ಅದು ಮುಕ್ತಾಯವಾಗುತ್ತದೆ, ಈಗ 212.33 ಲಕ್ಷ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ.

1991-92ಕ್ಕೆ ಅಂದರೆ ಮುಂದಿನ ಆರ್ಥಿಕ ವರ್ಷಕ್ಕೆ 247.13 ಕೋಟಿ ಜಾಸ್ತಿ ಮಾಡಿದ್ದೇವೆ. ಇಂಡಸ್ಟ್ರೀಸ್ ಅಂಡ್ ಮಿನರಲ್ಸ್‌ಗೆ 1989-90ರಲ್ಲಿ 70.95ಕೋಟಿ ಕೊಟ್ಟಿದ್ದೇವೆ. 1990-91ರಲ್ಲಿ 76.44 ಕೋಟಿ ಕೊಟ್ಟಿದ್ದೇವೆ. 1991-92ಕ್ಕೆ 96.67 ಕೋಟಿ ಕೊಟ್ಟಿದ್ದೇವೆ. ಸುಮಾರು 20 ಕೋಟಿ ರೂಪಾಯಿ ಜಾಸ್ತಿ ಮಾಡಿದ್ದೇವೆ. ಅಗ್ರಿಕಲ್ಚರ್ ಮತ್ತು ಅಲೈಡ್ ಸರ್ವಿಸ್‌ಗೆ 1989-90ರಲ್ಲಿ 79.31 ಕೋಟಿ ಕೊಟ್ಟಿದ್ದೇವೆ. 1990-91 ರಲ್ಲಿ 97.06 ಕೋಟಿ ಕೊಟ್ಟಿದ್ದೇವೆ. 1991-92ಕ್ಕೆ 154.99 ಕೋಟಿ ಕೊಟ್ಟಿದ್ದೇವೆ. ಪವರ್ ಎನರ್ಜಿ 1989-90ರಲ್ಲಿ 277.17 ಕೋಟಿ ಕೊಟ್ಟಿದ್ದೇವೆ. 1990-91ರಲ್ಲಿ 276 ಕೋಟಿ ಕೊಟ್ಟಿದ್ದೇವೆ. 1991-92ಕ್ಕೆ ಅದು 372.12 ಕೋಟಿಗೆ ಹೋಗಿದೆ. ಅಲ್ಲಿಗೆ 100 ಕೋಟಿ ರೂಪಾಯಿಯನ್ನು ಪವರ್ ಜನರೇಷನ್ನಿಗೆ ಹೆಚ್ಚಿನದಾದ ಆದ್ಯತೆಯನ್ನು ಕೊಟ್ಟಿದ್ದೇವೆ. ಇದು ನಾವು ಪ್ಲಾನ್ ಅಲೋಕೇಶನ್ ಮಾಡಿರತಕ್ಕ ವಿಚಾರ. ಪವರ್ ಜನರೇಶನ್ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಪಕ್ಷಾತೀತವಾಗಿ ನಾವು ಇದನ್ನು ಕಂಡಿದ್ದೇವೆ. Up to the certain point ಪವರ್ ಜನರೇಶನ್ನಿಗೆ ಪ್ರೈವೇಟ್ ಸೆಕ್ಟಾರ್ ನಾವು ಮಾಡದೆ ಇದ್ದರೆ. ಬಹಳ ತೊಂದರೆಯಾಗುತ್ತದೆ. ಪವರ್ ಇಲ್ಲದೆ ಇದ್ದರೆ ರೈತ ಬೆಳೆ ಬೆಳೆಯುವುದಿಲ್ಲ. ಇಂಡಸ್ಟ್ರೀಸ್ ಬೆಳೆಯುವುದಿಲ್ಲ. ಯಾವುದೂ ಬೆಳೆಯುವುದಿಲ್ಲ. ಪವರ್ ಇಲ್ಲ ಅಂದರೆ ಎಲ್ಲಾ ಹೊರಟುಹೋಗುತ್ತದೆ. ಈ ದೃಷ್ಟಿಯಿಂದ ಇಂಡಸ್ಟ್ರೀಸ್ ಸೆಕ್ಟಾರ್ ನೋಡಿದರೆ growth has to a stand still.

ಇಲ್ಲಿ ಪರ್ಸೆಂಟೇಜ್‌ನ್ನು ನೋಡಿದರೆ ತಾವು ಒಪ್ಪುತ್ತೀರೆಂದು ನಾನು ಭಾವಿಸಿದ್ದೇನೆ. ಕಾಳೀ ಜಲ ವಿದ್ಯುತ್ ಯೋಜನೆಯನ್ನು ಮುಗಿಸಿದರೂ ಪವರ್ ಕೊರತೆ ಬೀಳುತ್ತದೆ. ರಾಯಚೂರು ಥರ್ಮಲ್ ಯೋಜನೆಯನ್ನು ಮುಗಿಸಿದರೂ ನಮಗೆ ಕೊರತೆ ಬೀಳುತ್ತದೆ. ಸೂಪರ್ ಪವರ್ ಥರ್ಮಲ್ ಪ್ಲಾಂಟ್ ಅಟ್ ಮಂಗಳೂರು ಅದು ಸಧ್ಯಕ್ಕೆ ಬರುತ್ತಿದೆ. ಇದು ಕ್ಯಾಬಿನೆಟ್‌ನಲ್ಲಿ ಡಿಸಿಶನ್ ಆಗಬೇಕು. ಮೊನ್ನೆಯೂ ಕೂಡ ನಾನು ಫೋನ್ ಮುಖಂತಾರ ಈ ಬಗ್ಗೆ ಮಾತನಾಡಿದ್ದೇನೆ. Supar thermal power plant to be established at Mangalore with the financial assistance from U.S.S.R.,

ಅದು ಕೂಡ ಬರತಕ್ಕ ಸಂದರ್ಭ ಇದೆ. ತೋರಣಗಲ್ಲು ಮತ್ತು ಬೇರೆ ಬೇರೆ ಮುಖಾಂತರ ಬರುವುದನ್ನು ಮಾಡಬೇಕೆಂದು ಇದ್ದೇವೆ. ಯಲಹಂಕದಲ್ಲಿ ಸಿವಿಲ್ ವರ್ಕ್ಸ್ ನಡೆಯುತ್ತಿದೆ. ಅನಂತರ ಆಟೋಮ್ಯಾಟಿಕ್ ಪವರ್ ಜನರೇಶನ್ ಕೈಗಾ ಅಟ್ ಕಾರವಾರ್ ಅದೂ ಕೂಡ ಪ್ರಾರಂಭವಾಗಬೇಕು. ಶರಾವತಿ ಹೈಡ್ರೊ ಪ್ರಾಜೆಕ್ಟ್ ಇಲ್ಲ ನಮಗೆ ನೀರಿನಿಂದ ವಿದ್ಯುಚ್ಛಕ್ತಿ ಉತ್ಪಾದನೆಯಾಗತಕ್ಕದ್ದು. ಶರಾವತಿಯ ಬಗ್ಗೆ ಬಹಳ ದುಃಖದಿಂದ ಹೇಳತಕ್ಕ ಮಾತು. ತಳಕಲೆ ಹ್ಯಾಂಡ್ ಬಂದು emergency exit ಇಟ್ಟಿಲ್ಲ ಎನ್ನತಕ್ಕ ಒಂದು ಅಭಿಪ್ರಾಯವಿದೆ ಇದು ನನ್ನ ಅಭಿಪ್ರಾಯವಲ್ಲ. ಇಂಜನೀಯರ್ಸ್ ಈ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಆ ಡ್ಯಾಂಗೆ ಒಂದು ದೋರೆ ಇಟ್ಟಿಲ್ಲ ಅನ್ನತಕ್ಕ ಒಂದು ಅಪಾದನೆ ಇದೆ. ಅಲ್ಲಿ ನೀರು ಸಿಕ್ಕಾಪಟ್ಟೆ ಸೋರಿಕೆಯಾಗುತ್ತಿದೆ. ನಾನು, ಮಾನ್ಯ ಕಾಗೋಡು ತಿಮ್ಮಪ್ಪನವರು, ಇಂಜಿನಿಯರ್‌ಗಳು ಒಂದು ತಿಂಗಳ ಹಿಂದೆ ಅಲ್ಲಿಗೆ ಹೋಗಿ ಎರಡು ಗಂಟೆ ಸಮಯ ಕಳೆದಿದ್ದೇವೆ. ಮೇಲುಗಡೆ ಡ್ಯಾಂನಿಂದ ನೀರು ಸೋರಿಕೆಯಾಗುವ ಶಬ್ದ ಚೆನ್ನಾಗಿ ಕೇಳುತ್ತಿದೆ. ಅದಕ್ಕೆ ರಿಪೇರಿ ಮಾಡಲು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆ ಕೆಲಸ ಮಾಡಿಸಿದರೆ ಅದು 2-3 ತಿಂಗಳು ಇರುತ್ತದೆ. ಆಮೇಲೆ ಮತ್ತೆ ತೂತು ಬಿದ್ದು ಹೋಗುತ್ತದೆ. ಯಾವುದೋ ಫ್ರೆಂಚ್ ಫರ್ಮ್‌ನವರು ಅಥವಾ ಜರ್ಮನ್ ಫರ್ಮ್‌ನವರು ನೀರು ನಿಲ್ಲತಕ್ಕ ಮುಂದುಗಡೆ ಡ್ಯಾಂ ಭಾಗಕ್ಕೆ ಸ್ಟೀಲ್ ಶೀಟ್ ಹಾಕಿ ಅದನ್ನು ಮಾಡಿಬಿಟ್ಟರೆ ಬೆಸ್ಟ್ ಎಂದು ಮಾಡಿದರು. ಮತ್ತೊಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದನ್ನು ಮಾಡಿದರೂ ಕೆಳಗಡೆ ನೀರು ಬಂದುಬಿಡಬಹುದು ಎಂದು ಅನುಮಾನಕ್ಕೆ ಆಸ್ಪದ ಕೊಟ್ಟಿರತಕ್ಕ ವಿಚಾರವಾಗಿದೆ.

ಅದಕ್ಕೆ ನಾವು ಏನು ಮಾಡಿದ್ದೇವೆಂದರೆ ಈಗ ಪವರ್ ಜನರೇಷನ್‌ಗೆ 100 ಕೋಟಿ ರೂ.ಗಳು ಜಂಪ್ ಸಿಗಬೇಕೆಂದು ತಲೆಕೆಳಗೆ ಹ್ಯಾಂಗ್ ಹೊಸದಾಗಿ ಕಾಂಕ್ರೀಟ್ ಡ್ಯಾಮನ್ನು ಏತಕ್ಕೆ ಕಟ್ಟ ಬಾರದು. ಇಲ್ಲದಿದ್ದರೆ ಮಡ್ ನಿಂದ ದೊಡ್ಡ ಡ್ಯಾಮನ್ನು ಕಟ್ಟಿದರೆ ಬಹಳ ಉಪಯುಕ್ತವಾಗುತ್ತದೆ ಎನ್ನುವ ಅಭಿಪ್ರಾಯವಿದೆ. ಮಣ್ಣಿನಿಂದ ಹೊಸ ಡ್ಯಾಮನ್ನು ಕಟ್ಟಬೇಕು ಈಗಿರುವ ಡ್ಯಾಮ್ ಅಂತೂ ಉಳಿಯುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಈಗಿರುವ ಡ್ಯಾಮ್ ಏನಾದರೂ ಬರ್ಸ್ಟ್ ಅದರೆ, ಅದರಲ್ಲಿರುವಂಥ ಐದು ಟಿ.ಎಂ.ಸಿ. ನೀರಿನಿಂದ ಹೊನ್ನಾವರ ಟೌನ್ ಉಳಿಯುವುದಿಲ್ಲ. ಶರಾವತಿ ನೀರು ಸಮುದ್ರದತನಕ ಹೋಗುವವರೆಗೆ ಅಕ್ಕಪಕ್ಕ ಇರುವಂಥ ಅನೇಕ ಗ್ರಾಮಗಳಿಗೆ ತೊಂದರೆಯಾಗುತ್ತದೆ. ಹೀಗಾದರೆ, ಮತ್ತೊಮ್ಮೆ ನಾವು ಡ್ಯಾಂನ್ನು ಕಟ್ಟಿ ವಿದ್ಯುಚ್ಛಕ್ತಿ ರೆಡಿಯಾಗುವವರೆಗೆ ಶರಾವತಿ ಪ್ರಾಜೆಕ್ಟ್‌ನ್ನು ಸಂಪೂರ್ಣವಾಗಿ ಮುಚ್ಚಬೇಕಾಗುತ್ತದೆ. ಇದು ಅಪಾಯದ ಅಂಚಿನಲ್ಲಿದೆ. ಇದಕ್ಕೆ ಯಾರು ಕಾರಣರು ಎಂಬ ಚರಿತ್ರೆಯ ಅಧ್ಯಾಯಕ್ಕೆ ನಾನು ಹೋಗುತ್ತಿಲ್ಲ. ಸಧ್ಯ ನಾವು ಅದನ್ನು ಸರಿಪಡಿಸಬೇಕೆನ್ನುವ ದೃಷ್ಟಿಯಿಂದ ಚರ್ಚೆ ಮಾಡುತ್ತಿದ್ದೇವೆ. ನಾವು ಅಲ್ಲಿಗೆ ಹೋಗಿ ಬಂದಮೇಲೆ, ಕರ್ನಾಟಕ ಪವರ್ ಕಾರ್ಪೊರೇಷನ್‌ನವರ ಜೊತೆ ಕೂಡ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಇಂಜಿನಿಯರುಗಳ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು. ನಾನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹಾಗೂ ಅನೇಕರು ಇದರ ಬಗ್ಗೆ ಚರ್ಚಿಸಲು ಸೇರಿದ್ದಾಗ, ಎರಡು ಅಭಿಪ್ರಾಯ ಬಂತು. ಒಂದು ಡ್ಯಾಮನ್ನು ಮಡ್‌ನಿಂದ ಕಟ್ಟುವಂಥದ್ದು, ಇನ್ನೊಂದು ಡ್ಯಾಮನ್ನು ಕಾಂಕ್ರಿಟ್‌ನಿಂದ ಕಟ್ಟುವಂಥದ್ದು. ಕೆಳಗಡೆ 100-200 ಅಡಿ ದೂರದಲ್ಲಿ ತಾವು ನೋಡಿದರೆ ಎರಡೂ ಕಡೆಯಲ್ಲಿ ಬೆಟ್ಟದ ಸಾಲು ಇರುವದರಿಂದ, ಪುಣ್ಯಕ್ಕೆ ನಮಗೆ ಜಾಗ ಬಹಳ ಚೆನ್ನಾಗಿರುವುದು ಸಿಕ್ಕಿದೆ. ಇಂಜಿನಿಯರುಗಳು ತಮ್ಮ ಅಭಿಪ್ರಾಯವನ್ನು ಈ ರೀತಿ ಕೊಟ್ಟಿದ್ದಾರೆ. ಕಾಂಕ್ರೀಟ್ ಡ್ಯಾಂ ಕಟ್ಟುವುದಾದರೆ ಸುಮಾರು 60-65 ಕೋಟಿ ರೂ.ಗಳು ಬೇಕಾಗಬಹುದು ಅದರೆ

ಮಡ್‌ನಿಂದ ಕಟ್ಟಿದರೆ ಈ ಡ್ಯಾಂನ್ನು ಸುಮಾರು 30-35-40 ಕೋಟಿ ರೂ.ಗಳಲ್ಲಿ ಮುಗಿಸಬಹುದು ಎಂದು. ನಾವು ಈ ಕೆಲಸವನ್ನು ಪ್ರಾರಂಭ ಮಾಡಲೇಬೇಕು. ಕಾಂಕ್ರೀಟ್ ಡ್ಯಾಂ ಆದರೆ 5 ವರ್ಷ ಬೇಕಾಗುತ್ತದೆ. ಆದರೆ ಮೆಕನೈಸ್ಡ್ ಸಿಸ್ಟಮ್ ಹಾಕಿಕೊಂಡರೆ ಇನ್ನು ಒಂದರಿಂದ ಒಂದೂವರೆ ವರ್ಷ ಕಡಿಮೆ ಅವಧಿಯಲ್ಲಿ ಮಾಡಿಕೊಳ್ಳಬಹುದು. ಸೂಪಾ ಡ್ಯಾಂನ್ನು ಮಾಡಿರುವ ರೀತಿಯಲ್ಲಿ ಇದನ್ನು ಮಾಡಬಹುದು ಎನ್ನುವ ಅಭಿಪ್ರಾಯ ಇದೆ. ಮಡ್‌ನಿಂದ ಮಾಡಿಸಿದರೆ ಈ ಡ್ಯಾಂನ್ನು 3 ವರ್ಷದಲ್ಲಿ ಮುಗಿಸಬಹುದು ಎನ್ನುವ ಅಭಿಪ್ರಾಯ ಕೂಡ ಇದೆ. ಇದನ್ನು ಕಾಂಕ್ರೀಟ್ ಡ್ಯಾಮ್ ಮಾಡಬೇಕೆಂದು ನಾವು ಬಜೆಟ್‌ನಲ್ಲಿ 60-65 ಕೋಟಿ ರೂ.ಗಳನ್ನು ಪ್ರೊವೈಡ್ ಮಾಡಿದ್ದೇವೆ. ಶರಾವತಿ ಪ್ರಾಜೆಕ್ಟ್‌ನ್ನು ಕಳೆದುಕೊಳ್ಳುವ ಹಾಗಿಲ್ಲ ಎನ್ನುವ ದೃಷ್ಟಿಯಿಂದ ಹೀಗೆ ಮಾಡಲಾಗಿದೆ. ರಷ್ಯಾ, ಅಮೇರಿಕ, ಬೇರೆ ಬೇರೆ ದೇಶಗಳಲ್ಲಿ ಹಾಗೂ ನಮ್ಮ ದೇಶದಲ್ಲಿ ಮಡ್‌ನಿಂದ ಕಟ್ಟಿರುವಂಥ ಡ್ಯಾಂಗಳು ನೂರಾರು ವರ್ಷ ಉಪಯೋಗಕ್ಕೆ ಬರುತ್ತಿದೆ. ಇವುಗಳು ಬಹಳ ಸ್ಟ್ರಾಂಗ್ ಕೂಡ ಆಗಿರುತ್ತವೆ. ಎನ್ನುವ ಅಭಿಪ್ರಾಯವನ್ನು ಮಡ್‌ನಿಂದ ಡ್ಯಾಮ್‌ಗಳನ್ನು ಕಟ್ಟಿರುವಂಥ ನಮ್ಮ ಇಂಜಿನಿಯರುಗಳೇ ಹೇಳಿದ್ದಾರೆ. ಅದುದರಿಂದ ಕಾಂಕ್ರೀಟ್ ಡ್ಯಾಮನ್ನು ಕಟ್ಟುವ ಅವಶ್ಯಕತೆಯೇ ಇಲ್ಲ ಮಣ್ಣು ಕೂಡ ಸರ್ವಶ್ರೇಷ್ಠವಾದುದು. ಇದನ್ನು ನಾವು ಟೆಸ್ಟ್ ಮಾಡಿದ್ದೇವೆ ಎನ್ನುವ ಅಭಿಪ್ರಾಯವನ್ನು ನಮ್ಮ ಇಂಜಿನಿಯರುಗಳು ಕೊಟ್ಟಿದ್ದಾರೆ. ಇಟ್ ಈಸ್ ಓಕೆ ನಾವು ಮಡ್‌ನಿಂದ ಈ ಡ್ಯಾಮನ್ನು ಮಾಡಿದರೆ, ಅದು ಸುಲಭವಾಗಿ ನೀರನ್ನು ಬಿಟ್ಟುಕೊಡುವುದಿಲ್ಲ, ಬಹಳ ಬಲಯುತವಾಗಿರುತ್ತದೆ ಹಾಗೂ ನಾವು 30 ಕೋಟಿ ರೂ.ಗಳನ್ನು ಸೇವೆ ಕೂಡ ಮಾಡಬಹುದು ಎನ್ನುವ ಅಭಿಪ್ರಾಯವನ್ನು ನಮ್ಮ ಇಂಜಿನಿಯರ್‌ಗಳು ಕೊಟ್ಟಿದ್ದಾರೆ. ಈ ದೃಷ್ಟಿಯಿಂದಲಾದರೂ ನಾವು ಈ ಡ್ಯಾಮನ್ನು ಕಟ್ಟಲೇ ಬೇಕು. We are going to save another about Rs. 30 crores. We can divert this money for other power generation projects.

ಹಾಗೆ ಮಾಡುವುದಾದರೂ ಕೂಡ ಇದನ್ನು ಪವರ್ ಸೆಕ್ಟರ್‌ನಲ್ಲೇ ಇಟ್ಟುಕೊಳ್ಳೋಣ. ಎನರ್ಜಿ ಸೆಕ್ಟರ್‌ಗೆ ಇದ್ದಂಥ 276 ಕೋಟಿ ರೂ.ಗಳನ್ನು ಈಗ ನಾವು 372.12 ಕೋಟಿ ರೂ.ಗಳಿಗೆ ಏರಿಸಿದ್ದೇವೆ. ಅಂದರೆ ಸುಮಾರು 100 ಕೋಟಿ ರೂ.ಗಳನ್ನು ಜಾಸ್ತಿ ಮಾಡಿದ್ದೇವೆ. ಆದುದರಿಂದ ಪವರ್ ಸೆಕ್ಟರ್‌ಗೆ ಸರ್ಕಾರ ಹೆಚ್ಚು ಗಮನ ಕೊಡುತ್ತಿದೆ ಎಂದು ತಾವೆಲ್ಲರೂ ಭಾವಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಕಾವೇರಿ ಬೇಸಿನ್ ಕೆಲಸಗಳಿಗೆ 1989-90ರಲ್ಲಿ 100 ಕೋಟಿ ರೂ.ಗಳನ್ನು ಪ್ರೊವೈಡ್ ಮಾಡಲಾಗಿತ್ತು, 1990-91ರಲ್ಲಿ 110 ಕೋಟಿ ರೂ.ಗಳನ್ನು ಪ್ರೊವೈಡ್ ಮಾಡಲಾಗಿತ್ತು, ಈ ಸಲ ಅಂದರೆ 1991-92ಕ್ಕೆ 130 ಕೋಟಿ ರೂ.ಗಳನ್ನು ಪ್ರೊವೈಡ್ ಮಾಡಿದ್ದೇವೆ. ಕಾವೇರಿ ಜಲಾನಯನದ ಯೋಜನೆಗಳನ್ನು ತ್ವರಿತಗತಿಯಲ್ಲಿ ಮುಗಿಸಬೇಕೆಂಬುದೇ ನಮ್ಮ ಉದ್ದೇಶ. ಹಣದ ಕೊರತೆಯಿಂದ ಎನ್ನುವ ಕಂಪ್ಲೇಂಟ್ ಇಲ್ಲಿಯವರೆಗೆ ನಮಗೆ ಬಂದಿಲ್ಲ. ಆ ಪ್ರದೇಶದ ಶಾಸಕರುಗಳಿಂದ, ತುಮಕೂರು ಜಿಲ್ಲೆಯಿರಬಹುದು, ಹಾಸನ ಜಿಲ್ಲೆಯಿರಬಹುದು, ಮೈಸೂರು ಜಿಲ್ಲೆಯಿರಬಹುದು, ಇವರುಗಳಿಂದ ಹಣದ ಕೊರತೆ ಬಗ್ಗೆ ನಮಗೆ ಯಾವ ಕಂಪ್ಲೇಂಟ್ ಕೂಡ ಬಂದಿಲ್ಲ. ಹಣದ ಕೊರತೆ ಇದ್ದರೆ ಹೇಳಿ. ನಾವು ಕೂಡಲೇ ರಿಲೀಸ್ ಮಾಡಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ. ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಬೇಕು ಎನ್ನುವ ದೃಷ್ಟಿಯಿಂದ ಹಣದ ಕೊರತೆ ಬರಬಾರದು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ. ನಾಳೆ ಮತ್ತೆ ಸ್ವಲ್ಪ ಹಣ ಬೇಕು ಎಂದು ಬಂದರೆ, ಸರ್ಕಾರ ಮತ್ತೆ ರಿಲೀಸ್ ಮಾಡಿಕೊಡುತ್ತದೆ. From other sector, we could shift ಅದನ್ನು ಮಾಡಿಕೊಳ್ಳೋಣ, ಹಣ ಕೊಡೋಣ. ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟಹಾಗೆ ಈ ಮಾತನ್ನು ಈ

ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, plan allocation to the core sector for all the projects, ಬಗ್ಗೆ ತಾವು ವಿಚಾರ ಮಾಡಿದರೆ, 1991-92ರಲ್ಲಿ ಅಂದರೆ ಮುಂದಿನ ಆರ್ಥಿಕ ವರ್ಷದಲ್ಲಿ ಸರ್ಕಾರ ಆರ್ಥಿಕಾಭಿವೃದ್ಧಿ, ಪವರ್ ಜೆನರೇಷನ್, ಇರಿಗೇಷನ್, ಅಗ್ರಿಕಲ್ಚರ್, ಇಂಡಸ್ಟ್ರಿ, ಮಿನರಲ್ಸ್, ಅಲೈಡ್ ಸರ್ವಿಸಸ್ ಇತ್ಯಾದಿಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿದೆ. ಇದರಿಂದ ಆರ್ಥಿಕ ಅಭಿವೃದ್ಧಿ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಟ್ಟಿದೆ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಮುಖ್ಯಮಂತ್ರಿಗಳು ಇರಿಗೇಷನ್ ಬಗ್ಗೆ ಹೆಚ್ಚಿನ ಹಣ ಇಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಹಾಗೆಯೇ ಪವರ್ ಸೆಕ್ಟರ್‌ಗೆ ಇಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಬಹಳ ಸಂತೋಷದ ವಿಚಾರ. ಮತ್ತೆ ಇನ್ನೊಂದು ಮಾತು ಹೇಳುತ್ತಿದ್ದಾರೆ, ನಾವು ಹಣ ಇಟ್ಟಿದ್ದೇವೆ. ಹಣ ಬಿಡುಗಡೆ ಮಾಡುತ್ತೇವೆ ಹಾಗೆ ಎಂದು ಹೇಳಿದರೆ, ದುರಾದೃಷ್ಟವಶಾತ್ ಏನೊಂದು ಪ್ರಚಾರ ನಡೆದಿದೆ ನನಗೆ ಗೊತ್ತಿಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಸುಮಾರು ಡಿಸೆಂಬರ್, ಜನವರಿಯಿಂದ ಈ ಇರಿಗೇಷನ್ ಏರಿಯಾಕ್ಕೆ ಎಲ್‌ಓಸಿ ಕೊಡುತ್ತಿಲ್ಲ. ಹಣ ಬಿಡುಗಡೆಯಾಗುತ್ತಿಲ್ಲ ಎನ್ನತಕ್ಕಂಥ ಒಂದು ಪ್ರಚಾರ ನಡೆದಿದೆ, ಅದರ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು. ಏಕೆಂದರೆ ಇದು ಸ್ವಲ್ಪ ಗುಸುಗುಸು ಮಾತನಾಡತಕ್ಕದ್ದರಲ್ಲಿದೆ, ಅದು ವಾಸ್ತವಾಂಶವೋ, ಸತ್ಯಾಂಶವೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು ಒಂದು ಕಡೆ ಹೆಚ್ಚು ಹಣ ಇಟ್ಟಿದ್ದೇವೆಂದು ತಾವು ಹೇಳಿದ್ದೀರಿ. ಅದರೆ ಹಣ ಬಿಡುಗಡೆ ಆಗದೇ ಹೋದರೆ ಕೆಲಸ ಸ್ಥಗಿತ ಅದರೆ ಬಹಳ ಕಷ್ಟವಾಗುತ್ತದೆ. ಸರ್ಕಾರ ಹಣ ಬಿಡುಗಡೆ ಮಾಡಿ ಅವರು ಮಾಡದೇ ಹೋದರೆ,... then, we will have to hold them responsible for the tardy progress.

ಶ್ರೀ ಎಸ್. ಬಂಗಾರಪ್ಪ: ನಾನು ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟ ಹಾಗೆ ಹೇಳಿದೆ. ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟಹಾಗೆ ಹಣಕಾಸಿನ ಕೊರತೆ ಎಳ್ಳಷ್ಟು ಇಲ್ಲ ಎನ್ನತಕ್ಕ ಮಾತನ್ನು ಆ ಭಾಗದ ಮಾನ್ಯ ಸದಸ್ಯರು ತಿಳಿಸಿರತಕ್ಕಂಥಾದ್ದು, ಇಂಜಿನಿಯರ್ಸ್ ಹೇಳಿರತಕ್ಕಂಥ ವಿಚಾರ ಹೇಳಿದ್ದೇನೆ. ಬೇರೆ ಕಡೆ ಆ ವಿಚಾರ ಕೇಳಿದ್ದೇನೆ, ನಾನು ಒಪ್ಪುತ್ತೇನೆ. ಎಲ್‌ಓಸಿ ಅದು ಇಷ್ಯೂ ಆಗಬೇಕು, ಹಣ ಪೇಮೆಂಟ್‌ಗೆ ಹೋಗಬೇಕು ಅದು ಮೈನರ್ ಇರಿಗೇಷನ್ ಇರಬಹುದು ಮತ್ತು ಬೇರೆ ಮೀಡಿಯಮ್ ಇರಿಗೇಷನ್ ಇರಬಹುದು, ಅದನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ನನ್ನ ಗಮನಕ್ಕೂ ಕೂಡ ಬಂದಿದೆ. ಆ ವಿಚಾರದ ಬಗ್ಗೆ ಕಾರ್ಯಕ್ರಮವನ್ನು ಕೂಡ ನಾವು ಹಾಕುತ್ತಿದ್ದೇವೆ. ನಾವು ಹಣ ಬಿಡುಗಡೆ ಮಾಡಿ, ಕಳುಹಿಸಿಕೊಡುತ್ತೇವೆ. ಅದನ್ನು ಸರಿಪಡಿಸಬೇಕು ಎನ್ನತಕ್ಕ ಮಾತನ್ನು ನಾನು ಒಪ್ಪುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಂಗನಾಥ್ ಅವರು ಹೇಳಿದ ಹಾಗೆ, ಈಗಾಗಲೇ ನೀರಾವರಿ ಯೋಜನೆಗೆ ಹೋದ ಬಜೆಟ್ ಸಂದರ್ಭದಲ್ಲಿ ಸಾಕಷ್ಟು ಹಣ ಬಿಡುಗಡೆ ಮಾಡಿದ್ದರು. ಬಜೆಟ್ಟಿನಲ್ಲಿ ಪ್ರಾವಿಜನ್ ಮಾಡಿಕೊಂಡಿದ್ದರು. ಈಗ ಕಳೆದ ಎರಡು ಮೂರು ತಿಂಗಳಿಂದ ಎಲ್‌ಓಸಿ ಕೊಡದೆ, ಎಲ್ಲಾ ಕೆಲಸ ಕಾರ್ಯಗಳು ಸ್ಥಗಿತವಾಗಿದೆ, ಅದು ಕಾವೇರಿ ಬೇಸಿನ್ ಇರಬಹುದು, ಕೃಷ್ಣ ಬೇಸಿನ್ ಇರಬಹುದು, ತಾವೇ ಸಂಬಂಧಪಟ್ಟ ಸಚಿವರಾಗಿರುವುದರಿಂದ, ಬಾಕಿ ಹಣ ಎಷ್ಟಿದೆ, ಈಗ ಏನಾದರೂ ಹಣ ಬಿಡುಗಡೆ ಮಾಡುವಂಥ ಪ್ರಯತ್ನ ಮಾಡುತ್ತೀರಾ? ಇನ್ನು ಎರಡು ಮೂರು ತಿಂಗಳಲ್ಲಿ ಹಣ ಬಿಡುಗಡೆ ಮಾಡದಿದ್ದರೆ ಕಷ್ಟವಾಗುತ್ತದೆ. ಇಯರ್ ಎಂಡ್‌ನಲ್ಲಿ ವರ್ಕ್ ಆಗಬೇಕಾಗುತ್ತದೆ, ಇಲ್ಲ ಅಂದರೆ ಕೆಲಸ ಸಫರ್ ಆಗುತ್ತದೆ.

ನೀರಾವರಿ ಯೋಜನೆಗೆ ತೆಗೆದಿಟ್ಟಂಥ ಹಣದಲ್ಲಿ ಶೇಕಡ ಕಾಲು ಭಾಗ ಹಣ ಬಿಡುಗಡೆ ಮಾಡಿಲ್ಲ. ಎಲ್ಲಾ ಕೆಲಸಗಳು ಸ್ಥಗಿತವಾಗಿವೆ. ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಸಂಬಳ ಸಾರಿಗೆ ಕೊಡತಕ್ಕಂಥ ಕಾಲದಲ್ಲಿ ಅಲ್ಲಿ ಕೆಲಸ ಕಾರ್ಯಗಳು ಆಗುತ್ತಿಲ್ಲ. ಬೇರೆ ನೀರಾವರಿ ಯೋಜನೆ ಕೆಲಸ ಆಗುತ್ತಿಲ್ಲ. ಇನ್ನು ಯುಕೆಪಿನಲ್ಲಿ ಒಂದು ಕೋಟಿ ರೂಪಾಯಿ ಒಂದು ತಿಂಗಳಿಗೆ ಸಂಬಳ ಕೊಡುತ್ತಿದ್ದಾರೆ. ಅಲ್ಲಿ 10 ಲಕ್ಷ ರೂಪಾಯಿ ಕೆಲಸ ಆಗುತ್ತಿಲ್ಲ. ನಾನು ಮೊನ್ನೆ ಆ ಕಡೆ ಪ್ರವಾಸ ಹೋದಾಗ ಸಂಬಂಧಪಟ್ಟಂಥ ಅಧಿಕಾರಿಗಳು ಹೇಳಿದಂಥ ಮಾತು ಇದು. ಇದು ನ್ಯಾಷನಲ್ ವೇಸ್ಟ್ ಆಗುತ್ತಿದೆ, ನಾವು ಸಂಬಳ ಪುಕ್ಕಟ್ಟೆ ತಿನ್ನುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದರು. ಆದರಿಂದ ತಾವೇ ಸಂಬಂಧಪಟ್ಟ ಮಂತ್ರಿಗಳು ಆಗಿರುವುದರಿಂದ, ಹಣ ಬಿಡುಗಡೆಯಾಗಿದೆಯೋ, ಇಲ್ಲವೋ, ಏನಾದರೂ ಹಣಕಾಸಿನ ತೊಂದರೆ ಇದೆಯೋ, ನಿಜವಾದ ಸ್ಥಿತಿ ಏನು ಎಂದು ಹೇಳಿ. ಮುಂದಿನ ಬಜೆಟ್‌ನಲ್ಲಿ ಹಣ ಇಡುತ್ತೇವೆಂದರೆ ಅದು ಮುಂದಿನ ಫ್ಯೂಚರ್ ಆಯಿತು. ಈಗಿರುವಂಥ ಮಾರ್ಚ್ ಎಂಡ್‌ನಲ್ಲಿ ಏನು ಮಾಡಿದ್ದೀರಿ? ನೀವು ಜನರಿಗೆ ಆಶ್ವಾಸನೆ ಕಟ್ಟಿದ್ದೀರಿ, ಹಿಂದೆ ವೀರೇಂದ್ರ ಪಾಟೀಲರು ಇದ್ದಂಥ ಸಂದರ್ಭದಲ್ಲಿ ನೀರಾವರಿಗೆ ಆದ್ಯತೆ ಕೊಡುತ್ತೇವೆಂದು ಹೇಳಿದ್ದರು. ಎಷ್ಟು ಬಿಡುಗಡೆ ಮಾಡಿದ್ದಾರೆ. ಎಷ್ಟು ಖರ್ಚಾಗಿದೆ, ಖರ್ಚಾಗದೇ ಇದ್ದರೆ, ಏತಕ್ಕೆ ಮಾಡಲಿಲ್ಲ, ಇದನ್ನು ತಿಳಿಸಿದರೆ, ಬಹುಶಃ ಉತ್ತರ ಎಲ್ಲರಿಗೂ ತೃಪ್ತಿಯನ್ನು ತರಬಹುದು.

ಶ್ರೀ ಹೆಚ್. ಏಕಾಂತಯ್ಯ: ಅಧ್ಯಕ್ಷರೆ, ಈ ಸದನದಲ್ಲಿ ಸರ್ಕಾರ ಒಂದು ಆಶ್ವಾಸನೆಯನ್ನು ಕೊಟ್ಟಿದೆ. ಪ್ರತಿ ಮೂರು ತಿಂಗಳಿಗೆ ಒಮ್ಮೆ ನೀರಾವರಿ, ಕಾಮಗಾರಿ ಇಲಾಖೆಗೆ ಸಂಬಂಧಪಟ್ಟಂತೆ 95 ಕೋಟಿ ರೂಪಾಯಿಗಳನ್ನು, ಪ್ರತಿ ಮೂರು ತಿಂಗಳಿಗೊಮ್ಮೆ ನಾವು ಎಲ್‌ಓಸಿ ಮುಖಾಂತರ ಬಿಡುಗಡೆ ಮಾಡುತ್ತೇವೆ ಎನ್ನುವ ಮಾತನ್ನು ಸರ್ಕಾರ ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ನಾನು ಮುಖ್ಯಮಂತ್ರಿಗಳಿಗೆ ನೇರವಾಗಿ ಪ್ರಶ್ನೆ ಕೇಳುತ್ತೇನೆ. ಈಗ ತಾವು ಆಶ್ವಾಸನೆ ಕೊಟ್ಟಂತೆ ಈ ವರ್ಷ ಪ್ರತಿ ಮೂರು ತಿಂಗಳಿಗೆ ಒಮ್ಮೆ 94 ಕೋಟಿ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿದ್ದೀರಾ ಅಥವಾ ಇಲ್ಲವೇ ಎಂಬುದನ್ನು ದಯವಿಟ್ಟು ತಿಳಿಸಿ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರಂಗನಾಥ್‌ರವರು ಹೇಳಿದಹಾಗೆ ಇದೇ ಅಭಿಪ್ರಾಯವನ್ನು ಮಾನ್ಯ ಸದಸ್ಯರಾದ ಯುಡಿಯೂರಪ್ಪನವರು, ಇನ್ನೂ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇಲ್ಲಿ ಸ್ವಲ್ಪ ತಡವಾಗಿದೆ. ಕಾವೇರಿ ಬೇಸಿನ್‌ಗೆ ತೊಂದರೆ ಏನೂ ಬಂದಿಲ್ಲ. ಈ ಮಾತನ್ನು ನಾನು ಸ್ಪಷ್ಟವಾಗಿ ಪದೇ ಪದೇ ಹೇಳುತ್ತಿದ್ದೇನೆ. ಬೇರೆ ಸೆಕ್ಟಾರ್‌ನಲ್ಲಿ ಅಂದರೆ ಇರಿಗೇಷನ್‌ಗೆ ಸಂಬಂಧಪಟ್ಟಂತೆ ಸ್ವಲ್ಪ ತಡವಾಗಿದೆ. ಏಕೆಂದರೆ we had to repay the loan to government of India. ಇದಕ್ಕೋಸ್ಕರ ತಡವಾಗಿದೆ. The entire LOC as per the budget provision is released except 34 crores for PWD and irrigation. That will be released within a few days. ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗಿಲ್ಲ. ಈ ಹಣವನ್ನೂ ನಾವು ಕೂಡ ರಿಲೀಸ್ ಮಾಡುತ್ತೇವೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.....

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್.ಒ.ಸಿ. ಇಷ್ಯೂ ಮಾಡದೇ ಇರುವುದರಿಂದ ಬಾಕಿ ಇರತಕ್ಕ ಬಿಲ್ಲುಗಳ ಮೊತ್ತ ಎಷ್ಟು? ಕೃಷ್ಣಾ ಬೇಸಿನ್‌ನಲ್ಲಿ ಬಾಕಿ ಎಷ್ಟಿದೆ ಎಂಬುದನ್ನು ಹೇಳಿದರೆ.....

ಶ್ರೀ ಎಸ್. ಬಂಗಾರಪ್ಪ: ಅದರ ಅಂಕಿಅಂಶ ಇಲ್ಲಿಲ್ಲ. ನೋಡಿ ತಮಗೆ ತಿಳಿಸುತ್ತೇನೆ. ನಾವು ಕೇಂದ್ರ ಸರ್ಕಾರಕ್ಕೆ ಕೊಟ್ಟಿರತಕ್ಕದ್ದು ಅದರಲ್ಲೂ ಇದೇ ತಿಂಗಳಲ್ಲಿ

102.15 ಕೋಟಿ ರೂಪಾಯಿಗಳನ್ನು ವಾಪಸ್ಸು ಕೊಟ್ಟಿದ್ದೇವೆ. ಇದರಿಂದಾಗಿ ಸ್ವಲ್ಪ ತಡವಾಗಿದೆ. ಇನ್ನುಳಿದಿರತಕ್ಕ ವಿಚಾರಕ್ಕೆ ಹೆಚ್ಚಿನ ಗಮನವನ್ನು ನಾವು ಕೊಡೋಣ.

ಶ್ರೀ ಬಿ.ಎಸ್. ಯುಡಿಯೂರಪ್ಪ: ಹಣವನ್ನು ರಿಲೀಸ್ ಮಾಡುವುದಕ್ಕೂ, ಕೇಂದ್ರ ಸರ್ಕಾರಕ್ಕೆ ನೀವು ರೀಪೇಮೆಂಟ್ ಮಾಡುವುದಕ್ಕೂ ಏನು ಸಂಬಂಧ? ನೀರಾವರಿಗೋಸ್ಕರ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ನಾವು ಕೇಳುತ್ತಿರುವುದು. ನೀವು ಹಣವನ್ನು ತೆಗೆದುಕೊಂಡಿದ್ದನ್ನು ಮತ್ತೆ ಅವರಿಗೆ ವಾಪಸ್ಸು ಕೊಡಬೇಕಾಗುತ್ತದೆ. ಆದರೆ ಇವತ್ತು ನೀರಾವರಿ ಯೋಜನೆ ಸ್ಥಗಿತ ಆಗಿರುವಾಗ.......

ಶ್ರೀ ಎಸ್. ಬಂಗಾರಪ್ಪ: ನಾನು ಹೇಳುವುದನ್ನು ದಯವಿಟ್ಟು ಕೇಳಿ. ನಾವು ಒಂದೇ ಒಂದು ಸಾರಿ ಸಾಲವನ್ನು ಕಟ್ಟದಿದ್ದರೂ ಬೇರೆ ಹಣ ನಮಗೆ ಬರುವುದಿಲ್ಲ. ಎಲ್.ಓ.ಸಿ.ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ತಕ್ಷಣ ಅದಕ್ಕೆ ಹಣವನ್ನು ಕೊಡಬೇಕು. ಅದಕ್ಕೆ ಹಣವನ್ನು ಅಡ್ಜಸ್ಟ್ ಮಾಡುವುದರಲ್ಲಿ ಸ್ವಲ್ಪ ತಡವಾಯಿತು, ನಿಜ. ಈ ಹಣವನ್ನೂ ಕೂಡ ನಾವು ರಿಲೀಸ್ ಮಾಡುತ್ತಿದ್ದೇವೆಂದು ತಮಗೆ ಹೇಳಬಯಸುತ್ತೇನೆ. ಈ ಮಧ್ಯೆ ಅವರವರ ಕ್ಷೇತ್ರದಲ್ಲಿ ತಮಗೆ ಗೊತ್ತಿರುವಂತೆ ನೀವು ಇಂತಿಷ್ಟು ಲಕ್ಷ ರೂಪಾಯಿಗಳ ರಸ್ತೆಯನ್ನು ಮಾಡಬೇಕೆಂಬ ವಿಚಾರ ಬಂದಾಗ ಹಿಂದಿನ ಆರ್ಥಿಕ ಸಚಿವರಾದ ಮಾನ್ಯ ರಾಜಶೇಖರ ಮೂರ್ತಿಯವರ ಕಾಲದಲ್ಲಿ ಕೂಡ ಪ್ರಕಟ ಮಾಡಿದ್ದರು. ರಸ್ತೆಗಳ ನಿರ್ಮಾಣಕ್ಕೋಸ್ಕರ ನಾವು 12 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಅವರು ಹೇಳಿದ್ದರು. ಇದರ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ಚರ್ಚೆಯಾದಮೇಲೆ ನಾವು ಲೆಕ್ಕ ಹಾಕಿದೆವು. ತಾವೂ ಕೂಡ ಲೆಕ್ಕ ಹಾಕಿ ನೋಡಿ ಅದು ಎಷ್ಟು ಕೋಟಿ ರೂಪಾಯಿ ಆಗುತ್ತದೆಂದು ತಮಗೇ ಗೊತ್ತಾಗುತ್ತದೆ. ನಮ್ಮಲ್ಲಿ ಆಗ ಹಣದ ತೊಂದರೆ ಬಂತು. ರಿಸೋರ್ಸಸ್ ಮೊಬಿಲೈಸೇಷನ್ ಇನ್ನೊಂದು, ಮತ್ತೊಂದನ್ನು ನೋಡಿಕೊಂಡಾಗ ಇಷ್ಟು ಹಣವನ್ನು ಯಾವರೀತಿ ಅಡ್ಜಸ್ಟ್ ಮಾಡಬೇಕೆಂಬ ಪ್ರಶ್ನೆ ಬಂತು. ಆದರೂ ಕೂಡ ಹಿಂದಿನ ಮಾನ್ಯ ಸಚಿವರು ಇದನ್ನು ಹೇಳಿರುವುದರಿಂದ ನಾವು ಇದಕ್ಕೆ ಹಣವನ್ನು ಕೊಡಬೇಕೆಂದು ತೀರ್ಮಾನ ಮಾಡಿ ನಾವೇ ಫೈಲ್‌ನಲ್ಲಿ ಆರ್ಡರ್ ಮಾಡಿ, ಒಂದು ಸರ್ಕಾರದ ಆದೇಶವನ್ನೂ ಕೂಡ ಹೊರಡಿಸಿದ್ದೇವೆ. ನಾವು ಈ ಹಣವನ್ನು ರಿಲೀಸ್ ಮಾಡಿದ್ದೇವೆ. ಇದು ಸುಮಾರು 26.7 ಕೋಟಿ ರೂಪಾಯಿ ಆಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ರಸ್ತೆಗಳ ಸಲುವಾಗಿ ಎ.ಪಿ.ಎಂ.ಸಿ.ನಿಂದ 18 ಲಕ್ಷ ರೂ. ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಅದು ಏನಾಯಿತು?

ಶ್ರೀ ಎಸ್. ಬಂಗಾರಪ್ಪ: ಇದು ಮಾನ್ಯ ರಾಜಶೇಖರಮೂರ್ತಿಯವರು ಆ ಕಾಲದಲ್ಲಿ ಹೇಳಿದಂಥ ಮಾತು. ಆದುದರಿಂದ ಇದರ ಬಗ್ಗೆ ನಾವು ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ. ಹಣವನ್ನೂ ಕೂಡ ರಿಲೀಸ್ ಮಾಡುತ್ತೇವೆ. ಅದನ್ನು ತಾವು ಉಪಯೋಗ ಮಾಡಿಕೊಂಡು ಕೆಲಸ ಮಾಡಿಸಿಕೊಳ್ಳಬೇಕು. ಇನ್ನುಳಿದಿರತಕ್ಕ ರಸ್ತೆಗಳ ಬಗ್ಗೆ ಜಿಲ್ಲಾ ಪರಿಷತ್ತುಗಳಿಗೆ ಹಣವನ್ನು ನಾವು ಕೊಟ್ಟಿದ್ದೇವೆ. ಈ ಸಾರಿಯ ಬಜೆಟ್ ಅಲೋಕೇಷನ್‌ನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಈ ಸೆಕ್ಟರ್‌ಗೂ ನಾವು ಹಣವನ್ನು ಕೊರತೆ ಮಾಡಿಲ್ಲ. 1990-91ರ ಸಾಲಿಗಿಂತ 1991-92ರ ಸಾಲಿಗೆ ನಾವು ಜಾಸ್ತಿ ಕೊಟ್ಟಿದ್ದೇವೆಂಬುದನ್ನು ಬರೆದುಕೊಟ್ಟಿದ್ದೇವೆ. ಮತ್ತೊಮ್ಮೆ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಜಿಲ್ಲಾ ಪರಿಷತ್ತಿನವರು ಏನೂ ಮಾಡಿದ್ದಾರೆಂದರೆ ಈ ಕೆಲಸವನ್ನು ಮಾಡುವುದಕ್ಕೆ ನಮ್ಮಿಂದಾಗುವುದಿಲ್ಲವೆಂದು ಹಣವನ್ನು ರಿಲೀಸ್ ಮಾಡಿ ಅದನ್ನು ಪಿ.ಡಬ್ಲ್ಯು.ಡಿ.ಗೆ ವಹಿಸಿದೆ ಎಂದು ಹೇಳಿ ಈಗಾಗಲೇ ಅವರು ತಮ್ಮ ಕೈ ತೊಳೆದು ಕೊಳ್ಳುತ್ತಿದ್ದಾರೆ. ನಮಗೆ ಹಣವನ್ನು ಕೊಡಿ ಎಂದು ಯಾರು ಮೊದಲು ಕೇಳುತ್ತಿದ್ದರೂ ಅವರೇ ಈಗ ಹೇಳುತ್ತಿದ್ದಾರೆ, ಸರ್ಕಾರದವರೇ ಈ ಕೆಲಸವನ್ನು

ವಹಿಸಿಕೊಳ್ಳಿ ಎಂದು. ಇದರಿಂದ ನನಗನಿಸುತ್ತದೆ, ಈ ಟ್ರೆಂಡ್‌ನ್ನು ನೋಡಿದರೆ ಜಿಲ್ಲಾ ಪರಿಷತ್ತುಗಳ ಅಧಿಕಾರವನ್ನು ಮೊಟಕುಮಾಡಬೇಕೆಂಬ ಉದ್ದೇಶ ನಮಗಿಲ್ಲದಿದ್ದರೂ ಕೂಡ ಅವರಾಗಿಯೇ ತಮ್ಮ ಅಧಿಕಾರವನ್ನು ಮೊಟಕು ಮಾಡಿಕೊಳ್ಳುತ್ತಿದ್ದಾರೋ ಏನೋ ಎಂದು. ಅವರಿಗೆ ನಾವು ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. We have to withdraw all these things if no zilla parishad is coming forward to utilise those funds for upkeeping the roads and construction of roads in rural areas.

ಇದನ್ನು ಮಾಡದಿದ್ದರೆ ಅವರಿಗೆ ಏತಕ್ಕೆ ಕೊಡಬೇಕೆಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಮುಂದೆ ಏನು ಮಾಡಬೇಕೆಂಬ ವಿಚಾರವನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತದೆ. ಏಕೆಂದರೆ ನಿಮ್ಮ ಬಜೆಟ್ ಪ್ರಾವಿಷನ್ ಪ್ರಕಾರವೇ ನಿಮಗೆ ನಾವು ಹಣವನ್ನು ಕೊಟ್ಟಿದ್ದೇವೆ. ಅದನ್ನು ಉಪಯೋಗ ಮಾಡಿಕೊಂಡು ನೀವೇ ರೋಡ್ ಮಾಡಿಸಿಕೊಳ್ಳಿ ಎಂದು ನಾವು ಹೇಳಿದರೆ, ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ ಎಂದು ಅವರು ಹೇಳುವುದಾದರೆ ಗ್ರಾಮೀಣ ಜನರಿಗೆ ಬಹಳ ತೊಂದರೆ ಆಗುತ್ತದೆ. we have to evolve a plan for all these things.' ನಾವು ಇದನ್ನು ಮಾಡಲೇಬೇಕಾಗುತ್ತದೆಂಬುದನ್ನು ಹೇಳಬಯಸುತ್ತೇನೆ.

ಇನ್ನು ಟ್ಯಾಕ್ಸ್ ರೆವಿನ್ಯೂಸ್ ಬಗ್ಗೆ ನಾವು ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಹಣ ಬಂದಿದೆ ಎನ್ನುವ ಬಗ್ಗೆ ತಮ್ಮ ಗಮನಕ್ಕೆ ತಂದರೆ ಬಹಳ ಒಳ್ಳೆಯದೆಂದು ಭಾವಿಸುತ್ತೇನೆ. ತಾವು ಕೂಡ ಮಾತನಾಡುತ್ತಾ ಹೇಳಿದ್ದೀರಿ, ಎಕ್ಸೈಸ್‌ನಲ್ಲಿ 1989-90ರಲ್ಲಿ 327 ಕೋಟಿ 50 ಲಕ್ಷರೂಪಾಯಿಗಳು. 1990-91ರಲ್ಲಿ ಅಂದರೆ ಈ ವರ್ಷದ ಕೊನೆಯವರೆಗೆ ನಾವು ನಿರೀಕ್ಷಣೆ ಮಾಡಿದ್ದುದು 555 ಕೋಟಿ ರೂಪಾಯಿಗಳು. ನಾನು ನನ್ನ ಬಜೆಟ್ ಸ್ಪೀಚ್‌ನಲ್ಲಿಯೂ ಕೂಡ ಹೇಳಿದ್ದೇನೆ. ಇದು ವಿಚಾರ ಮಾಡಿರತಕ್ಕಂಥದ್ದು ಬಹಳ ಜಾಸ್ತಿಯಾಗಿದೆ ಎಂದು ಹೇಳಿದ್ದೇನೆ. ಆಕ್ಚುಯಲಿ ರಿಯಲೈಸೇಷನ್ ಈ ತಿಂಗಳ ಅಂತ್ಯದವರೆಗೆ ನಾವು ಆಂಟಿಸಿಪೇಟೆಡ್ ಎಷ್ಟು ಆಗಿದೆ ಎಂದರೆ 470 ಕೋಟಿ ರೂಪಾಯಿಗಳು. ಸುಮಾರು ಡಿಫರೆನ್ಸ್ 55.30 ಕೋಟಿ ರೂಪಾಯಿಗಳು ಬರುತ್ತದೆನ್ನುವ ಮಾತನ್ನು ಒಪ್ಪುತ್ತೇನೆ. ಸುಮಾರು ಒಟ್ಟು 80-85 ಕೋಟಿ ರೂಪಾಯಿ ಡಿಫರೆನ್ಸ್ ಬರುತ್ತದೆ. ಇದು ನಮಗೆ ಹೆಚ್ಚು ಬರಬಹುದೆನ್ನುವ ದೃಷ್ಟಿಯಿಂದ ಇದರಲ್ಲಿ ಅನೇಕರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ನಾವು ಈ ಹಣವನ್ನು ವಸೂಲು ಮಾಡಬೇಕೆಂಬ ದೃಷ್ಟಿಯಿಂದ ಕಟುವಾಗಿ, ಬಿಗಿಯಾದ ಕ್ರಮ ಹಾಕಿಕೊಂಡು ಸರ್ಕಾರದವರು ಇಲ್ಲಿಯವರೆಗೆ ವಸೂಲು ಮಾಡುತ್ತಲೇ ಇದ್ದೇವೆ, ಹಣವನ್ನು ಅವರು ಕಟ್ಟುತ್ತಲೇ ಇದ್ದಾರೆ. ಆದರೆ ಕೆಲವರು ಕೋರ್ಟಿಗೆ ಹೋಗದವರು ಕಮ್ಯುನಲ್ ಗಲಾಟೆ ಎಂದು ಮತ್ತೊಂದು ಬಂದಂಥ ಕಾಲದಲ್ಲಿ ಈ ಕಾರಣಗಳನ್ನು ಕೊಟ್ಟು ಕೋರ್ಟಿಗೆ ಹೋಗಲೂ ಇಲ್ಲ ಹಣವನ್ನು ಕಟ್ಟಲೂ ಇಲ್ಲ. ಅಂದರೆ 19-20 ಜಿಲ್ಲೆಗಳಲ್ಲಿ ಕಮ್ಯುನಲ್ ಗಲಾಟೆ ನಡೆಯಿತೆಂದೆಲ್ಲ. ಕೋರ್ಟಿಗೆ ಹೋಗದವರು ಅವರು ಕೂಡ ಸ್ಟೇ ತರಬೇಕೆಂಬ ಕೆಲಸವನ್ನು ಮಾಡಿದ್ದಾರೆ. ಮುಂದಿನ ವರ್ಷದಲ್ಲಿ 1991-92ನೇ ವರ್ಷಕ್ಕೆ ಅಂಟಿಸಿಪೇಟ್‌ರ್ ರೆವಿನ್ಯೂ 555 ಕೋಟಿ ರೂಪಾಯಿಗಳೆಂದು ಇಟ್ಟಿದ್ದೇವೆ. ಏತಕ್ಕೆಂದರೆ ಈ ವರ್ಷ 470 ಕೋಟಿ ಇದ್ದರೆ ಮುಂದಿನ ವರ್ಷಕ್ಕೆ 555 ಕೋಟಿ ರೂಪಾಯಿಗಳೆಂದು ಇಟ್ಟಿದ್ದೇವೆ. ಏತಕ್ಕೆಂದರೆ ಈ ವರ್ಷ 470 ಕೋಟಿ ಇದ್ದರೆ ಮುಂದಿನ ವರ್ಷಕ್ಕೆ 555 ಕೋಟಿ ರೂ.ಗಳ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಅದನ್ನು ಹೇಗೆ ವಸೂಲು ಮಾಡಬೇಕು ಎನ್ನುವ ವಿಚಾರ ಮಾಡೋಣ. ಜನರು ಹೇಳತಕ್ಕಂಥದ್ದು ಸಿ.ಎಲ್.(2)ಲೈಸೆನ್ಸ್‌ನ್ನು ಯಾರೋ ಕೆಲವರು ಹೇಳಿದ್ದಾರೆ. ಸಣ್ಣ ಸಣ್ಣ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಅವುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡತಕ್ಕಂಥವರಿಗೆ 30 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಮಾಡಿಬಿಟ್ಟಿದ್ದೀರಿ.

ಇದು ಸಿಕ್ಕಾಪಟ್ಟೆ ಜಾಸ್ತಿಯಾಗಿದೆ, ಇಷ್ಟು ಮಾಡಬಾರದಾಗಿತ್ತು ಎನ್ನುವ ಮಾತನ್ನು ಹೇಳಿದ್ದಾರೆ. ಒಬ್ಬ ಬಡವ ಜೀವನ ಮಾಡಲು ಬಹಳ ಕಷ್ಟವಾಗುತ್ತದೆ ಇದು ಕ್ಯಾಪಿಟೇಷನ್ ಇರತಕ್ಕಂಥ ಕಾಲ. ಆಮೇಲೆ ಸಿಕ್ಕಾಪಟ್ಟೆ ಅಂಗಡಿಗಳಾಗಿ ಬಿಟ್ಟಿವೆ ಎನ್ನತಕ್ಕಂಥ ವಿಚಾರ ಇಟ್ಟು ಇಲ್ಲಿ ಭಾಷಣ ಮಾಡಿದ್ದಾರೆ. ಸದನದಲ್ಲೂ ಕೂಡ ಭಾಷಣ ಮಾಡಿದ್ದಾರೆ. ನಾನು ಅದು ಒಂದು ಏರಿಯಾ ಬಗ್ಗೆ ಮಾತ್ರ ಕಡಿಮೆ ಮಾಡಬೇಕಾಗುತ್ತದೆ. ಏನೋ ಎನ್ನುವ ಅಭಿಪ್ರಾಯವನ್ನೂ ಕೂಡ ಯೋಚನೆ ಮಾಡಿದ್ದೇನೆ. ಅದರೆ ಎಷ್ಟು ಕಡಿಮೆ ಮಾಡಬೇಕಾಗುತ್ತದೆ ಅಂದಾಗ ಸಿ.ಎಲ್.-(1)ನ್ನು ಜಾಸ್ತಿ ಮಾಡತಕ್ಕಂಥ ವಿಚಾರವನ್ನು ನಾವು ವಿಚಾರ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ನೀವೇನು ಜಾಸ್ತಿ ಮಾಡಿದ್ದೀರಿ, ಅದು ಕೋಷ್ಟಕದಲ್ಲಿ ಲೆಕ್ಕ ಬಂದಿಲ್ಲವೆಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಅದೆಲ್ಲವನ್ನು ಸೇರಿಸಿಲ್ಲವೆನ್ನುವ ಮಾತನ್ನು ಹೇಳಿದ್ದೀರಿ. ಇದೇ ದೃಷ್ಟಿಯಿಂದ ಲೆಕ್ಕ ಕೊಡಲಿಕ್ಕೆ ಹೋಗಿಲ್ಲವೇನೋ ನಮಗೆ ಗೊತ್ತಿಲ್ಲ ಲೆಕ್ಕ ಕೊಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ: ಆದರಿಂದ ಬರತಕ್ಕಂಥ ಅಮೌಂಟ್ ನನ್ನ ಲೆಕ್ಕಾಚಾರದ ಪ್ರಕಾರವಾಗಿ 19.6 ಕೋಟಿ ರೂಪಾಯಿ ಎಂದು ಹೇಳಿದ್ದೇನೆ. The projected amount should reflect in the last page.

ಶ್ರೀ ಎಸ್.ಬಂಗಾರಪ್ಪ: ಅದನ್ನು ಒಪ್ಪುತ್ತೇನೆ. ಮಾನ್ಯ ಸಭಾಪತಿಯವರೇ ಈ ಸಂದರ್ಭದಲ್ಲಿ ನಾನು ಏನು ಒಂದು ಲಕ್ಷ ರೂಪಾಯಿ ಎಂದು ಹೇಳಿದೆ, ಅದರ ಬಗ್ಗೆ ಅಸೋಸಿಯೇಷನ್‌ನವರು ಬಂದಿದ್ದರು. ಬೇರೆ ಬೇರೆ ಅಸೋಸಿಯೇಷನ್‌ನವರು ಬರುತ್ತಲೇ ಇದ್ದಾರೆ. ಒಂದು ಲಕ್ಷ ರೂಪಾಯಿ ಹೆವಿ ಆಯಿತೆನ್ನತಕ್ಕಂಥ ಭಾವನೆ ಸರ್ಕಾರಕ್ಕೂ ಕೂಡ ಬಂದಿದೆ ಇಲ್ಲವೆಂದು ಹೇಳಲಾರೆ ಇದರಲ್ಲಿ ಅವರು 35 ಸಾವಿರ ರೂಪಾಯಿ ಇರಬೇಕು ಕೆಲವರು ಒಂದು 20 ಸಾವಿರ ರೂಪಾಯಿಗೆ ಮಾಡಿಕೊಡಬೇಕೆಂದು ಕೇಳಿಕೊಂಡರೂ ಪರವಾಗಿಲ್ಲ, ಕಡಿಮೆ ಮಾಡಬೇಕೆಂದು ಕೇಳತಕ್ಕಂಥ ಜನರೂ ಇದ್ದಾರೆಂದು ನನಗೆ ಗೊತ್ತಾಯಿತು. ಆದರೆ ಯಾರಿಗೂ ಮಾಡಲಿಕ್ಕೆ ಸಾಧ್ಯವಿಲ್ಲ. ಕೊನೆಗೆ ನಮ್ಮ ಸರ್ಕಾರ ವಿಚಾರ ಮಾಡತಕ್ಕಂಥದ್ದು ಈ ಒಂದು ಏರಿಯಾದಲ್ಲಿ ಒಂದು ಲಕ್ಷ ಅಂತ ಇಟ್ಟರೆ ಹೆವಿಯಾಗಬಹುದು ಎನ್ನತಕ್ಕಂಥ ಅಭಿಪ್ರಾಯದಿಂದ ನಾವು 30 ಸಾವಿರ ಇದೆಯಲ್ಲ ಇದನ್ನು 50 ಸಾವಿರಕ್ಕೆ ನಿಗದಿ ಮಾಡಬೇಕೆಂಬ ಒಂದು ತೀರ್ಮಾನವನ್ನು ಮಾಡಿದ್ದೇವೆ. ಅದರ ಪ್ರಕಾರ ನಾವು ಕಾನೂನು ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 50 ಸಾವಿರದಿಂದ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : 50 ಸಾವಿರದಿಂದ ನಡೆಸುವುದಕ್ಕಾಗುವುದಿಲ್ಲವೆಂದರೆ ಏನೂ ಮಾಡುವುದಕ್ಕಾಗುವುದಿಲ್ಲ. ಸೆಕೆಂಡ್ಸ್ ಮಾರಾಟ ಮಾಡುವುದಕ್ಕೆ ಬಿಡುವುದಕ್ಕಾಗುವುದಿಲ್ಲ, ಅದು ಮಾಡಿದರೆ ಇಂಡಸ್ಟ್ರಿಗಳಿಗೆ ಪೆಟ್ಟು ಬೀಳುತ್ತದೆ. ಆದ್ದರಿಂದ ಅದನ್ನು ಮಾಡುವುದಕ್ಕಾಗುವುದಿಲ್ಲ, ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು 1989-90ರಲ್ಲಿ 158 ಕೋಟಿ ರೂಪಾಯಿ, 1990-91ರಲ್ಲಿ 190 ಕೋಟಿ 1991-92ರಲ್ಲಿ 200 ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಿಂದ 1989-90ರಲ್ಲಿ 126.5 ಕೋಟಿ, 1990-91ರಲ್ಲಿ 160 ಕೋಟಿ 1991-92ರಲ್ಲಿ 210 ಕೋಟಿ ರೂಪಾಯಿಗಳನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಅಂದರೆ ಹೋದ ವರ್ಷಕ್ಕಿಂತ 50 ಕೋಟಿ ರೂಪಾಯಿಗಳನ್ನು ಹೆಚ್ಚು ನಿರೀಕ್ಷೆ ಮಾಡುತ್ತಿದ್ದೇವೆ. ಕಮರ್ಷಿಯಲ್ ಟ್ಯಾಕ್ಸಸ್ 1989-90ರಲ್ಲಿ 1232 ಕೋಟಿ ರೂಪಾಯಿ ಇದ್ದರೆ

1990-91ರಲ್ಲಿ 1422 ಕೋಟಿ ರೂಪಾಯಿ ಇತ್ತು. ನಾನು ಹಣಕಾಸಿನ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ 1422 ಕೋಟಿ ಇದ್ದುದನ್ನು 1600 ಕೋಟಿ ರೂಪಾಯಿಗೆ ಮುಟ್ಟಬೇಕೆಂದು ಮಾಡಿದ್ದೇನೆ. ಈ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಂಡಿದ್ದೇನೆ. ಯಾವುದೇ ಕನ್‌ಸೆಷನ್ ಕೊಡುವುದಕ್ಕೆ ಹೋಗಿಲ್ಲ. ಕೆಲವು ತಪ್ಪು ಮಾಡಿದ್ದು ಗಮನಕ್ಕೆ ಬಂದಿರಬಹುದು. ಒಟ್ಟಿನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಾದರೆ ಈ ಬಗ್ಗೆ ಹೈಲಿ ಸ್ಟ್ರಿಂಜೆಂಟ್ ಮೆಷರ್ಸ್ ತೆಗೆದುಕೊಂಡಿದ್ದೇವೆ. 1422 ಇದ್ದುದನ್ನು 1600 ಕೋಟಿ ರೂಪಾಯಿ ಟಾರ್ಗೆಟ್ ಏನು ಫಿಕ್ಸ್ ಮಾಡಿದೆವು ಅದರಲ್ಲಿ ಕೊನೆಯ ಪಕ್ಷ ಈ ತಿಂಗಳ ಕೊನೆಯ ಹೊತ್ತಿಗೆ 1555 ಕೋಟಿ ರೂಪಾಯಿಯಾದರೂ ಮುಟ್ಟಬೇಕೆಂದು ಮಾಡಿದ್ದೇವೆ. ಇದರಲ್ಲಿ 50 ಕೋಟಿ ರೂಪಾಯಿ ವ್ಯತ್ಯಾಸ ಬರುತ್ತದೆ. 1555 ಕೋಟಿ ರುಪಾಯಿ ರೀಚ್ ಆಗತಕ್ಕದ್ದು ಆಲ್ ಟೈಂ ರೆಕಾರ್ಡ್ ಎಂದು ಎಲ್ಲರೂ ಒಪ್ಪುತ್ತೀರೆಂದು ಭಾವಿಸಿದ್ದೇನೆ. 1991-92ರಲ್ಲಿ ನಾವು ರೆವಿನ್ಯೂ ಎಕ್ಸ್ ಪೆಕ್ಟ್ ಮಾಡತಕ್ಕದ್ದು 1805 ಕೋಟಿ ರೂಪಾಯಿ. ಇದನ್ನು ಕೂಡ ಅಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸುಮಾರು 200 ಕೋಟಿ ರೂಪಾಯಿ ಹೆಚ್ಚಾಗಿ ಕಮರ್ಷಿಯಲ್ ಟ್ಯಾಕ್ಸಸ್‌ನಿಂದ ಬರುತ್ತದೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡೇ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಈ ವಿಚಾರಗಳನ್ನು ಪ್ರಸ್ತಾಪ ಮಾಡಿದ ಮೇಲೆ ಇನ್ನೂ ಕೆಲವು ವಿಚಾರಗಳು ನಮ್ಮ ಮುಂದಿವೆ. ಕೆಲವನ್ನು ಜಾರಿಗೆ ಕೊಡುವುದಕ್ಕೆ ಹೋದರೆ......

ಶ್ರೀ ಬಿ.ಎಚ್. ಬನ್ನಿಕೋಡ್: ಸ್ಟ್ಯಾಂಪ್ ಡ್ಯೂಟಿ ಹೆಚ್ಚು ವಸೂಲು ಮಾಡಬೇಕೆಂದು ಏನು ಹೇಳುತ್ತಿದ್ದೀರಿ ಅದಕ್ಕೆ ಕನ್‌ಸೇಷನ್ ಕೊಟ್ಟರೆ ಒಳ್ಳೆಯದು. ಏಕೆಂದರೆ ರಾಜ್ಯದಲ್ಲಿ ಬರಗಾಲ ಇದೆ. ರೈತರಿಗೆ ಬಹಳ ತೊಂದರೆ ಇದೆ. ರೈತರು ಸಾಲ ತೆಗೆದುಕೊಳ್ಳುವುದಕ್ಕೆ ಸ್ಟ್ಯಾಂಪ್ ಡ್ಯೂಟಿ ಹೆಚ್ಚಾಗಿದೆ. ರೈತರು ಪಂಪ್‌ಸೆಟ್ ಬೋರ್‌ವೆಲ್‌ಗಳಿಗೆ 40-50 ಸಾವಿರ ರೂಪಾಯಿಗಳ ಸಾಲ ಮಾಡಬೇಕಾಗಿದೆ. ಅವರು ಈ ರೀತಿ ಪಡೆಯತಕ್ಕ ಸಾಲಕ್ಕೆ 50 ಸಾವಿರ ರೂಪಾಯಿಗಳವರೆಗಾದರೂ ಸ್ಟ್ಯಾಂಪ್ ಡ್ಯೂಟಿಯಿಂದ ಎಗ್ಸೆಂಪ್‌ಶನ್ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಹೆಚ್ಚಿಗೆ ಸಾಲ ಮಾಡುವವರಿಗೆ ಬೇಕಾದರೆ ಹಾಕಬಹುದು.

ಶ್ರೀ ಎಸ್. ಬಂಗಾರಪ್ಪ: ಇದನ್ನು ಪ್ರೊ. ನಂಜುಂಡಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ : ಮಾನ್ಯ ಬನ್ನಿಕೋಡು ಅವರು ವೈಜ್ಞಾನಿಕವಾಗಿ ಆಲೋಚನೆ ಮಾಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ವಿನಂತಿಸುತ್ತೇನೆ. 50 ಸಾವಿರ ರೂಪಾಯಿಗಳ ಮೇಲೆ ಸಾಲ ತೆಗೆದುಕೊಳ್ಳುವವರಿಗೆ ಸ್ಟ್ಯಾಂಪ್ ಡ್ಯೂಟಿ ಹಾಕಬಹುದೆಂದು ಹೇಳುತ್ತಿದ್ದಾರೆ. ಇಲ್ಲಿ ನಾವು ನಗರದಲ್ಲಿರುವವರಿಗೆ ಮನೆ ಕಟ್ಟುವುದಕ್ಕೆ 3 ಲಕ್ಷ ರೂಪಾಯಿಗಳವರೆಗೆ ಸಾಲ ಕೊಡುತ್ತಿದ್ದೇವೆ. ಅಂದಾಗ ನಗರದಲ್ಲಿರುವವರು ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗುತ್ತದೆ. ಇದು ಸರಿಯಲ್ಲ. ರೈತ ಬಂದಿರುವುದು ಸಾಲಕ್ಕೆ. ಸಾಲಕ್ಕೆ ಬಂದಾಗ ಸ್ಟ್ಯಾಂಪ್ ಡ್ಯೂಟಿ ಕೊಡು ಎಂದರೆ ಲೆಕ್ಕಾಚಾರ ಸರಿಯೆ? ಆದ್ದರಿಂದ ಈ ಸ್ಟ್ಯಾಂಪ್ ಡ್ಯೂಟಿ ಎಂಬುದನ್ನೇ ಅಬಾಲಿಷ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : 50 ಸಾವಿರ ರೂಪಾಯಿಗಳವರೆಗೆ ಸಾಲ ಪಡೆಯುವ ರೈತರಿಗೆ ಸ್ಟ್ಯಾಂಪ್ ಡ್ಯೂಟಿಯನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ರೈತರ ಹಿತದೃಷ್ಟಿಯಿಂದ ಸ್ಟ್ಯಾಂಪ್ ಡ್ಯೂಟಿಯನ್ನು ವಿನಾಯತಿ ಮಾಡಬೇಕು, ಅವರು ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಸ್ತಾಪವಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಪ್ರೊಫಸರ್ ನಂಜುಂಡಸ್ವಾಮಿಗಳ ಹತ್ತಿರ ಮಾತನಾಡಿದ್ದೇನೆ ಎಂದು ಹೇಳಿದರು. ಸದನದಲ್ಲಿ ಅನೇಕ ಸಾರಿ ನಾವು ಒತ್ತಾಯ ತಂದಿದ್ದೇವೆ. ಕೊನೆ ಪಕ್ಷ ಸ್ಟಾಂಪ್ ಶುಲ್ಕದಿಂದಾದರೂ ರೈತನನ್ನು ವಿಮುಕ್ತಿಗೊಳಿಸಿ ಎಂದು ಹೇಳಿದ್ದೇನೆ. ಏಕೆಂದರೆ ನೀವು ಏನು ಆದಾಯ ಜಾಸ್ತಿ ಬಂದಿದೆ ಎಂದು ಹೇಳಿದ್ದೀರಿ ಅದು ಬಡ ಬೋರೆಗೌಡನಿಂದ ಬಂದಿರುವುದು, ರೈತ ಕೊಟ್ಟಿರುವುದು ಅವನು ಮಾಡಿದಂಥ ಸಾಲಸೋಲಕ್ಕೆ. ಕೊನೆಪಕ್ಷ ಅವನ ಹಿತದೃಷ್ಟಿಯಿಂದ ಆದರೂ ರೈತ ಯಾವುದೇ ರೀತಿಯ ಸಾಲ ಪಡೆದಾಗ ಅವನ ಮೇಲೆ ಸ್ಟಾಂಪ್ ಶುಲ್ಕ ಹಾಕುವುದಿಲ್ಲ ಎಂಬ ತೀರ್ಮಾನವನ್ನು ಭರವಸೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಲಿ.

ಶ್ರೀ ಎಸ್. ಬಂಗಾರಪ್ಪ: ನಾನು ಆಗಲೇ ಅದರ ಬಗ್ಗೆ ಹೇಳಿದೆ. ತಾವು ಇರಲಿಲ್ಲ ಅಧ್ಯಕ್ಷರ ಅಪ್ಪಣೆ ಪಡೆದು ಪ್ರತ್ಯೇಕವಾಗಿ ಒಂದು ಹೇಳಿಕೆಯನ್ನು ನಾಳೆ ನಾಡಿದ್ದು ಎರಡು ದಿವಸದಲ್ಲಿ ಸದನ ಮುಕ್ತಾಯವಾಗುವುದರೊಳಗೆ ಕೊಡುತ್ತೇನೆಂದು ಹೇಳಿದೆ. ಅನೇಕ ವಿಚಾರಗಳಿಗೆ ಸಂಬಂಧಪಟ್ಟಹಾಗೆ ರೈತರ ಸಾಲ ಸೇರಿಕೊಂಡಂತೆ ನಾವು ಪ್ರಸ್ತಾಪ ಮಾಡಿದ್ದೇವೆ. ಅದರೆ ವಿವರಣೆ ಸೂಕ್ತವೆಂದು ನಾನು ಯೋಚನೆ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನನಗೆ ವಿಶ್ವಾಸ ಇದೆ, ಸನ್ಮಾನ್ಯ ಮಂತ್ರಿಗಳೇ ತಾವಿರಬೇಕಾದರೆ ರೈತರಿಗೆ ನ್ಯಾಯ ದೊರಕಿಸಿಕೊಂಡುವಂಥ ಪ್ರಯತ್ನ ಮಾಡಬಹುದೆಂದು ಆದರೆ ಇನ್ನೊಂದು ದುಃಖ ಇರುವಂಥದ್ದು ಕಳೆದ ನಾಲ್ಕಾರು ವರ್ಷದಿಂದ ಸತತವಾಗಿ ರೈತರ ಪರವಾಗಿ ಹೋರಾಟ ಮಾಡುತ್ತಿದ್ದರೂ ಸಹ ಎಲ್ಲಾ ವಿರೋಧಪಕ್ಷದವರನ್ನು ನಿಮ್ಮ ಆಡಳಿತ ಪಕ್ಷದವರನ್ನು ಒಂದು ಕಡೆ ಕರೆದು ಚರ್ಚೆ ಮಾಡಬಹುದಾಗಿತ್ತು.ಆದರೆ ಆ ಧಾರಾಳತನ ತೋರಿಸಲಿಲ್ಲ ಇದರಲ್ಲಿ ಏನು ಸಂಚಿದೆ ಉದ್ದೇಶ ಏನಿದೆ ಆ ಭಗವಂತನಿಗೇ ಗೊತ್ತು. ಆದರೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ನೀವು ಮಾಡಲಿಲ್ಲ ಕಳೆದ ಮೂರು ನಾಲ್ಕು ತಿಂಗಳಿಂದ ಸತತವಾಗಿ ನಾವು ಒತ್ತಾಯ ಮಾಡುತ್ತಿದ್ದೇವೆ. ನಿಮಗೆ ಬಹಳ ಒಳ್ಳೆಯ ಹೆಸರು ಬರಲಿ ರೈತರಿಗೆ ಅನುಕೂರವಾಗಲಿ ನಮಗೆ ಹೆಸರು ಬರುವುದು ಬೇಡ. ರೈತರ ಉದ್ಧಾರ ಆಗಲಿ ಎಂಬ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮನ್ನು ಕರೆಯುವ ಸೌಜನ್ಯ ತೋರಿಸಲಿಲ್ಲ ಅದರ ಬಗ್ಗೆ ನಾನು ಹೇಳಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ ಸಂಚಿಗೆ ಅವಕಾಶ ಇಲ್ಲದಂಥ ಚಿಂತನೆ ನಮ್ಮದು. ಈ ಮಾತನ್ನು ಸ್ಪಷ್ಟಪಡಿಸುತ್ತೇನೆ ಇವತ್ತು ರೈತರ ಬಗ್ಗೆ ಕಳಕಳಿಯ ವಿಚಾರದಲ್ಲಿ ಸರ್ಕಾರ ಕೊರತೆ ಮಾಡಿಕೊಂಡು ಹಿಂದೆ ಬಿದ್ದಿದೆ ಎಂಬತಕ್ಕ ವಿಚಾರ ಅಲ್ಲ. ನಾನು ಉದಾಹರಣೆ ಕೊಡುವುದಾದರೆ ಪಂಪ್‌ಸೆಟ್ ವಿಚಾರದಲ್ಲಿ ದರ ನಾವು ಕಡಿಮೆ ಮಾಡಬೇಕಾದರೆ ಇಷ್ಟೇ ಮಾಡಿ ಎಂದು ಭಾರಿ ಒತ್ತಡ ತರದೇ ಇರತಕ್ಕ ಕಾಲದಲ್ಲಿ ತಕ್ಷಣ ನಾವು ಮಾಡಿದ್ದೇವೆ. ಉದಾಹರಣೆ ಕೊಡುತ್ತಿದ್ದೆ. ನಾನು ಎಲ್ಲವನ್ನೂ ಮಾಡಿ ಮುಗಿಸಿದ್ದೇನೆ. ಎಂಬ ಮಾತನ್ನು ಆಡಲಾರೆ. ಆ ಪ್ರಶ್ನೆ ಅಲ್ಲ ಇವತ್ತು ರೈತ ಸಮುದಾಯದ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಕಳಕಳಿ ಹೊಂದಿದೆ. ಅದಕ್ಕಾಗಿ ಪ್ರತ್ಯೇಕವಾಗಿ ನಾನು ಹೇಳಿಕೆ ಕೊಡುತ್ತೇನೆಂಬ ವಿಚಾರ ಇಟ್ಟುಕೊಂಡಿದ್ದೇನೆ. ಇವತ್ತು ರೈತ ಸಂಘದ ವತಿಯಿಂದ ಮಾನ್ಯ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರು ಬಂದರು ಪ್ರೊಫೆಸರ್ ಅವರು ಬಂದರು ಬಾಬಾಗೌಡ ಪಾಟೀಲರು ಬಂದರು ಮಾತುಕತೆ ಆಡುತ್ತೇನೆಂದು ಬಂದರು ಆಗ ಮಾತುಕತೆ ಆಡುವುದಕ್ಕಾಗುವುದಿಲ್ಲ ಎಂದು ಹೇಗೆ ಸ್ವಾಮಿ ನಾವು ಹೇಳುವುದಕ್ಕೆ ಸಾಧ್ಯ? ಇಷ್ಟೇನೆ. ಎಲ್ಲರನ್ನೂ ಕರೆಯಬೇಕು ಮಾಡಬೇಕು ಎಂದು ವಿಚಾರ ಸರ್ಕಾರ ಏನೂ ಇಟ್ಟುಕೊಳ್ಳದೇ ಇರುವುದರಿಂದ

ಸರ್ಕಾರ ಬಂದವರ ಹತ್ತಿರ ಮಾತನಾಡಿದೆ. ಅವರಿಗೆ ತಿಳಿಸಿಕೊಟ್ಟೆವು ನೀವು ಮಾತನಾಡಬೇಕು ಎಂದರೆ ನಮ್ಮ ಹತ್ತಿರ ಮಾತನಾಡಬಹುದು. ಈಗ ಅದರ ಅವಶ್ಯಕತೆ ಇಲ್ಲ ಏಕೆಂದರೆ ಯಾವ ವಿಚಾರ ಇಟ್ಟು ನೀವು ಅದನ್ನು ಪ್ರತಿಪಾದನೆ ಮಾಡುತ್ತಿದ್ದೀರಿ ಅದೇ ವಿಚಾರವನ್ನು ನಾವಿಟ್ಟು ಹೇಳಿಕೆಯನ್ನು ಕೊಡುತ್ತೇವೆಂಬ ಮಾತನ್ನು ಸದನದಲ್ಲಿ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲರನ್ನೂ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಎಸ್. ಬಂಗಾರಪ್ಪ: ಸದನದಲ್ಲಿ ನಾವು ಒಂದು ಹೇಳಿಕೆ ಕೊಟ್ಟುಬಿಟ್ಟರೆ ನಿಮ್ಮನ್ನೆಲ್ಲಾ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡಿದ್ದೇವೆ ಎಂತಲೇ ಅರ್ಥ ಇಡೀ ಸದನ ಎಂದರೆ ಯಡಿಯೂರಪ್ಪನವರನ್ನು ತೆಗೆದುಕೊಂಡೂ ಎಂದೇ ಅದರ ಅರ್ಥ.

ಶ್ರೀ ಬಿ.ಎಸ್. ಯಡಿಯೂರಪ್ಪ: ರೈತನ ಬಗ್ಗೆ ಯೋಚನೆ ಮಾಡದಿದ್ದರೆ ಲೋಕಸಭಾ ಚುನಾವಣೆ ಬಂದಾಗ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ ಎಂದು ಮನವರಿಕೆ ಆದಮೇಲಾದರೂ ರೈತರ ಪರವಾಗಿ ಯೋಚನೆ ಮಾಡುತ್ತೀರಲ್ಲ ಅದಕ್ಕಾಗಿ ರೈತರ ಪರವಾಗಿ ನಾನು ಧನ್ಯವಾದ ಅರ್ಪಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೆ ಭಯ ಎನ್ನತಕ್ಕ ಪದ ನನ್ನ ಡಿಕ್ಷನರಿಯಲ್ಲಿರಲಿಲ್ಲ ಜಾಗ ಹುಡುಕಿ ಸೇರಿಸತಕ್ಕ ನಿಮ್ಮ ಪ್ರಯತ್ನ ಬೇಡ ಎಂದು ಹೇಳುವುದಿಲ್ಲ ಆದರೆ ನನ್ನ ಡಿಕ್ಷನರಿಯಲ್ಲಿ ಅಂಥ ವಿಚಾರದಲ್ಲಿ ಜಾಗ ಇಲ್ಲ ಎಂಬುದನ್ನು ಮಾತ್ರ ಸ್ಪಷ್ಟಪಡಿಸುತ್ತೇನೆ. ಬೇರೆ ವಿಚಾರದಲ್ಲಿ ಭಯ ಪಡದೇ ಇರತಕ್ಕ ವ್ಯಕ್ತಿ ಅಲ್ಲ ಎಂದು ಹೇಳುತ್ತಿಲ್ಲ. ಆದರೆ ಈ ವಿಚಾರದಲ್ಲಿ ಬಂಗಾರಪ್ಪ ಸಮಿತಿ ವರದಿ ಕೊಟ್ಟಿರತಕ್ಕ ನಾನು ಇನ್ನೂ ಇಲ್ಲಿದ್ದೇನೆ. ಅದೇ ವಿಚಾರದ ಬಗ್ಗೆ ರೈತ ಸಂಘದವರು ಮಾತನಾಡಿದ್ದಾರೆ. ತಮಗೂ ಕೂಡ ಗೊತ್ತಿದೆ. ಎಷ್ಟೋ ಸಾರಿ ವ್ಯಾಖ್ಯಾನ ಮಾಡಿದ್ದೀರಿ. ಊರಿನಲ್ಲಿ ಜನ ಸೇರಿಸಲಿಲ್ಲ ಎಂದರೆ ಸೇರಿಸುವುದಿಲ್ಲ ಎಂದರೆ ಇನ್ನೇನು ಮಾಡುವುದಕ್ಕಾಗುತ್ತದೆ? ಬೇಡಪ್ಪ ಎಂದು ಹಿಂದಕ್ಕೆ ಬರೋಣ. ಯಡಿಯೂರಪ್ಪನವರನ್ನು ಸೇರಿಸಿಕೊಳ್ಳುವುದಕ್ಕೆ ಜನ ತೋರಣ ಕಟ್ಟಿಕೊಂಡು ಒಳಗಡೆ ಕರೆದುಕೊಂಡರೆ ನಾನು ಬೇಡ ಎಂದು ಹೇಳುವುದಿಲ್ಲ ಸಂತೋಷಪಡುತ್ತೇನೆ. ಅದರೆ ಬಂಗಾರಪ್ಪನವರನ್ನು ಹಳ್ಳಿಯಲ್ಲಿ ಸೇರಿಸುವುದಿಲ್ಲ ಎಂದರೆ ಯಡಿಯೂರಪ್ಪನವರನ್ನು ಒಳಗಡೆ ಬಿಡುತ್ತಾರೆ ಎಂದರೆ ಸ್ಪೆಷಲ್ ಕಾರಣ ಅದಕ್ಕೆ ಇರಬೇಕು ಅದನ್ನು ನಮಗೂ ಸ್ವಲ್ಪ ಹೇಳಿದರೆ ನಾವೂ ಸೇರಿಕೊಳ್ಳುತ್ತೇವೆ. ಆಮೇಲೆ ನೋಡೋಣ ಅದು ಪ್ರತ್ಯೇಕ ಚುನಾವಣೆ ಬಂದಾಗ ಗೊತ್ತಾಗುತ್ತದೆ. ಆಗ ವಿಚಾರ ಮಾಡೋಣ ಯಾರು ಹೊರಗಡೆ ಇರುತ್ತಾರೆ ಯಾರು ಒಳಗಡೆ ಹೋಗುತ್ತಾರೆ ಎಂದು ಮಾನ್ಯ ಸಭಾಧ್ಯಕ್ಷರೆ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರತಕ್ಕದ್ದು ನಾವು ಹಲವಾರು ವಿಚಾರದಲ್ಲಿ ಹಣವನ್ನು ಕೂಡ ಕಳೆದಸಾರಿ ಖರ್ಚು ಮಾಡತಕ್ಕ ಸಂದರ್ಭ ಬಂದುಬಿಡುತ್ತದೆ. ಹೊಸ ಜಿಲ್ಲೆಗಳ ರಚನೆಯಾಗಬೇಕು ತಾಲ್ಲೂಕುಗಳ ರಚನೆಯಾಗಬೇಕು ಹೋಬಳಿ ಕಚನೆಯಾಗಬೇಕು ಅದರ ಬಗ್ಗೆ ವರದಿಗಳು ಸರ್ಕಾರದ ಹತ್ತಿರ ಬಂದಿವೆ ಇಲ್ಲ ಎಂದು ಹೇಳುವುದಿಲ್ಲ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಕೂಡ ಈ ವಿಚಾರ ಅಡಗಿದೆ. ಇದರ ಬಗ್ಗೆ ಇತ್ತೀಚೆಗೆ ಬಹಳ ಜನರು ಬಂದೂ ಬಂದು ನಮ್ಮ ಜಿಲ್ಲೆಯಲ್ಲಿ ಮತ್ತೊಂದು ಜಿಲ್ಲೆಯಾಗಬೇಕು ಮತ್ತೊಂದು ತಾಲ್ಲೂಕು ಆಗಬೇಕೆಂದು ಹೇಳುತ್ತಿದ್ದಾರೆ. ನಾನು ಈ ಬಗ್ಗೆ ಸಧ್ಯಕ್ಕೆ ಅಂತಿಮ ತೆರೆ ಎಳೆಯುವುದು ಒಳ್ಳೆಯದು. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ವಿಚಾರ ಮಾಡುತ್ತದೆ. ಇದು ಕ್ಯಾಬಿನೆಟ್ ಮುಂದೆ ಇದ್ದೆಯೆಂದು ಹೇಳಬಲ್ಲೆ ಈಗ ತಕ್ಷಣ ಯಾವುದೇ ಜಿಲ್ಲೆಯ ಪುನರ್ವಿಂಗಡಣೆ ಇರಬಹುದು ತಾಲ್ಲೂಕು ಪುನರ್ವಿಂಗಡಣೆ ಇರಬಹುದು

ಹೊಸದಾಗಿ ಮಾಡುವ ವಿಚಾರ ಇರಬಹುದು ಅದನ್ನು ಸರ್ಕಾರ ಈ ಕೂಡಲೇ ನಿರ್ಣಯವನ್ನು ತೆಗೆದುಕೊಳ್ಳುವುದಿಲ್ಲ. ಇದನ್ನು ಮುಂದೆ ನೋಡೋಣ ಪರಿಶೀಲನೆ ಮಾಡಿ ಸೂಕ್ತವಾದ ಕಾಲದಲ್ಲಿ ಸೂಕ್ತವಾದ ತೀರ್ಮಾನವನ್ನು ಮಾಡುತ್ತೇವೆ. ತಕ್ಷಣ ಗಮನ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮೆಲ್ಲರ ಗಮನಕ್ಕೆ ತರುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ....

ಶ್ರೀ ಡಿ.ಬಿ. ಚಂದ್ರೇಗೌಡ: ಜಿಲ್ಲಾ ಪುನರ್‌ವಿಂಗಡಣೆ ಮಾಡಿಯೇ ಮಾಡುತ್ತೇವೆಂದು ಮಾನ್ಯ ಕೆ.ಹೆಚ್. ಪಾಟೀಲರು ಹೇಳಿದ್ದರು ಅವರು ಈ ಬಗ್ಗೆ ಏನು ಹೇಳುತ್ತಾರೆ?

ಶ್ರೀ ವಾಟಾಳ್ ನಾಗರಾಜ್: ಈ ಬಗ್ಗೆ ಸಚಿವಸಂಪುಟದ ಉಪಸಮಿತಿ ವರದಿ ಕೊಟ್ಟಿದೆ.

ಶ್ರೀ ಎಸ್. ಬಂಗಾರಪ್ಪ: ನಾಗರಾಜರವರೇ ಇನ್ನೂ ವರದಿ ಬಂದಿಲ್ಲ ಮಾನ್ಯ ಅಧ್ಯಕ್ಷರೇ ಈ ಪರಿಸ್ಥಿತಿಯಲ್ಲಿ ಒಣ ಬೇಸಾಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ರಾಜ್ಯದ ಹಲವು ಭಾಗ ಬರಗಾಲಕ್ಕೆ ತುತ್ತಾಗಿವೆ. ದೇವರಾಜ್ ಅರಸ್‌ರವರ ಕಾಲದಿಂದಲೂ 1973-74ನೇ ಸಾಲಿನಿಂದಲೂ ತೀವ್ರವಾಗಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಜನರಿಗೆ ಉದ್ಯೋಗ ಒದಗಿಸುವ ಬಗ್ಗೆ ಹೆಚ್ಚಿನ ಹಣವನ್ನು ತೊಡಗಿಸುತ್ತಾ ಬಂದಿದ್ದೇವೆ. ನಾವು ಬೋರ್‌ವೆಲ್‌ಗಳನ್ನು ಹಾಕುತ್ತಿದ್ದೇವೆ ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಸಾವಿರಾರು ಬೋರ್‌ವೆಲ್‌ಗಳನ್ನು ತೋಡಲಾಗಿದೆ. ತಮ್ಮ ಕಾಲದಲ್ಲಿಯೂ ಸಾವಿರಾರು ಬೋರ್‌ವೆಲ್‌ಗಳನ್ನು ಹಾಕಿಸಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್: ಅಂಕಿಅಂಶಗಳನ್ನು ಕೊಟ್ಟು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ: ಸಾವಿರಾರು ಎಂದು ಹೇಳಿದೆ ತಾವು ಲಕ್ಷಾಂತರ ಎಂದು ಹೇಳುವುದಾದರೆ ಆಲ್‌ರೈಟ್ ತಾವು ಸುಮ್ಮನೆ ಏಕೆ ಮಾತನಾಡುತ್ತೀರಿ? ನಾನು ಸಾವಿರಾರು ಎಂದು ಹೇಳಿದ್ದೇನೆ. ನಮ್ಮ ಕಾಲದಲ್ಲೂ ಸಾವಿರಾರು ತೆಗೆಸಿದ್ದೇವೆ. ಇವತ್ತು ಪಟ್ಟಣ ಪ್ರದೇಶದಲ್ಲಿನ ಕುಡಿಯುವ ನೀರಿನ ವಿಷಯವನ್ನೇ ತೆಗೆದುಕೊಳ್ಳೋಣ ಬೆಂಗಳೂರಿನ ಬಗ್ಗೆ ಹೇಳುವುದಾದರೆ ಕಾವೇರಿಯಿಂದ ನೀರನ್ನು ತರುವುದನ್ನು ಬಿಟ್ಟರೆ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಈ ವರ್ಷ ಬೆಂಗಳೂರು ನಗರದಲ್ಲಿ 600 ಬೋರ್‌ವೆಲ್‌ಗಳನ್ನು ಈ ಸಾರಿ ತೆಗೆಸುತ್ತಿದ್ದೇವೆ. ಕಾವೇರಿಯಿಂದ ನೀರನ್ನು ಹೆಚ್ಚು ಪ್ರಮಾಣದಲ್ಲಿ ತರುವುದು ತಡವಾದ್ದರಿಂದ ತಕ್ಷಣ ನೀರು ಒದಗಿಸುವ ಸಲುವಾಗಿ ಬೋರ್‌ವೆಲ್ ಹಾಕಿಸಬೇಕಾಗುತ್ತದೆ. ಮತ್ತೆ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕುಡಿಯುವ ನೀರಿನ ಸಲುವಾಗಿ 150 ಬೋರ್‌ವೆಲ್ ತೆಗೆಸುವ ಕಾರ್ಯಕ್ರಮ ಹಾಕಿದ್ದೇವೆ. ಇವತ್ತು ಭಾರಿ ಮಳೆ ಆಗಿರತಕ್ಕ ಬೀದರ್ ಗುಲ್ಬರ್ಗಾ ಟೌನ್‌ಗಳಲ್ಲಿ ಕುಡಿಯುವ ನೀರಿನ ಅಭಾವ ಅಷ್ಟೊಂದು ಬಂದಿಲ್ಲ. ನಿಜ ಹೇಳಬೇಕೆಂದರೆ ಈ ಭಾಗಗಳಲ್ಲಿ ಹೆಚ್ಚಿನ ಮಳೆಯಿಂದಾಗಿ ಹಾಕಿದ್ದ ಬೆಳೆಗಳೆಲ್ಲಾ ಕೊಚ್ಚಿಹೋದವು ಸದಸ್ಯರಾದ ಮಾಲಿಕಯ್ಯ ಗುತ್ತೇದಾರರವರಿಗೆ, ಕಮರುಲ್ ಇಸ್ಲಾಮ್‌ರವರಿಗೆ ವಿಷಯ ಗೊತ್ತಿದೆ ಆ ಭಾಗದಲ್ಲಿ ಮಳೆ ಜಾಸ್ತಿಯಾಗಿ ತೊಗರಿ, ಹೆಸರು, ಉದ್ದು ಎಲ್ಲವೂ ತೊಳೆದುಹೋಯಿತು. ಆದರೆ ಕುಡಿಯುವ ನೀರಿಗೆ ಸಹಕಾರಿಯಾಗಿದೆ. ನಮ್ಮ ಕಡೆ ಮಳೆ ಇಲ್ಲದೇ ಬೆಳೆಯೂ ಹೋಯಿತು ಜೊತೆಗೆ ಕುಡಿಯುವ ನೀರೂ ಇಲ್ಲ, ರಾಣಿಬೆನ್ನೂರು, ರೋಣ, ಹಿರೇಕೆರೂರು ಹಾಗೂ ಅನೇಕ ಭಾಗಗಳಲ್ಲಿ ಬಿತ್ತನೆ ಮಾಡುವುದಕ್ಕೂ ಆಗಲಿಲ್ಲ. ಧಾರವಾಡ ಬಿಜಾಪುರ ಜಿಲ್ಲೆಗಳಲ್ಲಿ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂಬುದನ್ನು ಮರೆಯುವುದಕ್ಕಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ರೈತರು ತಮ್ಮ ಸಬ್‌ಮರ್ಸಿಬಲ್ ಪಂಪ್‌ಗಳನ್ನು ಶೇಕಡ 25 ರಷ್ಟು ಹಣಕ್ಕೆ ಮಾರಾಟ ಮಾಡುತ್ತಿದ್ದಾರೆ. ವಾಟರ್ ಟೇಬಲ್ ಬಹಳ ಕಡಿಮೆಯಾಗುತ್ತಿದೆ. ಇದಲ್ಲದೆ ವರ್ಷದಿಂದ ವರ್ಷಕ್ಕೆ

ಬರುವ ಮಳೆಯ ಪ್ರಮಾಣವೂ ಕಡಿಮೆಯಾಗುತ್ತಿದೆ. ಇವತ್ತು ಅರ್ಜುನ ಬಾಣ ಹೊಡೆದರೂ ಕೂಡಾ ನೀರು ತೆಗೆಯುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ಲಾರಿಗಳ ಮೂಲಕ ಟ್ಯಾಂಕರ್‌ಗಳ ಮೂಲಕ ನೀರನ್ನು ದೊಡ್ಡದೊಡ್ಡ ಪಟ್ಟಣಗಳಿಗೆ ತಂದು ಒದಗಿಸಬೇಕಾಗುತ್ತದೆ. ನೀರು ಸಿಗದ ಹಳ್ಳಿಗಳಿಗೆ ಪೈಪ್ಡ್ ವಾಟರ್ ಸಪ್ಲೈ ಮಾಡದೇ ಇದ್ದರೆ ಬೇರೆ ದಾರಿ ಇಲ್ಲ ಎಂದು ನಾನು ಹೇಳುತ್ತೇನೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಾವು ಕಾರ್ಯಕ್ರಮ ಮುಗಿಸಿ ಅಣ್ಣಿಗೇರಿಗೆ ಹೋಗಿದ್ದೆವು. ಅಣ್ಣಿಗೇರಿಯಲ್ಲಿ ಸಾವಿರಾರು ಜನರು ಬಂದು ನಮ್ಮಲ್ಲಿರುವ ನೀರು ಉಪ್ಪು ಇದನ್ನು ಕುಡಿಯುವುದಕ್ಕೆ ಆಗುವುದಿಲ್ಲವೆಂದು ಹೇಳಿದರು ಅಲ್ಲಿಂದ 5-6 ಕಿಲೋ ಮಿಟರ್ ದೂರದಲ್ಲಿ ಒಂದು ಹಳ್ಳ ಇದೆ ಅಲ್ಲಿಂದ ನೀರನ್ನು ತೆಗೆದುಕೊಳ್ಳಬಹುದು ಎಂದು ಹೇಳಿದ್ದರು. ಭದ್ರಾಪುರದಿಂದ ತರಬಹುದೆಂದು ಹೇಳಿದರು ಆ ತಕ್ಷಣವೇ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಆರ್ಡರ್ ಅನ್ನು ಇಷ್ಯೂ ಮಾಡಿ ಎಂದು ಸೂಚನೆ ಕೊಟ್ಟೆವು ಅವರಿಗೆ ನೀರನ್ನು ಕೊಟ್ಟಿದ್ದೂ ಆಗಿದೆ. ಅಣ್ಣಿಗೇರಿಯಲ್ಲಿ ನಮ್ಮ ಅದೃಷ್ಟಕ್ಕೆ 15 ಸಾವಿರ ಗ್ಯಾಲನ್ ನೀರು ಸಿಕ್ಕಿದೆ. ಅಲ್ಲಿ ಕೆಲಸ ಕೂಡ ನಡೆದಿದೆ. ಆ ಜನರಿಗೆ ಕುಡಿಯುವ ನೀರನ್ನು ಕೊಟ್ಟರೆ ಎಷ್ಟೋ ಸಂತೋಷಪಡುತ್ತಾರೆ. ಗದಗ್‌ಗೆ ಹೆಚ್ಚಿನ ಹಣವನ್ನು ಕೊಡಬೇಕೆಂಬ ಕಾರ್ಯಕ್ರಮ ಇದೆ. ಮೊನ್ನೆ ಪಕ್ಷಾತೀತವಾಗಿ ಎಂ.ಎಸ್. ಪಾಟೀಲರು ಹಾಗೂ ಕೌಜಲಗಿಯವರು ಇನ್ನೂ ಅನೇಕ ಜನರು ಚಿಕ್ಕೋಡಿ ತಾಲ್ಲೂಕಿನ ಬಗ್ಗೆ ಪ್ರಸ್ತಾಪ ಮಾಡಿದರು. ಸಚಿವಸಂಪುಟದ ಒಪ್ಪಿಗೆಗೂ ಕಾಯದೆ ಅಂದರೆ ಒಂದು ಮಿತಿಗೆ ಒಳಪಟ್ಟು ಮೇಲಿದ್ದರೆ ಅದಕ್ಕೆ ಸಚಿವ ಸಂಪುಟದ ಒಪ್ಪಿಗೆ ಬೇಕಾಗುತ್ತದೆ ಇದು ತಮಗೆಲ್ಲರಿಗೂ ಗೊತ್ತಿದೆ ಸಚಿವ ಸಂಪುಟದ ತೀರ್ಮಾನವನ್ನು ಆಮೇಲೆ ಮಾಡಿಕೊಳ್ಳೋಣವೆಂದು ಮೊದಲು ಆರ್ಡರ್ ಇಷ್ಯೂ ಮಾಡಿ ಹಣ ಕೊಟ್ಟೆವು ನಮ್ಮ ಸಚಿವರೂ ಕೂಡ ಚಿಕ್ಕೋಡಿ ಬೆಳಗಾಂಗೆ ಹೋಗಿ ಬೆಳಿಗ್ಗೆ ಬಂದಿದ್ದಾರೆ. ಬೆಳಗಾಂಗೆ ಕುಡಿಯುವ ನೀರಿನ ಸಲುವಾಗಿ 25 ಕೋಟಿ ರೂಪಾಯಿ ನೀಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಪಟ್ಟಣ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡಲು ಸುಮಾರು 17-18 ಯೋಜನೆಗಳ ಬಗ್ಗೆ ಹಿಂದಿನ ಸರಕಾರ ತೀರ್ಮಾನ ಮಾಡಿದ್ದನ್ನು ತಾವು ಮುಂದುವರಿಸುತ್ತೇವೆಂದು ಹೇಳುತ್ತಿದ್ದೀರಿ ಅದನ್ನು ಮುಂದುವರಿಸುತ್ತಿದ್ದೀರಿ ಆದರೆ ಕೆಲಸ ಕಾರ್ಯಗಳು ನಿಧಾನವಾಗುತ್ತಿವೆ. ಅದನ್ನು ತ್ವರಿತವಾಗಿ ಹೆಚ್ಚು ಬೇಗ ಮಾಡಿಕೊಟ್ಟರೆ ಅನುಕೂಲ ಇದನ್ನು ಗಮನಿಸಬೇಕು.

ಶ್ರೀ ಎಸ್. ಬಂಗಾರಪ್ಪ: ಅನೇಕ ಜನ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ ಇದನ್ನು ತೀವ್ರವಾಗಿ ತೆಗೆದುಕೊಂಡು ಅಂದರೆ ಈ ಪಟ್ಟಣ ಪ್ರದೇಶಗಳಿಗೆ ನೀರನ್ನು ಒದಗಿಸುವ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಆಮೇಲೆ ಗ್ರಾಮಾಂತರ ಪ್ರದೇಶಕ್ಕೆ ಬರುತ್ತೇನೆ. ಹಣವನ್ನು ರಿಲೀಸ್ ಮಾಡುತ್ತಿದ್ದೇವೆ ಎಲ್ಲವನ್ನೂ ಪಟ್ಟೆ ಮಾಡುವುದಕ್ಕಾಗುವುದಿಲ್ಲ ಈಗ ಪಟ್ಟಣ ಪ್ರದೇಶಕ್ಕೆ ನಗರ ಪ್ರದೇಶಕ್ಕೆ ಹಣವನ್ನು ಕೊಡಬೇಕೆಂಬ ದೃಷ್ಟಿಯಿಂದ ಮಾನ್ಯ ರಾಜಶೇಖರಮೂರ್ತಿಯವರು ಏನು ಹೇಳಿದ್ದರೋ ಆ ಮಾತನ್ನು ನಾವು ಉಳಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ನೀರು ಕೊಡಬೇಕೆಂಬ ದೃಷ್ಟಿಯಿಂದ ಇದ್ದೇವೆ ಸರಕಾರ ಅದಕ್ಕೆ ಬದ್ಧವಾಗಿದೆ ಅದಕ್ಕೆ ಹಣವನ್ನು ಸರಕಾರ ಬಿಡುಗಡೆ ಮಾಡುತ್ತದೆ. ಇದರ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿದ್ದೇವೆ. ತ್ವರಿತ ಗತಿಯಲ್ಲಿ ಹಣವನ್ನು ಕೊಡುತ್ತಿದ್ದೇವೆ. ಕ್ಯಾಬಿನೆಟ್ ರ್‍ಯಾಟಿಫಿಕೇಷನ್ ಮಾಡುವುದು ಇನ್ನಾವುದಕ್ಕೂ ಕಾಯದೆ ಅದನ್ನು ಆಮೇಲೆ ಮಾಡಿಕೊಳ್ಳೋಣ ಮೊದಲು ಆರ್ಡರ್ ಇಷ್ಯೂ ಮಾಡಿ ಹಣವನ್ನು ಬಿಡುಗಡೆ ಮಾಡೋಣವೆಂಬ ದೃಷ್ಟಿಯಿಂದ ಹೋಗುತ್ತಿದ್ದೇವೆ ಮೊನ್ನೆ ಆನೇಕಲ್ ತಾಲ್ಲೂಕಿನವರು ಬಂದಿದ್ದರು. ಎಲ್ಲರೂ ಪಕ್ಷಾತೀತವಾಗಿ ಬಂದಿದ್ದರು.

6 ಬೋರ್‌ಗಳು ಒಂದು ಹಳ್ಳಿಯಲ್ಲಿ ಇದೆ ಆರು ಬೋರ್‌ವೆಲ್‌ಗಳಲ್ಲೂ ಒಂದು ತೊಟ್ಟು ನೀರಿಲ್ಲ ಎಲ್ಲಾ ಪಕ್ಷದ ಸರಕಾರವಿದ್ದಾಗ ಇದನ್ನು ತೆಗೆಸಿರತಕ್ಕಂಥಾದ್ದು ನೀರು ಇಲ್ಲಿ ಏತಕ್ಕೆ ಕಡಿಮೆ ಆಯಿತು ಎಂದರೆ ವರ್ಷದಿಂದ ವರ್ಷಕ್ಕೆ ವಾಟರ್‌ಲೆವಲ್ ಕೆಳಕ್ಕೆ ಹೋಗುತ್ತಿದೆ ಇದಕ್ಕೇನು ಮಾಡಬೇಕೆಂದು ಗೊತ್ತಾಗುವುದಿಲ್ಲ. ಹೊಸದಾಗಿ ಒಂದು ಯೋಜನೆ ಬಂದಿದೆ ಎಂದು ಮೊನ್ನೆ ಹೇಳಿದರು. 10 ಸಾವಿರ ಅಡಿಯವರೆಗೆ ಬೋರ್‌ವೆಲ್ ಹೋದರೆ 10-15 ಸಾವಿರ ಗ್ಯಾಲನ್ ನೀರು ಸಿಗುತ್ತದೆಂದು ಹೇಳಿದರು ನಾವು ಕೂಡ ಅದನ್ನು ತಂದು ಇಲ್ಲಿ ಉಪಯೋಗಿಸಿಕೊಳ್ಳಬಹುದು. 10 ಸಾವಿರ ಗ್ಯಾಲನ್ ನೀರನ್ನು ಇದರಿಂದ ತರಬಹುದು because we have to mine water. That is called water mining.

ಆದರೆ ಅದು ಅಷ್ಟೆ ಅಪಾಯ. ಭೂಮಿಯ ಒಳಗಡೆ ಇರತಕ್ಕಂತ ಜಲವನ್ನು ಸಂಪೂರ್ಣವಾಗಿ ಹೀರಿದರೆ ಪಕ್ಕದಲ್ಲಿರತಕ್ಕಂತಹ ಬೋರ್‌ವೆಲ್‌ನಲ್ಲಿ ನೀರು ಇರುವುದಿಲ್ಲ ನಾವು 100-150-300-400-500 ಅಡಿತನಕ ಹೋಗಿದ್ದೇವೆ. ಅಷ್ಟಕ್ಕೆ ಮುಂದೆ ಹೋಗಿಲ್ಲ. ಇನ್ನು 10 ಸಾವಿರ ಅಡಿ ಹೋದರೆ ಆ ಮೆಷಿನ್ ಏನಾಗುತ್ತದೆ. ಬೇರಾವುದೇ ಬೋರ್‌ವೆಲ್‌ನಲ್ಲಿ ಒಂದು ತೊಟ್ಟು ನೀರು ಇರುವುದಿಲ್ಲ. ಕೆಲವು ಕಿಲೋ ಮೀಟರು ತನಕ ನೀರೆಲ್ಲವೂ ಹೋಗುತ್ತದೆ. ಒಂದು ಬೋರ್‌ವೆಲ್ ತೆಗೆದರೆ ಓಪನ್ ವೆಲ್‌ಗಳು ಅಂದರೆ ಸೇದುವ ಬಾವಿಗಳು ಏನು ಇವೆ ಅವಷ್ಟೂ ಖಾಲಿಯಾಗಿದೆ ಇದು ತಮ್ಮ ಅನುಭವದಲ್ಲೂ ಬಂದಿರಬಹುದು. ನೀರನ್ನು ತೆಗೆದೂ ತೆಗೆದೂ ಸಂಪೂರ್ಣವಾಗಿ ಅದನ್ನು ಮುಗಿಸತಕ್ಕಂತಹ ಪರಿಸ್ಥಿತಿಗೆ ಹೋಗುತ್ತದೆ. ಅಧ್ಯಕ್ಷರೇ ಇನ್ನು ಅರ್ಧ ಗಂಟೆಯಲ್ಲಿ ನನ್ನ ಉತ್ತರವನ್ನು ಮುಗಿಸುತ್ತೇನೆ. 3 ಗಂಟೆಗೆ ವಿಧಾನಪರಿಷತ್ತಿನಲ್ಲಿ ಉತ್ತರ ಕೊಡಬೇಕಾಗಿದೆ ಇನ್ನು ಬರಗಾಲದ ವಿಚಾರ....

ಶ್ರೀ ಡಿ.ಬಿ. ಚಂದ್ರೇಗೌಡ: ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ನ್ನು ಪ್ರಾರಂಭ ಮಾಡಿ ನೀರಿಗೆ ಹೋದಿರಿ....

ಶ್ರೀ ಎಸ್. ಬಂಗಾರಪ್ಪ: ಅದರ ನೆನಪು ಬಂತು ಅದನ್ನು ಸ್ಟಾರ್ಟ್ ಮಾಡಿಕೊಂಡೆ ಈಗ ಇರತಕ್ಕಂತಹ ನೀರನ್ನು ಕನ್ಸರ್ವ್ ಮಾಡಿಕೊಳ್ಳಬೇಕು. ಅತೀ ಡೀಪಾಗಿ ಹೋಗತಕ್ಕಂಥಾದ್ದು ಒಳ್ಳೆಯದಲ್ಲ ಆ ಹುಚ್ಚು ತನಕ್ಕೆ ಮಾತ್ರ ಸರಕಾರಕ್ಕೆ ಯಾರಿಂದಲೇ ಆಗಲಿ ಸಲಹೆ ಸೂಚನೆಗಳು ಬರದೇ ಇರಲೀ ಎಂದು ನನ್ನ ಆಶಯ. 10 ಸಾವಿರದವರೆಗೆ ನಾವ್ಯಾರೂ ಮಾಡುವುದು ಬೇಕಾಗಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕಂದಾಯ ಇಲಾಖೆಯ ಮುಖಾಂತರ ಈ ಕಾರ್ಯಕ್ರಮವನ್ನು ಹಾಕಿದ್ದೇವೆ. ಬರಗಾಲದ ವಿಚಾರದಲ್ಲಿ ಆರ್.ಡಿ.ಪಿ.ಆರ್. ಇಲಾಖೆಯ ಮುಖಾಂತರ ಪೈಪ್‌ಡ್‌ವಾಟರ್ ಕೊಡತಕ್ಕ ಮತ್ತೊಂದು ರೀತಿಯಲ್ಲಿ ನೀರನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದನ್ನು ದೊಡ್ಡಪ್ರಮಾಣದಲ್ಲಿ ಮಾಡುತ್ತೇನೆ. ನೀರು ಎಲ್ಲಿ ಸಿಗುವುದಿಲ್ಲ ಅಂತಹ ಕಡೆಗಳಿಗೆ ಗ್ರಾಮಾಂತರ ಪ್ರದೇಶಗಳಾಗಲೀ, ಎಲ್ಲೇ ಆಗಲಿ ಅಂತಹ ಕಡೆಗೆ ಅನಿವಾರ್ಯವಾಗಿ ಲಾರಿಗಳು ಮತ್ತು ಟ್ಯಾಂಕರ್‌ಗಳ ಮೂಲಕ ಕಾರ್ಯಕ್ರಮವನ್ನು ಹಾಕುತ್ತೇವೆ. ಗ್ರಾಮಾಂತರ ಪ್ರದೇಶಗಳಿಗೆ ನಾವು ಹೋದಾಗ ಈ ಮಾತನ್ನು ಸಹ ಹೇಳಿದ್ದೇನೆ. ಗ್ರಾಮಾಂತರ ಪ್ರದೇಶದ ಜನರಿಗೆ ಉದ್ಯೋಗವನ್ನು ಕೊಡತಕ್ಕ ವಿಚಾರದಲ್ಲಿ ತಾವು ಏನು ಕಳಕಳಿಯನ್ನು ತಮ್ಮ ಮಾತಿನ ಮುಖಾಂತರ ವ್ಯಕ್ತಪಡಿಸಿದ್ದೀರಿ ಅದನ್ನು ನಾನು ಒಪ್ಪುತ್ತೇನೆ. ನಾವು ಅದಕ್ಕಾಗಿ ಹಣವನ್ನು ತೆಗೆದಿಟ್ಟಿದ್ದೇವೆ. ಅದಕ್ಕಾಗಿ ಹಣವನ್ನು ಸಹ ಬಿಡುಗಡೆ ಮಾಡಿದ್ದೇವೆ. ಹಲವಾರು ಕಾರ್ಯಕ್ರಮಗಳನ್ನು ಹಲವಾರು ಯೋಜನೆಗಳ ಅಡಿಯಲ್ಲಿ ಹಾಕಿಕೊಂಡು ಹಣವನ್ನು ಖರ್ಚು ಮಾಡಿ ಜನರಿಗೆ ಉದ್ಯೋಗ ಕೊಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ.

ಒಣ ಬೇಸಾಯಕ್ಕೆ ಅನುಕೂಲ ಮಾಡಿಕೊಟ್ಟಿಲ್ಲವೆಂದು ಹೇಳಿದ್ದಾರೆ ಇದರ ಬಗ್ಗೆ ಒಂದು ಚಕಾರ ಶಬ್ದ ಮಾತನಾಡಿಲ್ಲವೆಂದು ಹೇಳಿದ್ದೀರಿ ತಾವು ವಿಚಾರ ಮಾಡಿದರೆ ಗೊತ್ತಾಗುತ್ತದೆ. ಡಿ.ಎಲ್.ಬಿ.ಎಸ್. ಬೇಕಾದಷ್ಟು ಇವೆ. ಅದರ ಬಗ್ಗೆ ವರ್ಲ್ಡ್‌ಬ್ಯಾಂಕ್ ಪ್ರಾಜೆಕ್ಟ್ ಇದೆ. ವಾಟರ್‌ಸಪ್ಲೈ ಪ್ರೋಗ್ರಾಂಗಳಿವೆ. ಕೇಂದ್ರ ಸರ್ಕಾರದ ಏಡೇಡ್ ಪ್ರಾಜೆಕ್ಟ್‌ಗಳಿವೆ. ನಮ್ಮದೇ ಆದ ಕಾರ್ಯಕ್ರಮಗಳನ್ನು ಹಾಕಿಕೊಂಡು ನಡೆಸುತ್ತಿದ್ದೇವೆ. ಅದಕ್ಕಾಗಿ ಹಣವನ್ನು ನಾವು ಕೊಟ್ಟಿದ್ದೇವೆ. ಅಂಕಿ ಅಂಶಗಳು ಬೇಕಾದರೆ ತಮಗೆ ಕಳುಹಿಸಿ ಕೊಡುತ್ತೇನೆ ಈ ಕಾರ್ಯಕ್ರಮಗಳು ಏನಿವೆ ಮಳೆಯ ಪ್ರಮಾಣ ಕಡಿಮೆ ಬೀಳತಕ್ಕ ಕರ್ನಾಟಕ ರಾಜ್ಯದಲ್ಲಿ ಮುಕ್ಕಾಲು ಭಾಗ ಮಳೆ ಕಡಿಮೆ ಬಿಳತಕ್ಕ ಪ್ರದೇಶಗಳಿವೆ. ಕಾಲು ಭಾಗ ಮಾತ್ರ ನೀರಾವರಿ ಬರುತ್ತದೆ. ಉಳಿದದ್ದೆಲ್ಲ ಡ್ರೈಲ್ಯಾಂಡ್ ಕಲ್ಟಿವೇಷನ್ ಬರುತ್ತದೆ. ಅದಕ್ಕಾಗಿ ಹಣವನ್ನು ನಿಗದಿ ಮಾಡಿ ಇಟ್ಟಿದ್ದೇವೆ. ಹಣವನ್ನು ಸಹ ಖರ್ಚು ಮಾಡಿದ್ದೇವೆ. ಈ ಕಾರ್ಯಕ್ರಮಗಳನ್ನು ಮುಂದುವರಿಸುತ್ತೇವೆ. ಆದರೆ ಅತಿಯಾಗಿ ನೀರು ಕಡಿಮೆ ಬಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೇ? ರೈತರ ಪಂಪುಸೆಟ್‌ಗಳಿಗೆ ಯಾವ ರೀತಿಯಾಗಿ ನೀರು ಕೊಡಬೇಕೋ ಗೊತ್ತಿಲ್ಲ ಒಣ ಬೇಸಾಯಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿರಕ್ಕ ನೀರಿನ ಪ್ರಮಾಣ ಕಡಿಮೆಯಾದರೆ ಏನು ಮಾಡಬೇಕು? ಅದನ್ನು ವಿಚಾರಮಾಡಿ ನಾವು ಪಂಪ್‌ಸೆಟ್‌ಗಳನ್ನು ಕಡಿಮೆ ಮಾಡಬೇಕೆಂದು ಹೇಳಿದ್ದೇವೆ. ಈಗ ಸಹಕಾರ ಸಂಘಗಳ ಕ್ಷೇತ್ರದಲ್ಲಿ ಸಹಿತ ಏತ ನೀರಾವರಿ ಯೋಜನೆಗಳನ್ನು ಮಾಡಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿವೆ. ಅದೇ ರೀತಿಯಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಏತನೀರಾವರಿ ಯೋಜನೆಗಳು ಇವೆ. ಅದರ ಬಗ್ಗೆ ನಾನು ರೈತರ ಬಗ್ಗೆ ಹೇಳಿಕೆ ಕೊಡುವಾಗ ಆ ವಿಚಾರ ಪ್ರಸ್ತಾಪ. ಮಾಡಿದ್ದೇನೆ. ಅದರ ಬಗ್ಗೆ ಪ್ರತ್ಯೇಕವಾಗಿ ಉತ್ತರವನ್ನು ನಾನು ಕೊಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಅನೇಕ ಕಾರಣಗಳಿಂದ ಹಲವಾರು ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ ಹೆಚ್ಚಿನ ಸಂಪನ್ಮೂಲವನ್ನು ಸಂಗ್ರಹಿಸಲಿಕ್ಕೆ ಸಾಧ್ಯವಾಗಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಇದು ಪರ್‌ಫಾರ್ಮೆನ್ಸ್ ಬಜೆಟ್ ಅಲ್ಲವೆಂದು ಸಹ ಹೇಳಿದ್ದಾರೆ. ಅದನ್ನು ಮುಂದಿನ ಸಾರಿ ಮಾಡಿಕೊಡೋಣ ಅದು ಇದ್ದರೆ ತಮಗೆ ಬಹಳ ಒಳ್ಳೆಯದು. ಅದು ಹಿಂದೆ ಇರುತ್ತಿತ್ತು. ಕೆಲವು ವರ್ಷ ಇದೆ ಕೆಲವು ವರ್ಷಗಳು ಇಲ್ಲ ಕಳೆದ ವರ್ಷ ಪರ್‌ಫಾರ್ಮೆನ್ಸ್ ಬಜೆಟ್ ಇಟ್ಟಿಲ್ಲ. ಅದು ಇಟ್ಟರೆ ಹಲವಾರು ವಿಷಯಗಳು ದಿಕ್ಸೂಚಿಯಂತೆ ಸಿಗುತ್ತವೆ. ಪ್ರಾಮುಖ್ಯವಾಗಿರತಕ್ಕ ಕಾರ್ಯಕ್ರಮಗಳನ್ನು ನಾವು ಹಮ್ಮಿಕ್ಕೊಂಡಿದ್ದೇವೆ. ಬಜೆಟ್ ಭಾಷಣದಲ್ಲಿ ಹೇಳಿದಹಾಗೆ ವಿಧ್ಯಾಭ್ಯಾಸ ಇಲಾಖೆಗೆ ಸಂಬಂಧ ಪಟ್ಟಹಾಗೆ ನಾವು ಸ್ವಾತಂತ್ರ್ಯವನ್ನು ಗಳಿಸಿದಾಗ ಆ ಕಾಲದಲ್ಲಿ ಶೇಕಡ 18ರಷ್ಟು ಮಾತ್ರ ಅಕ್ಷರಜ್ಞಾನವಿತ್ತು ಈಗ ಅಕ್ಷರಜ್ಞಾನ ಇರತಕ್ಕದ್ದು ಶೇಕಡ 42ರಷ್ಟು ಅದರಲ್ಲಿ ಶೇಕಡ 18ರಷ್ಟು ಕಳೆದರೆ ಇನ್ನು 24 ಪರ್ಸೆಂಟ್ ನಾವು ಮಾಡಿದ್ದೇವೆ. ಇದು ಆಲ್ ಇಂಡಿಯಾ ಫಿಗರ್ಸ್ ಕರ್ನಾಟಕದ್ದು ಅದೇ ಆಗುತ್ತದೆ. ಇನ್ನು ಶೇಕಡ 58-59 ರಷ್ಟು ಅಕ್ಷರಜ್ಞಾನ ಇಲ್ಲದವರು ಇದ್ದಾರೆ. ಅವರಿಗೆ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲ ಇದು ಇತ್ತೀಚಿನ ಅಂಕಿಅಂಶ ಶಾಲೆಗೆ ಸೇರಿದ ಮಕ್ಕಳಲ್ಲಿ ಡ್ರಾಪೌಟ್ಸ್ ಎಷ್ಟಾಗುತ್ತದೆ? ಮೊದಲು ಮಕ್ಕಳನ್ನು ಶಾಲೆಗೆ ಸೇರಿಸಿಕೊಂಡು ಲೆಕ್ಕಕ್ಕೆ ತೆಗೆದುಕೊಂಡು ಹೋಗುತ್ತಾರೆ ಆಮೇಲೆ ನೋಡಿದರೆ ಶಾಲೆಯಲ್ಲಿ ಮಕ್ಕಳೇ ಇರುವುದಿಲ್ಲ ಇವತ್ತು ನೊಮೆಡಿಕ್ ಟ್ರೈಬ್ಸ್ ಜನಾಂಗದವರು ಅಂದರೆ ಅಲೆಮಾರಿ ಜನಾಂಗ ಅವರು ತಮ್ಮ ಮಕ್ಕಳುಗಳನ್ನು ಶಾಲೆಗೆ ಸೇರಿಸುವುದಿಲ್ಲ. ಕತ್ತೆ ಮೇಲೋ, ಎಮ್ಮೆ ಮೇಲೋ ಎರಡು ಕೋಳಿ ಇಟ್ಟುಕೊಂಡು ಎರಡು ನಾಯಿಗಳನ್ನು ಕರೆದುಕೊಂಡು ಬಟ್ಟೆ ತೆಗೆದುಕೊಂಡು ಹೊರಟುಹೋಗ್ತಿರುತ್ತಾರೆ. ಎಲ್ಲೋ ಡೇರೆ ಹಾಕಿ ಅಲ್ಲೇ ಮಲಗಿಕೊಳ್ಳುತ್ತಾರೆ ಕೆಲವರಿಗೆ ಡೇರೇನೇ ಇರುವುದಿಲ್ಲ ಈ ವರ್ಗ ಸಮಾಜ ಏನಿದೆ ನಾವೆಲ್ಲ ತಲೆತಗ್ಗಿಸಬೇಕಾದ ಸಂಧರ್ಭ ಇದೆ. ಇದರ ಬಗ್ಗೆ ನಾವು ಗಮನ ಕೊಡಬೇಕು ಆದ್ದರಿಂದ ನಾವು

ಮನೆಗಳನ್ನು ಏನು ಕೊಡಬೇಕೆಂದು ಇಟ್ಟುಕೊಂಡ್ಡಿದ್ದೇವೆ ಆ ವಿಚಾರ ಬಂದಾಗ ನಾನು ಹೇಳುತ್ತೇನೆ. ಶೇಕಡಾ 15ರಷ್ಟು ಮನೆಗಳನ್ನು ಇವರಿಗೆ ಮೀಸಲಿಡಬೇಕೆಂದು ಸ್ವಾತಂತ್ರ್ಯನಂತರ ಇವರಿಗೋಸ್ಕರ ಇಟ್ಟುಕೊಂಡಿದ್ದೇವು. ಅವರು ಎಲ್ಲೆಲ್ಲಿ ಇದ್ದಾರೆ ಅವರನ್ನು ತಂದು ಒಂದು ಊರಿನಲ್ಲಿ ನಿಲ್ಲಿಸಬೇಕೆನ್ನತಕ್ಕಂಥ ದೃಷ್ಟಿಯಿಂದ....

ಶ್ರೀ ಬಿ.ಎಸ್. ಯಡಿಯೂರಪ್ಪ: ಮನೆ ಕೊಡಬೇಕು ಎನ್ನತಕ್ಕಂಥ ಭಾವನೆ ಒಳ್ಳೆಯದು. ಅದಕೋಸ್ಕರ ದುಡ್ಡು ಎಲ್ಲಿ ತೆಗೆದಿಟ್ಟಿದ್ದೀರಿ? ಪ್ರತಿ ತಾಲ್ಲೂಕಿಗೆ ಎಷ್ಟು ಮನೆಗಳನ್ನು ಕಟ್ಟಬೇಕೆಂಬ ಕಲ್ಪನೆ ನಿಮಗೆ ಇದೆ? ನೂರಕ್ಕೆ ಒಂದು ಭಾಗ ಕೂಡ ಬಜೆಟ್ಟಿನಲ್ಲಿ ತೆಗೆದಿಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ: ನಿಮಗೆ ಏನೂ ಅನುಮಾನ ಬೇಕಾಗಿಲ್ಲ. ವಾಸ್ತವವಾಗಿ ಹುಡ್ಕೋದವರು ಕಳೆದ ಐದು ವರ್ಷಗಳಿಂದ ಹಣ ಕೊಟ್ಟಿಲ್ಲ ನಮ್ಮ ಹಣವನ್ನು ನಾವು ಇಟ್ಟಿದ್ದೇವೆ ಉಳಿದ ಹಣ ನಾವು ತೆಗೆದುಕೊಳ್ಳುತ್ತೇವೆ. ಡಾ. ಅಂಬೇಡ್ಕರ್ ಜನ್ಮ ಶತಾಬ್ದಿ ಆಚರಣೆಗೆ ಸಂಬಂಧಪಟ್ಟ ಹಾಗೆ ಒಂದು ಲಕ್ಷ ಮನೆಗಳಿಗೆ ಹಣ ತೆಗೆದಿಟ್ಟಿದ್ದೇವೆ. ದೊಡ್ಡ ಪ್ರಮಾಣದಲ್ಲಿ ಇದನ್ನು ಆಚರಣೆ ಮಾಡುವುದಕ್ಕೋಸ್ಕರ ಇಟ್ಟುಕೊಂಡಿದ್ದೇವೆ, ಅದನ್ನು ಅದ್ದೂರಿಯಾಗಿ ಮಾಡೋಣ ಒಂದು ತಾಲ್ಲೂಕಿಗೆ ಒಂದು ವರ್ಷಕ್ಕೆ ಒಂದು ಸಾವಿರ ಮನೆಗಳಿಗೆ ಕಡಿಮೆ ಇಲ್ಲದಂತೆ ಕೊಡಬೇಕು ಎನ್ನತಕ್ಕಂಥ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಅಂದರೆ 175 ತಾಲ್ಲೂಕುಗಳಿಗೆ ಒಂದು ಲಕ್ಷ ಎಪ್ಪತ್ತೈದು ಸಾವಿರ ಮನೆಗಳನ್ನು ಮತ್ತು ಒಂದು ಲಕ್ಷ ಮನೆಗಳನ್ನು ಅಂಬೇಡ್ಕರ್ ಜನ್ಮಶತಾಬ್ದಿಗೆ ಸಂಬಂಧಪಟ್ಟ ಹಾಗೆ ಅಲ್ಲಿಗೆ ಎರಡು ಲಕ್ಷ ಎಪ್ಪತ್ತೈದು ಸಾವಿರ ಹತ್ತಿರ ಹತ್ತಿರ ಮೂರು ಲಕ್ಷ ಮನೆಗಳಿಗೆ....

ಶ್ರೀ ವಾಟಾಳ್ ನಾಗರಾಜ್: ಇಂತಹ ಅದೃಷ್ಟ ಹಿಂದೆಂದೂ ಸಿಕ್ಕಿರಲಿಲ್ಲ ಆಕಾಶವನ್ನೇ ತೋರಿಸುತ್ತಿದ್ದೀರಿ. ಈಗಿರುವ ಮನೆಗಳು ಸೂರು ಇಲ್ಲದೆ ಕರಗಿ ಬಿದ್ದುಹೋಗುತ್ತಿವೆ. ಇನ್ನು ಯಾವತ್ತು ಅವರಿಗೆ ಸೂರು ಕೊಟ್ಟು ನೀವು ಎಲ್ಲಿ ಹೋಗುತ್ತೀರೋ ನೋಡೋಣ.

ಶ್ರೀ ಎಸ್. ಬಂಗಾರಪ್ಪ: ಈಗ ನಾವು ಹಣದ ವಿಚಾರ, ಗಾತ್ರದ ವಿಚಾರ ಮಾಡಿದ್ದೇನೆ ಈ ವಿಚಾರ ಪ್ರಸ್ತಾಪ ಮಾಡಿಲ್ಲ. ಅದಕ್ಕಾಗಿ ನಾನು ಹೇಳುವುದು, ಯೋಜನಾ ಗಾತ್ರ ನೋಡಿಯೇ ನಾವು ವಿಚಾರ ಮಾಡಿರತಕ್ಕಂಥಾದ್ದು. ಹಿಂದೆ ಈ ರೀತಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ನಮ್ಮ ಯೋಜನಾ ಗಾತ್ರವೇ ಎಷ್ಟು ಎಂದು ಗೊತ್ತಿರಲಿಲ್ಲ. ಶೇಕಡಾ 20ರಷ್ಟು ಯಾವಾಗ ಜಂಪ್ ಸಿಕ್ಕಿದೆ, ಆಗ ಇದನ್ನು ಮಾಡುವುದಕ್ಕೆ ಸಾಧ್ಯವಾಗಿದೆ. ಇಲ್ಲದಿದ್ದರೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ನನ್ನಿಂದ ಕೂಡ ಇದನ್ನು ಹೇಳುವುದಕ್ಕೆ ಆಗುತ್ತಿರಲಿಲ್ಲ. ನಾವು ಹಣಕಾಸಿನ ವಿಚಾರ, ಜವಾಬ್ದಾರಿಯನ್ನು ಅರಿತು, ಹೃದಯಾಂತರಾಳದಿಂದ ಇಟ್ಟಿದ್ದೇವೆ. ಪ್ರಾಮಾಣಿಕವಾಗಿ ಪ್ರಯತ್ನ ಮಾಡುತೇವೆ ಮತ್ತು ಇದರ ಬಗ್ಗೆ ಅನುಮಾನ ಮಾಡಬೇಕಾಗಿಲ್ಲ. ಈ ಸಂದರ್ಭದಲ್ಲಿ ಮನೆ ಕೊಡಬೇಕು ಎಂದು ವಿಚಾರ ಮಾಡಿದಾಗ, ಈಗ ಒಂದು ರೂಮು, ಒಂದು ಕಿಚನ್ ಅಷ್ಟೇ ಇರುವುದು. ನಾವು ಮತ್ತೆ ಒಂದು ರೂಮು, ಅದಕ್ಕೆ ಫ್ರಿಫ್ಯಾಬ್ರಿಕೇಟೆಡ್ ಬಾತ್‌ರೂಂ, ಮತ್ತು ಲ್ಯಾವೆಟರಿ ಅದನ್ನು ಸೇರಿಸಬೇಕೆಂಬ ವಿಚಾರ ಕೂಡ ಇಟ್ಟುಕೊಂಡಿದ್ದೇವೆ. ಇದು ಒಂದು ಹೊಸ ಯೋಜನೆ ಇದ್ದು ಇದಕ್ಕೆ 'ಆಶ್ರಯ' ಎಂದು ಹೆಸರು ಇಟ್ಟಿದ್ದೇವೆ. ಆಶ್ರಯ ಕಾರ್ಯಕ್ರಮದಲ್ಲಿ, ಅಂಬೇಡ್ಕರ್ ಜನ್ಮಶತಾಬ್ಧಿ ಅಂಗವಾಗಿ ಒಂದು ಲಕ್ಷ ಮನೆಗಳಿಗೆ ಪ್ರತ್ಯೇಕವಾಗಿ ಹಣ ನಮ್ಮ ಹತ್ತಿರ ರೆಡಿ ಇದೆ. ಉಳಿದಿರತಕ್ಕಂಥಾದ್ದು ಒಂದು ಲಕ್ಷ 75 ಸಾವಿರ ಮನೆಗಳಿಗೆ....

ಶ್ರೀ ಡಿ.ಬಿ. ಚಂದ್ರೇಗೌಡ: ಹೋದ ವರ್ಷದ ಶೌಚಾಲಯಗಳು ಏನಾದವು?

ಶ್ರೀ ಎಸ್. ಬಂಗಾರಪ್ಪ: ನಿಮ್ಮ ಕಾಲದಲ್ಲಿನ ಕೆಲವು ಇನ್ನೂ ಕೂಡ ಬಾಕಿ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಾಡಿಯಾರಪ್ಪ: ನಾನು ಒತ್ತಾಯ ಪೂರ್ವಕವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಹಿಂದೆ ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಶ್ರೀ ವೀರೇಂದ್ರ ಪಾಟೀಲರು ಶೌಚಾಲಯ ಕೊಡುವ ಮಾತನ್ನು ಹೇಳಿದ್ದಾರೆ. ಪತ್ರಿಕೆಯ ಮುಖ ಪುಟಗಳಲ್ಲಿ ಇದು ಬಂದಿತ್ತು. ಈ ರೀತಿ ಜನರಿಗೆ ವಂಚನೆ ಮಾಡುವ ಮಾತನ್ನು ಹೇಳಬೇಡಿ. ಈಗ ಮಾರ್ಚ್ ಕೊನೆಯಲ್ಲಿದ್ದೇವೆ. ಈಗ ಶೌಚಾಲಯಗಳಿಗೆ ಎಷ್ಟು ಖರ್ಚು ಮಾಡಿದ್ದೀರಿ, ಎಂದು ಕೇಳುವ ಹಕ್ಕು ನಮಗಿಲ್ಲವೇನು? ಇಲ್ಲದಿದ್ದರೆ ನಾಳೆ ಒಂದು ಸಾವಿರ ಮನೆಗಳನ್ನು ತಾಲ್ಲೂಕಿಗೆ ಕೊಡುತ್ತೇವೆ ಎಂದು ಹೇಳಿ, ಜನರಿಗೆ ವಂಚನೆ ಮಾಡುವ ಕೆಲಸ ಏಕೆ ಬೇಕು? ಇಲ್ಲದಿದ್ದರೆ ಮುಖ್ಯಮಂತ್ರಿಯಾಗಿ ಹೇಳುವ ಮಾತಿಗೆ ಜವಾಬ್ದಾರಿ ಇಲ್ಲವೇನು? ನಿಮ್ಮ ಸರ್ಕಾರ ಏನು ಆಶ್ವಾಸನೆ ಕೊಟ್ಟಿತ್ತು, ಅದರ ಪ್ರಕಾರ ಎಷ್ಟು ಶೌಚಾಲಯಗಳನ್ನು ಕೊಟ್ಟಿದ್ದೀರಿ, ಎಷ್ಟು ಖರ್ಚು ಮಾಡಿದ್ದೀರಿ ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ಕೊಡಿ.

ಆ ಅಂಕಿಅಂಶಗಳು ಇಲ್ಲದೆ ಈ ರೀತಿ ಉತ್ತರವನ್ನು ಜವಾಬ್ದಾರಿ ಇರತಕ್ಕ ಸರ್ಕಾರ ಕೊಡುವುದಕ್ಕೆ ಹೊರಟರೆ, ಈ ರಾಜ್ಯದ ಗ್ರಾಮೀಣ ಜನತೆಗೆ ದ್ರೋಹ ಮಾಡಿದಂತಾಗುತ್ತದೆ, ವಂಚನೆ ಮಾಡಿದಂತಾಗುತ್ತದೆ. ಆದುದರಿಂದ ನಿಮ್ಮ ಕಾಲದಲ್ಲಾದರೂ ಬರೀ ಆಶ್ವಾಸನೆ ಬೇಡ.

ಶ್ರೀ ಎಸ್. ಬಂಗಾರಪ್ಪ: ಶೌಚಾಲಯ ಎಷ್ಟು ಕಟ್ಟಿಸಿದ್ದೇವೆ, ಏನು ಮಾಡಿದ್ದೇವೆ ಎನ್ನತಕ್ಕಂಥ ಅಂಕಿಅಂಶಗಳನ್ನು ತಮಗೆ ಒದಗಿಸಿಕೊಡುತ್ತೇನೆ. ಈ ಕಾರ್ಯಕ್ರಮ ಏನಿದೆ, This goes along with the house itself, separate programme not done.

ಶೌಚಾಲಯಕ್ಕೋಸ್ಕರ ಪ್ರತ್ಯೇಕ ಪ್ರೋಗ್ರಾಂ ಮಾಡಿದರೆ ಅನುಮಾನ ಬರುತ್ತದೆ. ಈಗಿರತಕ್ಕ ಮನೆಗೇ ಒಂದು ರೂಮು ಎಕ್ಸ್‌ಟ್ರಾ ಸೇರಿಸಿ, ಅದಕ್ಕೆ ಶೌಚಾಲಯ ಕೊಟ್ಟು ಟೋಟಲ್ ಕಾಸ್ಟ್ ಇಟ್ಟಿದ್ದೇವೆ. ನಾವು ಆಕಾಶ ತೋರಿಸುವುದು ಅಲ್ಲ, ನಾವು ಆಕಾಶ ನೋಡುವುದಕ್ಕೆ ಹೋಗುವುದಿಲ್ಲ, ನಾವು ಭೂಮಿ ಇಟ್ಟುಕೊಂಡೇ ಈ ಕೆಲಸ ಪ್ರಾರಂಭ ಮಾಡುತ್ತೇವೆ. ನಾವು ಏನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವೆ, ಏಪ್ರಿಲ್‌ನಲ್ಲಿ ತಾವು ನೋಡುತ್ತೀರಿ, ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಆಜ್ಞೆ, ಹಣ ರಿಲೀಸ್ ಆಗಿರುವುದು, ಕೆಲಸಕಾರ್ಯಗಳು ಪ್ರಾರಂಭವಾಗಿರುವುದು ಇವುಗಳನ್ನು, ಮುಂದಿನ ತಿಂಗಳು ಅಂದರೆ, ಏಪ್ರಿಲ್ ತಿಂಗಳಲ್ಲಿ ತಮ್ಮ ಕಣ್ಣೆದುರಿಗೆ ತೋರಿಸಿಕೊಡುತ್ತೇವೆ. ಇದಕ್ಕಿಂತ ಹೆಚ್ಚು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಏಪ್ರಿಲ್ 1 ಎಂದು ಹೇಳಿದರೆ, ನಮಗೆ ಭಯವಾಗುತ್ತದೆ.

ಒಬ್ಬ ಮುಖ್ಯ ಸದಸ್ಯರು: ನಿಮ್ಮ ಸರ್ಕಾರದಲ್ಲಿ ಏನೇನು ಮಾಡಿದ್ದೀರೆಂದು ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ: ಏಪ್ರಿಲ್ 1 ನಿಮ್ಮದು, ಉಳಿದ ತಾರೀಖುಗಳು ನಮ್ಮದು. ನಾನು ಏಪ್ರಿಲ್ ತಿಂಗಳು ಎಂದು ಹೇಳಿದೆ. ನೀವು ಏಪ್ರಿಲ್ ಒಂದನೇ ತಾರೀಖು ಎಂದು ತಿಳಿದುಕೊಂಡರೆ, ಅದು ನಿಮ್ಮದು, ನಮ್ಮದಲ್ಲ. 'ಆಶ್ರಯ' ಯೋಜನೆ ಏನಿದೆ ಇಂತಹ ಬೃಹತ್ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಒಂದೇ

ಒಂದು ಮಾತನ್ನು ತಮ್ಮ ಮೂಲಕ ಕರ್ನಾಟಕ ರಾಜ್ಯದ ಜನತೆಯ ಗಮನಕ್ಕೆ ತರುತ್ತಿದ್ದೇನೆ. ಈ ಪಾಪುಲೇಷನ್ ಗ್ರೋತ್ ಏನಿದೆ, ಇದನ್ನು ಜನಸಂಖ್ಯಾ ನಿಯಂತ್ರಣಕ್ಕೆ ಒಳಪಡಿಸದೇ ಹೋದರೆ, ಯಾವ ಪಕ್ಷದ ಸರ್ಕಾರ ಬಂದರೂ ಇದನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ನಾವೇನು ಪ್ರೋಗ್ರಾಂ ಹಾಕಿಕೊಂಡು ಹೋಗುತ್ತೇವೆ, ಮನೆ ತುಂಬ ಮಕ್ಕಳನ್ನು ತುಂಬಿಕೊಳ್ಳುತ್ತಾ ಇದ್ದರೆ, ಯಾವ ಸರ್ಕಾರ ಕೂಡ ಮಾನ ಮರ್ಯಾದೆಯಿಂದ ಕೆಲಸ ಮಾಡುವುದಕ್ಕೆ ಆಗುವುದೇ ಇಲ್ಲ. ಇದನ್ನು ಜನರು ಅರಿಯಬೇಕು. ಎಲ್ಲಾ ಜಾತಿಗಳೂ ಎಲ್ಲಾ ರಾಜಕೀಯ ಪಕ್ಷಗಳೂ ಇದನ್ನು ಪಕ್ಷಾತೀತವಾಗಿ ವಿಚಾರ ಮಾಡಬೇಕು. ನ್ಯಾಷನಲ್ ಲೆವೆಲ್‌ನಲ್ಲಿ ಕುಳಿತು ಚರ್ಚೆ ಮಾಡಬೇಕು. ಈ ದೇಶ ಉಳಿಯಬೇಕು, ಬಡತನ ದೂರ ಮಾಡಬೇಕು. ನಾವೇನು ಮಾಯ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಚೈನಾ ದೇಶ ಅಷ್ಟೊಂದು ಜನಸಂಖ್ಯೆಯನ್ನು ಕಡಿಮೆ ಮಾಡಿರಬೇಕಾದರೆ, ಇದನ್ನು ಪಕ್ಷಾತೀತವಾಗಿ ನ್ಯಾಷನಲ್ ಸಬ್ಜೆಕ್ಟ್ ಆಗಿ ತೆಗೆದುಕೊಳ್ಳದೇ ಹೋದರೆ, ಬಹಳ ಕಷ್ಟವಾಗುತ್ತದೆ ಎಂದು ಸಾಂದರ್ಭಿಕವಾಗಿ ಸೂಚನೆ ಕೊಡಬಲ್ಲೆ. ಆದರೆ ತೀರ್ಮಾನ ಮಾಡತಕ್ಕ ಶಕ್ತಿ ನಮ್ಮ ನಿಮ್ಮಲ್ಲಿ ಉಳಿದಿಲ್ಲವೆಂದು ಖೇದದಿಂದ ಹೇಳಬೇಕಾಗಿದೆ. ಇವತ್ತು ಯಾರೂ ಈ ವಿಚಾರವನ್ನು ತಡೆಹಿಡಿಯುವುದಕ್ಕೆ ಆಗುತ್ತಾ ಇಲ್ಲ. ನಾವು ನೀವು ಮನೆ ಕೊಟ್ಟು ಟೇಪ್ ಕತ್ತರಿಸಿ ಮುಂದೆ ಹೋಗುತ್ತೇವೆ. ಆದರೆ ಅದೇ ಮನೆಗೆ ಅರ್ಜಿ ಕೊಡುತ್ತಾರೆ. ಆದ್ದರಿಂದ ಇದು ಬಹಳ ಕಷ್ಟವಾಗುತ್ತದೆ. ಇದು ಬರೀ ಮನೆ ವಿಚಾರ ಅಲ್ಲ. ಎಲ್ಲಿ ಹೋದರೂ ಜಾಗ ಸಿಕ್ಕುವುದಿಲ್ಲ, ಸಿನಿಮಾದಲ್ಲಿ ಜಾಗ ಸಿಕ್ಕುವುದಿಲ್ಲ. ರೈಲಿನಲ್ಲಿ ಜಾಗ ಸಿಕ್ಕುವುದಿಲ್ಲ. ಬಸ್ ಸ್ಟಾಂಡಿನಲ್ಲಿ ಜಾಗ ಇಲ್ಲ. ರಾಜ್ಯದಲ್ಲಿ ಎಲ್ಲೂ ಜಾಗ ಇಲ್ಲ. ಈ ಜನಸಂಖ್ಯಾ ಸ್ಫೋಟಕ್ಕೆ ಬುಡ ತುದಿ ಇಲ್ಲವೇ ಇಲ್ಲ. ಎಲ್ಲಾ ಧರ್ಮಗಳೂ, ಎಲ್ಲಾ ಪಕ್ಷಗಳೂ ಒಂದು ತೀರ್ಮಾನಕ್ಕೆ ಬರದಿದ್ದರೆ, ಇದಕ್ಕೆ ಇತಿಶ್ರೀ ಹಾಡದಿದ್ದರೆ. ಈ ಸಮಸ್ಯೆಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆನ್ನುವುದು ನಿರ್ವಿವಾದದ ಮಾತು. ಈ ಸಂದರ್ಭದಲ್ಲಿ ಗ್ರಾಮೀಣಮಟ್ಟದ ಜನಜೀವನವನ್ನು ಮೇಲಕ್ಕೆ ತರಬೇಕೆಂಬ ದೃಷ್ಟಿಯಿಂದ ಮತ್ತೊಂದು ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಏಕೆಂದರೆ, ಇದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳು ಬೇಕಾಗಿದೆ. ಅವುಗಳನ್ನು ನಾವು ರೆಡಿ ಮಾಡಿಕೊಳ್ಳಬೇಕು. ಅದು "ವಿಶ್ವ" ಎನ್ನತಕ್ಕಂಥ ಕಾರ್ಯಕ್ರಮ. ವಿಶ್ವೇಶ್ವರಯ್ಯನವರು ಏನಿದ್ದಾರೆ, ಅವರನ್ನು ನೆನಸಿಕೊಂಡು ಈ ಕಾರ್ಯಕ್ರಮ ಪ್ರಾರಂಭ ಮಾಡುತ್ತಿದ್ದೇವೆ. ಇವತ್ತು ಗ್ರಾಮೀಣ ಜನರ ಆರ್ಥಿಕ ಜೀವನಮಟ್ಟ ಮೇಲಕ್ಕೆ ಬರಬೇಕೆಂದರೆ, ಗುಡಿ ಕೈಗಾರಿಕೆ, ಕಾಟೇಜ್ ಇಂಡಸ್ಟ್ರೀಸ್, ರೂರಲ್ ಬೇಸ್ಡ್ ಇಂಡಸ್ಟ್ರೀಸ್ ಇದು ಬರಬೇಕು. ನಮ್ಮ ಕಚ್ಚಾವಸ್ತುಗಳನ್ನು ಇದಕ್ಕೆ ಉಪಯೋಗ ಮಾಡಿ, ತಯಾರು ಮಾಡಿಕೊಂಡು, ಮಾರ್ಕೆಟಿಂಗ್ ಅನುಕೂಲತೆ ಹೆಚ್ಚಾಗಬೇಕು. ಎನ್ನತಕ್ಕಂಥ ಅಭೂತ ಪೂರ್ವ ವಿಚಾರಧಾರೆಯನ್ನು ಇಟ್ಟುಕೊಂಡಿದ್ದೇವೆ. ಇದನ್ನೇ ಪೂಜ್ಯ ಮಹಾತ್ಮಗಾಂಧಿಯವರು ಇಟ್ಟು ಕೊಂಡಿದ್ದರು. ನಮ್ಮ ದೇಶದಲ್ಲಿರತಕ್ಕ ಮ್ಯಾನ್‌ಪವರ್ ಉಪಯೋಗ ಮಾಡಿ, ಮೇಲಕ್ಕೆ ಎತ್ತಬೇಕೆಂದು ಇದ್ದರೆ, ಇದು ಒಂದೇ ದಾರಿ. ನಮ್ಮ ಸರ್ಕಾರದ ನೀತಿ ಇದಾಗಿದೆ. ಇದರ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಇವತ್ತು ಆರ್. ಎಲ್. ಇ.ಜಿ.ಪಿ ಎಲ್.ಆರ್ ಇ ಜಿ ಪಿ ಇಂತಹ 28 ಕಾರ್ಯಕ್ರಮಗಳು ಇವೆ. ಮ್ಯಾನಿಡೇಟ್ಸ್ ಬಗ್ಗೆ ಎಷ್ಟೊಂದು ಭಾಷಣ ಮಾಡುತ್ತೇವೆಯೇ ವಿನಹ ಸಂಪೂರ್ಣವಾಗಿ ಎಲ್ಲರಿಗೂ ಕೆಲಸ ಕೊಡವುದಕ್ಕಾಗಿಲ್ಲ. ನಮ್ಮ ಸರ್ಕಾರಕ್ಕೂ ಆಗಿಲ್ಲ. ನಿಮ್ಮ ಸರ್ಕಾರಕ್ಕೂ ಸಂಪೂರ್ಣ ಆಗಿಲ್ಲ. ಇದು ವಾಸ್ತವಾಂಶದ ಮಾತನ್ನು ಆಡುತ್ತಿದ್ದೇನೆ.

ಹೀಗೇನಾದರೂ ಹೋಗಬೇಕೆಂದರೆ ನಾವು ಧೈರ್ಯದಿಂದ ನುಗ್ಗೋಣ. ಧೈರ್ಯಮಾಡಿ ಹೋಗೋಣ. ಪ್ಲಾನಿಂಗ್ ಕಮಿಷನ್ ಇಲ್ಲ ಎಂಬ ಮಾತನ್ನು ಹೇಳುತ್ತಿಲ್ಲ. ಇದರಲ್ಲಿ

ಪೂರ್ತಿಯಾಗಿ ಪ್ರೊಡಕ್ಷನ್ ಓರಿಯೆಂಟೆಂಡ್ ಮತ್ತು ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಕಾರ್ಯಕ್ರಮಗಳಿವೆ, ಅದಕ್ಕಾಗಿ ನಾವು ಕೆಲವು ಕೋಟಿ ರೂಪಾಯಿಗಳನ್ನು ತೆಗೆಟ್ಟಿದ್ದೇವೆ. ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ 'ವಿಶ್ವ ' ಎಂದು ಹೆಸರಿಟ್ಟಿದ್ದೇವೆ. ಆಯಿಲ್, ಬಟರ್ ಗುಜಾರಾತ್‌ನಿಂದ ಬರುತ್ತಿದೆ. ಅಲ್ಲಿನ ಮಿಲ್ಕ್ ಯೂನಿಯನ್‌ನಿಂದ ಅಮೂಲ್ ಎಂಬ ಬೆಣ್ಣೆ ಬರುತ್ತಿದೆ. ಎಲ್ಲಿ ಹೋದರೂ ಅದು ಒಳ್ಳೆಯ ಹೆಸರು ತೆಗೆದುಕೊಂಡಿದೆ. ಇದೂ ಕೂಡಾ ಅದೇ ಸೆಕ್ಟಾರ್‌ನಲ್ಲಿ ಬಂದಿರತಕ್ಕಂಥಾದ್ದು. ಇವತ್ತು ಜನರನ್ನು ತೆಗೆದುಕೊಂಡು ಹೋಗಿ ಒಂದೊಂದು ಜಾಗದಲ್ಲಿ ಕೆಲಸಕ್ಕೆ ಹಚ್ಚಿ, ನಮ್ಮಲ್ಲಿರುವ ಕಚ್ಚಾವಸ್ತುಗಳನ್ನು ಉಪಯೋಗ ಮಾಡಿ ಮಾರ್ಕೆಂಟಿಂಗ್ ಫೆಸಿಲಿಟೀಸ್‌ನ್ನು ನಮ್ಮ ದೇಶದಲ್ಲಿ ಮತ್ತು ಹೊರದೇಶದಲ್ಲೂ ಮಾಡಬೇಕು. ಇದರ ಪ್ರಾರಂಭಕ್ಕೆ ಕೆಲವು ತಿಂಗಳುಗಳು ಬೇಕು. ಏಪ್ರಿಲ್ ಒಂದರಿಂದ ಪ್ರಾರಂಭ ಎಂಬ ಮಾತನ್ನು ನಾನು ಆಡುವುದಿಲ್ಲ. ಅದಕ್ಕೆ ಸ್ವಲ್ಪ ಕಾಲ ಬೇಕಾಗಿದೆ. ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ. ಒಂದು ವೇಳೆ ಫೇಲ್ ಆದರೆ, ಇನ್ನು ಮುಂದೆ ಯಾರೂ ಇದರ ಕಡೆ ತಿರುಗಿ ನೋಡುವುದಕ್ಕೆ ಆಗುವುದಿಲ್ಲ. ಆದುದರಿಂದ ಬಹಳ ಧೈರ್ಯದಿಂದ ನುಗ್ಗಿ ತೀರ್ಮಾನ ಮಾಡಬೇಕು. ಒಂದೊಂದು ಸಾರಿ ನನಗನ್ನಿಸುತ್ತದೆ. ಯಾವ ರೀತಿಯಾಗಿ ಕ್ವಾಲಿಟಿ ಮೇಲೆ ಕಂಟ್ರೋಲ್ ಮಾಡಿಕೊಂಡು ಹೋಗಬೇಕೆಂದು ವಿಚಾರ ಮಾಡಬೇಕೆನಿಸುತ್ತದೆ. ಹಲವಾರು ಜನರ ಜೊತೆ ಚರ್ಚೆ ಮಾಡಿದ್ದೇನೆ. ಘಂಟೆಗಳು ದಿನಗಳು ರಾತ್ರಿ ಹಗಲೂ ಬಹಳ ಚರ್ಚೆ ಮಾಡಿದ್ದೇವೆ. ಸಂಬಂಧಪಟ್ಟ ಸಚಿವರಾದ ನಜೀರ್ ಅಹಮದ್‌ರವರು ಸಾಕಷ್ಟು ದಿನಗಳನ್ನು ಚರ್ಚೆಯಲ್ಲಿ ಕಳೆದಿದ್ದಾರೆ. ಅಧಿಕಾರಿಗಳು ವಿವರಗಳನ್ನು ತಂದೂ ತಂದೂ ರಾಶಿ ಇಟ್ಟುಕೊಂಡಿದ್ದಾರೆ. ಸರಕಾರ ಇದರ ಬಗ್ಗೆ ನಂಬಿಕೆಯಿಂದ ಹೋಗುತ್ತಿದೆ. ಗ್ರಾಮಾಂತರ ಪ್ರದೇಶದ ಜನ ಪಟ್ಟಣ ಪ್ರದೇಶದ ಬಡವರು ಏನಿದ್ದಾರೆ ಅವರಿಗೆ ಉದ್ಯೋಗ ಕೊಟ್ಟು ಅವರ ಆರ್ಥಿಕ ಜೀವನ ಮಟ್ಟವನ್ನು ಮೇಲಕ್ಕೆ ತರಬಹುದಾಗಿದೆ. ಎಂಬ ಒಂದು ಹೆಬ್ಬಯಕೆಯಿಂದ ಈ ಒಂದು ದೊಡ್ಡ ಕಾರ್ಯಕ್ರಮಕ್ಕೆ ಕೈಹಾಕಿದ್ದೇವೆ. ಕರ್ನಾಟಕ ರಾಜ್ಯದ ಜನತೆ ಇದನ್ನು ಅರ್ಥ ಮಾಡಿಕೊಳ್ಳಬೇಕು. ಆಶೀರ್ವಾದ ಮಾಡಬೇಕು. ಇದರ ಸದುಪಯೋಗ ಮಾಡಿಕೊಳ್ಳಬೇಕು. ಅವರ ಹಿತದೃಷ್ಟಿಯಿಂದ ಇದನ್ನು ಮಾಡಲಾಗಿದೆ. ಅದರ ವಿವರಗಳಿಗೆ ಮುಂದಿನ ಅಧಿವೇಶನದಲ್ಲಿ ನಾನು ಬರುತ್ತೇನೆ. ಅಷ್ಟು ಹೊತ್ತಿಗೆ ಎಲ್ಲಾ ಸಿದ್ಧತೆಗಳನ್ನೂ ಮಾಡಿ ಇಟ್ಟುಕೊಂಡಿರುತ್ತೇವೆ. ಇದಕ್ಕೆ 'ವಿಶ್ವ' ಎಂದು ಹೆಸರಿಟ್ಟಿದ್ದೇವೆ. ಯಾವುದೇ ಒಂದು ವಸ್ತು ತಯಾರು ಮಾಡಿದರೂ ಅದು ವಿಶ್ವ ಎಂಬ ಹೆಸರಿನಿಂದ ಹೊರಕ್ಕೆ ಹೋಗಬೇಕು. ಇದು ಕರ್ನಾಟಕ ತಯಾರಿಕೆ, ಇದು ಇಂಡಿಯಾದ್ದು ಎಂದು ಜನ ಬೆಲೆ ಕೊಡಬೇಕು. ಕ್ವಾಲಿಟಿ ಇರಬೇಕು. ವಿಶ್ವೇಶ್ವರಯ್ಯನವರ ಹೆಸರೂ ಉಳಿಯಬೇಕು. ಜನರಿಗೆ ಉಪಯೋಗವಾಗಬೇಕು. ಈಗ ಒಂದು ಮನೆಯಲ್ಲಿ ನಾಲ್ಕು ಜನ ಇರುತ್ತಾರೆ ಒಬ್ಬ ವ್ಯಕ್ತಿಗೆ ದಿನಕ್ಕೆ 10-15 ರೂಪಾಯಿ ದುಡಿಯುತ್ತಾನೆ. ಅಲ್ಲಿಗೆ ನಾಲ್ಕು ಜನಕ್ಕೆ ಅರವತ್ತು ರೂಪಾಯಿ ಆಯಿತು. ಒಂದು ಕುಟುಂಬದಲ್ಲಿ ಇಬ್ಬರು ಇರಬಹುದು ನಾಲ್ಕು ಜನ ಇರಬಹುದು. ಆರು ಜನ ಇರಬಹುದು. ನಾನು ನಾಲ್ಕು ಜನ ಎಂದು ಉದಾಹರಣೆಗೆ ಹೇಳಿದೆ. ಒಬ್ಬರಿಗೆ ಹದಿನೈದು ರೂಪಾಯಿ ಆದರೆ ನಾಲ್ಕು ಜನರಿಗೆ 60 ರೂಪಾಯಿ ಆಯಿತು. ಅದರಲ್ಲಿ 30 . ರೂಪಾಯಿ ಖರ್ಚಿಗೆ ತೆಗೆದುಕೊಂಡರೆ, ಇನ್ನು 30 ರೂಪಾಯಿ ಸೀದಾ ಅವನ ಅಕೌಂಟ್‌ಗೆ ಹೋಗಬೇಕು. ಆ ದುಡ್ಡಿನಲ್ಲಿ ಅವನು ಮನೆ ಕಟ್ಟಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಪಂಜಾಬ್‌ನಲ್ಲಿ ಇದು ನಡೆಯುತ್ತಿದೆ.

ಶ್ರೀ ಎಸ್. ಬಂಗಾರಪ್ಪ : ಆದುದರಿಂದ ಯೋಜನಾ ಆಯೋಗದವರೂ ಕೂಡ ಇದನ್ನು ಒಪ್ಪುತ್ತಾರೆ. ನಾನು ಮಾತನಾಡಿದ್ದೇನೆ. ಇನ್ನು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ

ಹಾಗೆ ಡ್ರಾಪ್‌ಔಟ್ಸ್ ಆಗಿ ಬಹಳ ಮಕ್ಕಳು ಹೊರಟು ಹೋಗುತ್ತಾರೆಂದು ಹೇಳಿದೆ. ಲಿಟ್ರೆಸಿ ಅಂದರೆ ಅಕ್ಷರ ಜ್ಞಾನ ವಿಚಾರದಲ್ಲಿ ಪ್ರೋತ್ಸಾಹ ನೀಡಲು, ಮಿಡ್ ಡೇ ಮೀಲ್ಸ್ ಸ್ಕೀಮ್‌ಗಾಗಿ 20 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಈ ಶಿಕ್ಷಣ ವರ್ಷ ಇನ್ನು ತಿಂಗಳು ಒಪ್ಪೊತ್ತಿನಲ್ಲಿ ಏನು ಪ್ರಾರಂಭವಾಗುತ್ತದೆ. ಆಗ ಇದು ಪ್ರಾರಂಭವಾಗುತ್ತದೆ. ಕರ್ನಾಟಕ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಟೀಚರ್ಸ್‌ಗೆ ಈ ಕೆಲಸ ಹಚ್ಚುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗೇನು ಉಪ್ಪಿಟ್ಟು ಕೊಡುತ್ತಿದ್ದರು. ಅದು ವಾಸನೆಯಿಂದ ಕೂಡಿತ್ತು. ಮುಗ್ಗಲು ರವೆಯಿಂದ ತಯಾರಿಸಿದ ಉಪ್ಪಿಟ್ಟು ಕೊಡುತ್ತಿದ್ದರು. ಬೆಳಗ್ಗೆ ಅದನ್ನು ತಿಂದು ಚೆನ್ನಾಗಿರುವ ಹುಡುಗರು ಖಾಯಿಲೆ ಬೀಳುವ ಪರಿಸ್ಥಿತಿ ಉಂಟಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಅದು ಆಗಬಾರದೆಂದು ನಮ್ಮ ಆಸೆ. ಒಂದೊಂದು ಸಲ ದೊಡ್ಡ ಹೋಟೆಲ್‌ನಲ್ಲೂ ಈ ರೀತಿ ಸಿಕ್ಕಿಬಿಡುತ್ತದೆ. ಒಳ್ಳೆಯದನ್ನು ಕೊಡಬೇಕು. ಪೌಷ್ಠಿಕ ಆಹಾರವನ್ನು ಕೊಡಬೇಕೆಂಬ ಆಸೆ ಇದೆ. ವಾರಕ್ಕೆ ಒಂದು ಮೊಟ್ಟೆಯನ್ನಾದರೂ ಕೊಡಬೇಕೆಂದು ಆಸೆ ಇದೆ. ನಮ್ಮ ಹುಡುಗರಿಗೆ ಶಕ್ತಿ ಬರಲಿ ಎಂದು. ಆದರೆ ಕ್ಷಮಿಸಬೇಕು. ಇದನ್ನು ಇನ್ನೂ ಪ್ರಕಟ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಹೇಳಿದರೆ ಅದು ಪ್ರಕಟ ಆದ ಹಾಗೆ ಆದುದರಿಂದ ಅದನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ತಿನ್ನದೇ ಇರುವವರಿಗೆ ಏನು ಮಾಡುತ್ತೀರಿ, ಹಾಗಾದರೆ ಒಂದು ಕಾನೂನು ಮಾಡಿ. ತಿನ್ನಲೇಬೇಕು. ತಿನ್ನದೇ ಇದ್ದರೆ ಮೂರು ತಿಂಗಳು ಜೈಲಿಗೆ ಹಾಕುತ್ತೇವೆ. ಎಂದು ಕಾನೂನು ಮಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೋಳಿಯನ್ನೂ ಕೊಡುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಸದ್ಯಕ್ಕೆ ನಮಗೆ ಮಿಡ್ಡೆ ಮೀಲ್ಸ್ ಇದೆಯೇ? ಎರಡೂಕಾಲು ಗಂಟೆ ಆಗುತ್ತಾ ಬಂದಿದೆ.

ಶ್ರೀ ಎಸ್. ಬಂಗಾರಪ್ಪ : ಮುಗಿಸಿಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮೊಟ್ಟೆ ತಿನ್ನದೆ ಇರುವವರಿಗೆ ಏನು ಮಾಡುತ್ತೀರಿ.

ಶ್ರೀ ಎಸ್. ಬಂಗಾರಪ್ಪ : ಅವರು ತಿನ್ನುವವರನ್ನು ನೋಡುತ್ತಾ ಕುಳಿತುಕೊಳ್ಳಲಿ.

ಅಧ್ಯಕ್ಷರು : ಕಡ್ಲೆಕಾಯಿ ಕೊಡಿ. ಅದರಲ್ಲಿ ಸಹ ಪ್ರೊಟೀನ್ ಜಾಸ್ತಿ ಇದೆ. ಕಡ್ಲೆಕಾಯಿ ತಿನ್ನಲಿ.

ಶ್ರೀ ಎಸ್. ಬಂಗಾರಪ್ಪ : ನಾವು ಈ ಒಂದು ಕಾರ್ಯಕ್ರಮಕ್ಕೆ ಹೆಸರು ಇಟ್ಟಿರತಕ್ಕಂಥಾದ್ದು ಅಕ್ಷಯ ಎಂದು ಒಳ್ಳೆಯ ಕಾರ್ಯಕ್ರಮ.

ಶ್ರೀ ವಾಟಾಳ್ ನಾಗರಾಜ್ : ಒಳ್ಳೆಯ ಹೆಸರನ್ನು ಇಟ್ಟಿದ್ದೀರಿ. ಹೆಸರು ಹೇಳಿಕೊಂಡು ಬಾಯಿ ಚಪ್ಪರಿಸಿಕೊಳ್ಳಬೇಕಾಗುತ್ತದೆಯೋ ಏನೋ ಮೊಟ್ಟೆ ಅದಕ್ಕೆ ಒಂದು ಹೆಸರು ಇನ್ನೊಂದಕ್ಕೆ ಇನ್ನೊಂದು ಹೆಸರು ತಾವು ರಾತ್ರಿಯೆಲ್ಲಾ ಯೋಚನೆ ಮಾಡಿ ಹೆಸರುಗಳನ್ನು ಇಟ್ಟಿರಬೇಕು.

ಶ್ರೀ ಎಸ್. ಬಂಗಾರಪ್ಪ: ವಿಶ್ವ, ಅನುರಾಧ.

ಶ್ರೀ ಕೆ.ಎಸ್. ಈಶ್ವರಪ್ಪ : ಅಕ್ಷಯ ದ್ರೌಪದಿಯ ಅಕ್ಷಯ ಪಾತ್ರೆ.....

ಶ್ರೀ ಎಸ್. ಬಂಗಾರಪ್ಪ : ಇದಕ್ಕೆ ನಾವು 20 ಕೋಟಿ ರೂಪಾಯಿಗಳ ಹಣ ಇಟ್ಟಿದ್ದೇವೆ. ಮಕ್ಕಳು ಡ್ರಾಪ್ ಔಟ್ 65 ಪರ್ಸೆಂಟ್ ಆಗುತ್ತಿದ್ದಾರೆ. ಮಕ್ಕಳನ್ನು

ಶಾಲೆಗಳಿಗೆ ಸೇರಿಸಿದರೆ ಶಾಲೆಗಳಿಗೆ ಹೋಗುವುದಿಲ್ಲ. ಮಧ್ಯಾಹ್ನದ ಊಟ ಕೊಟ್ಟರೆ ಇರುತ್ತಾರೆ. ಎನ್ನುವ ದೃಷ್ಟಿಯಿಂದ ಸ್ಕೂಲ್‌ಗಳಿಗೆ ಮಕ್ಕಳು ಹೋದರೆ ವಿದ್ಯೆ ದೊರೆಯುವಂತೆ ಆಗಲೀ ಎನ್ನುವ ಸದುದ್ದೇಶದಿಂದ ಮಾಡಿದ್ದೇವೆ. ಡ್ರಾಪ್ ಔಟ್ 65 ಪರ್ಸೆಂಟ್ ಇರುವುದನ್ನು ಸಂಪೂರ್ಣವಾಗಿ ನಿಲ್ಲಿಸಿ ಎಲ್ಲ ಮಕ್ಕಳು ಶಾಲೆಗಳಿಗೆ ಹೋಗಬೇಕು. ಅಕ್ಷರ ಜ್ಞಾನ ಸಿಗುವಂತಾಗಬೇಕು ಎನ್ನುವ ದೃಷ್ಟಿಯಿಂದ ಒಳ್ಳೆಯ ಸದುದ್ದೇಶ ಇಟ್ಟುಕೊಂಡು ಇದನ್ನು ಮಾಡಿದ್ದೇವೆ. ಇನ್ನೊಂದು ಕಾರ್ಯಕ್ರಮ "ಆರಾಧನ" ಈ ಕಾರ್ಯಕ್ರಮದಿಂದ ಹರಿಜನ ಕೇರಿ ಹರಿಜನ ವಾಡಿಲಂಬಾಣಿ ಕೇರಿ, ವಡ್ಡರ ಕೇರಿ ಮುಂತಾದ ಕಡೆಗಳಲ್ಲಿ ಇದನ್ನು ಮಾಡುವುದಕ್ಕಾಗಿ ನಾವು ಒಂದು ಕೋಟಿ ರೂಪಾಯಿಗಳನ್ನು ಇಟ್ಟು ಬಡವರ ಕಡೆಯಿಂದ ಇದು ಶುರುವಾಗಲಿ ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಯಾರದೂ ವಿರೋಧ ಇಲ್ಲ. ಮುಜರಾಯಿ ಇಲಾಖೆ ಇದೆ ಅದಕ್ಕೆ ಹಣ ನಾವು ಬೇರೆ ಇಟ್ಟಿದ್ದೇವೆ. ಆದರೆ ಈ ಆರಾಧನಾ ಕಾರ್ಯಕ್ರಮದಲ್ಲಿ ಚರ್ಚ್‌ಗಳು ಇರಬಹುದು. ಮಸೀದಿಗಳು ಇರಬಹುದು ಅವು ಬರುತ್ತವೆ. ಇದು ಬೇರೆ ಇದಕ್ಕೆ ನಾವು 90 ಲಕ್ಷ ರೂಪಾಯಿಗಳನ್ನು ತೆಗೆದು ಇಟ್ಟಿದ್ದೇವೆ. ತಾವು ಬಜೆಟ್ ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ಬಡವರ ದೇವಸ್ಥಾನಗಳು ಏನಿವೆ ಇವಕ್ಕೆ ರಿಪೇರಿ ಇಲ್ಲ. ಹುಲ್ಲಿನ ಮನೆಗಳು ಹೆಂಚಿನ ಮನೆಗಳಿದ್ದು ಅವು ಸಹ ಬಿದ್ದು ಹೋಗುತ್ತಿವೆ. ಅಲ್ಲಿರುವ ದೇವರಿಗೆ ಮುಖ ತೊಳೆಯುವುದಿಲ್ಲ ಬಣ್ಣ ಹಾಕುವುದಿಲ್ಲ.....

ಶ್ರೀ ವಾಟಾಳ್ ನಾಗರಾಜ್ : ಒಂದು ಕಡೆ ದೇವಸ್ಥಾನಗಳ ರಿಪೇರಿ ಮಾಡಬೇಕೆಂದು ಹೇಳುತ್ತೀರಿ ಇನ್ನೊಂದು ಕಡೆ ವಿಧಾನ ಸೌಧದಲ್ಲಿರತಕ್ಕಂಥ ಫೋಟೋಗಳನ್ನೆಲ್ಲಾ ತೆಗೆಯಬೇಕೆಂದು ಹೇಳಿದ್ದೀರಿ. ಇದು ಒಂದಕ್ಕೊಂದು ದ್ವಂದ್ವ ಇದೆ. ವಿಧಾನ ಸೌಧದಲ್ಲಿರುವ ಫೋಟೋಗಳನ್ನೆಲ್ಲಾ ತೆಗೆಯಬೇಕೆಂದು ಹೇಳಿದ್ದಾರೆ. ಲಿಫ್ಟ್‌ಗೆ ಬಂದಾಗ ಲಿಫ್ಟ್‌ನಲ್ಲಿ ದೇವರ ಹೆಸರಿನಲ್ಲಿ ಗಂಧದ ಕಡ್ಡಿ ಹಚ್ಚಿರುತ್ತಿದ್ದರು. ಒಳ್ಳೆಯ ಸುವಾಸನೆ ಬರುತ್ತಿತ್ತು. ಅದನ್ನು ಸಹ ಸರ್ಕಾರ ಈಗ ತೆಗೆಸುತ್ತಿದ್ದಾರೆ. ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ನಾವು ಹಳ್ಳಿಗಳ ದೇವಸ್ಥಾನಗಳ ಬಗ್ಗೆ ಮಾತನಾಡುತ್ತಿದ್ದರೆ ಅವರು ವಿಧಾನ ಸೌಧದಲ್ಲಿರುವ ಲಿಫ್ಟ್‌ಗಳ ಬಗ್ಗೆ ತಂದು ಸೇರಿಸುತ್ತಿದ್ದಾರೆ.

ಶ್ರೀ ಕರಿಯಣ್ಣ: ಹರಿಜನ ದೇವಸ್ಥಾನಗಳ ಅಭಿವೃದ್ಧಿ ಆಗಬಾರದು ಎನ್ನುವುದು ಅವರ ಅಭಿಪ್ರಾಯವೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ನೂರಕ್ಕೆ ನೂರರಷ್ಟು ದೇವರ ಪರ, ಅದರಲ್ಲಿ ಅನುಮಾನ ಇಲ್ಲ. ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದರು. ದೇವರುಗಳು ಇಲ್ಲೆಲ್ಲಾ ಓಡಾಡುತ್ತಿವೆ ಎಂದು, ವಿಧಾನ ಸೌಧದ ಮೇಲೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಬರೆಸಿದ್ದಾರೆ. ಅದನ್ನು ತಾವು ಯಾವಾಗ ಅಳಿಸಿ ಹಾಕುತ್ತೀರೋ? ನನಗೆ ತಿಳಿದ ಹಾಗೆ ಕೆಲವು ಕಡೆ ಇದನ್ನು ತೆಗೆಸಿದ್ದೀರೆಂದು. ಇದು ನಿಜವೇ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ದೇವಸ್ಥಾನಗಳನ್ನು ರಿಪೇರಿ ಮಾಡಿಸುತ್ತೇವೆ. ಹೊಸ ದೇವಸ್ಥಾನಗಳ ಕಟ್ಟಡ ಕಟ್ಟಿಸಬೇಕಾದರೆ ಆಗುವುದಿಲ್ಲ, ಎಲ್ಲೆಲ್ಲಿ ಬಡವರ ದೇವಸ್ಥಾನಗಳು ಇವೆ. ಅಲ್ಲಿ ಖರ್ಚುಮಾಡುವ ಸಲುವಾಗಿ ಒಂದು ಕೋಟಿ ರೂಪಾಯಿಗಳ ಹಣ ನಾವು ಇಟ್ಟಿದ್ದೇವೆ. ಅಂದ ಮೇಲೆ ನಾವು ದೇವರ ವಿರೋಧ ಮತ್ತೊಂದು ಪ್ರಶ್ನೆ ಇಲ್ಲ. ನಮ್ಮ ಒಂದು ಕೋಟಿ ರೂಪಾಯಿಗಳು ಇದಕ್ಕೆ ಉತ್ತರ ನಮ್ಮ "ಆರಾಧನಾ" ಕಾರ್ಯಕ್ರಮವೇ ಇದಕ್ಕೆ ಉತ್ತರ. ಮತ್ತೊಂದು ಹೆಸರು ಇಟ್ಟಿದ್ದೇವೆ.

SRI. QAMARUL ISLAM : Regarding Aradhana it is a very good thing that you have removed that. otherwise, all will bring all Gods from everywhere here Masjid, Church everything. What you have done is a very goodthing.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಮತ್ತೊಂದು ಕಾರ್ಯಕ್ರಮ ಅದು "ಶುಶ್ರೂಷೆ" ಎನ್ನತಕ್ಕಂಥಾ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರ ಬಗ್ಗೆ ಬಹಳ ವ್ಯಾಖ್ಯಾನಗಳು ಬಂದಿವೆ. ಬಹಳ ಜನರು ತಪ್ಪು ತಿಳಿದುಕೊಂಡಿದ್ದಾರೆ. ನಾವು ಗೌರ್ನಮೆಂಟ್ ಆರ್ಡರ್ ಹೊರಡಿಸಿದರೆ ತಮ್ಮ ಗಮನಕ್ಕೆ ಬರುತ್ತದೆ. ನಾವು ಏನು ಹೇಳಿದ್ದೇವೆ ಈ ಶುಶ್ರೂಷೆ ಕಾರ್ಯಕ್ರಮದಲ್ಲಿ ಅಂದರೆ 6 ತಿಂಗಳಿಗೆ ಒಂದು ಸಾರಿ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜನರಿಗೆ ವೈದ್ಯಕೀಯ ತಪಾಸಣೆ ಮಾಡಿಸುವುದು. ಇದರಲ್ಲಿ ಔಷಧಿ ಮತ್ತು ಇನ್‌ಜೆಂಕ್ಷನ್ ಚುಚ್ಚುವುದು ಅಲ್ಲ ಇದಕ್ಕೆ 900 ಕೋಟಿ ರೂಪಾಯಿಗಳು ಆಗುತ್ತದೆ ಎಲ್ಲಿ ತರುತ್ತೀರಿ ಎನ್ನುವ ಪ್ರಶ್ನೆಗಳೆಲ್ಲಾ ಬಂದಿದೆ. ನಾವು ಇದನ್ನು ಯಾವ ಉದ್ದೇಶದಿಂದ ಮಾಡಿದ್ದೇವೆಂದರೆ.

ಶ್ರೀ ವಾಟಾಳ್ ನಾಗರಾಜ್ : ನಾಡಿ ನೋಡುವುದು. ಬರುವುದು ಅಷ್ಟೇ.

ಶ್ರೀ ಎಸ್. ಬಂಗಾರಪ್ಪ : ನಾವು ಕೈ ಹಿಡಿದು ನಾಡಿ ನೋಡುವುದಿಲ್ಲ. ಇಲ್ಲಿಂದಲೆ ಯಾರ್‍ಯಾರ ನಾಡಿ ಎಷ್ಟೆಷ್ಟು ಹೊಡೆಯುತ್ತದೆ ಎನ್ನುವ ಅಂದಾಜು ಮಾಡುತ್ತೇವೆ. ಒಬ್ಬೊಬ್ಬರದು ಒಂದೊಂದು ರೀತಿ ನಾಡಿ ಹೊಡೆಯುತ್ತದೆ. ಮಾನ್ಯ ಅಧ್ಯಕ್ಷರೇ, ಈ ಶುಶ್ರೂಷ ಎನ್ನತಕ್ಕಂಥಾದ್ದು ಒಂದು ಟ್ರೀಟ್‌ಮೆಂಟ್ ಇದು "ಶುಶ್ರೂಕ" ಎನ್ನತಕ್ಕಂಥ ಒಬ್ಬ ಡಾಕ್ಟರ್ ಹೆಸರಿಗೂ ಸಹ ಸಂಬಂಧ ಬರುತ್ತದೆ. ಇದರ ಉದ್ದೇಶ ಏನೆಂದರೆ ಅನೇಕ ಜನರಿಗೆ ಕ್ಯಾನ್ಸರ್ ಮತ್ತೊಂದು ಎಂದು ಅರ್ಜಿ ಹಿಡಿದುಕೊಂಡು ಬರುತ್ತಾರೆ. ಕ್ಯಾನ್ಸರ್ ಬಂದರೆ ಕಿದ್ವಾಯಿ ಆಸ್ಪತ್ರೆಗೆ ಹೋಗಬೇಕೆಂದು ಬಹಳ ಜನಕ್ಕೆ ಗೊತ್ತಾಗುವುದಿಲ್ಲ. ಸೊಪ್ಪಿನ ರಸ ಬಿಟ್ಟು ಕೊಳ್ಳುವುದು ಮತ್ತೊಂದು ಬಿಟ್ಟುಕೊಳ್ಳುವುದನ್ನು ಮಾಡುತ್ತಾರೆ. ಅದನ್ನೂ ನಾವು ತಪಾಸಣೆ ಮಾಡುತ್ತೇವೆ. ಉದಾಹರಣೆಗೆ ಲಯನ್ಸ್ ಕ್ಲಬ್‌ಗಳು, ರೋಟರಿ ಕ್ಲಬ್‌ಗಳು ಇವರೆಲ್ಲಾ ನಮ್ಮನ್ನು ಕಾಂಟಾಕ್ಟ್ ಮಾಡಿದ್ದಾರೆ. ನಾವು ಹಣ ಖರ್ಚು ಮಾಡುತ್ತೇವೆ. ಡಾಕ್ಟರ್ಸ್‌ನ್ನು ಕೊಡುತ್ತೇವೆ, ಇದರ ಬಗ್ಗೆ ಒಳ್ಳೆಯ ಪ್ರೋಗ್ರಾಮ್ ಎಂದು ನನಗೆ ಎಷ್ಟು ಟೆಲಿಫೋನ್‌ಗಳು ಬಂದಿವೆ. ಎಂದು ನನಗೆ ಗೊತ್ತಿರತಕ್ಕ ವಿಚಾರ. ಒಂದು ತಾಲ್ಲೂಕಿಗೆ ಹೋದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಎಲ್ಲರನ್ನೂ ತಪಾಸಣೆ ಮಾಡಿ ಮುಗಿಸಿಬಿಡುತ್ತೇವೆ. ಯಾರ್‍ಯಾರು ಯಾವ ಯಾವ ಆಸ್ಪತ್ರೆಗೆ ಹೋಗಬೇಕು. ಪೋರ್ಟ್‌ಬಲ್ ಇ.ಸಿ.ಜಿ.ಗಳು ಇರುವುದರಿಂದ ನಾವು ಅಲ್ಲೇ ಚೆಕ್ ಮಾಡಬಹುದು. ರೋಗವನ್ನು ಅಲ್ಲೇ ಗುಣ ಮಾಡುವುದಕ್ಕಾಗದಿದ್ದರೆ. ಇಂಥ ಆಸ್ಪತ್ರೆಗಾದರೂ ಹೋಗಿ ಎಂದು ನಾವು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಅವರುಗಳು ಹೋಗುವುದಕ್ಕೆ ಸಾಧ್ಯವಾಗದೇ ಇದ್ದರೆ ನಮ್ಮ ವ್ಯಾನ್‌ನಲ್ಲೇ ಹಾಕಿ ಕಳುಹಿಸುತ್ತೇವೆ. ಒಂದು ಜೀವ ಉಳಿಸಿದರೆ ಸಾಕು. ಇದೆ ಶುಶ್ರೂಶೆ ಕೆಲಸ. ಇದಕ್ಕೆ 500 ಕೋಟಿ ರೂಪಾಯಿ ಬೇಕಾಗಿಲ್ಲ. ಅದರೂ ಕೂಡಾ, ಅಲ್ಲೇಲ್ಲಾ ಹೋಗಿ ಬರುವುದಕ್ಕೆ ವೆಹಿಕಲ್ಸ್ ಅದಕ್ಕೆ ಬೇಕಾದ ಡೀಸಲ್. ಪೆಟ್ರೋಲ್ ಮುಂತಾದ ಖರ್ಚುಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆಮೇಲೆ, ಮಾನ್ಯ ವಿರೋಧ ಪಕ್ಷದ ಉಪ ನಾಯಕರಾದ ಪಿ.ಜಿ.ಆರ್. ಸಿಂಧ್ಯಾರವರು, ಮಾನ್ಯ ಭೈರೇಗೌಡರು, ಮಾನ್ಯ ವಾಟಾಳ್ ನಾಗರಾಜ್‌ರವರು ಅನಂತರ ಮಾನ್ಯ ಶಿವರಾಮೇಗೌಡರವರು. ಬಾಬಾಗೌಡ ಪಾಟೀಲರು, ಮಾನ್ಯ ಶಿವಾನಂದ ಕೌಜಲಗಿಯವರು ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಅನೇಕ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ವಿವರಕ್ಕೆ ಹೋಗದೇ ಇದ್ದರೂ ಕೂಡ ಅವರು ಅನುಮಾನ ವ್ಯಕ್ತಪಡಿಸಿ ಮಾತನಾಡಿರುವ ವಿಚಾರಗಳು ನಮ್ಮ ಗಮನಕ್ಕೆ ಬಂದಿದೆ.

ಪೋಲೀಸ್ ಇಲಾಖೆ ಸಂಬಂಧಪಟ್ಟ ಹಾಗೆ ದೊಡ್ಡ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಅವರ ಹೌಸಿಂಗ್ ಡೆವಲಪ್‌ಮೆಂಟಿಗೆ ಹಾಗೂ ಹೆಚ್ಚುವರಿ ಪೋಲೀಸರನ್ನು ರಿಕ್ರೂಟ್ ಮಾಡಿಕೊಳ್ಳುವುದಕ್ಕೆ ಹೆಚ್ಚಿಗೆ ಹಣವನ್ನು ಇಟ್ಟಿದ್ದೇವೆ. ಇತ್ತೀಚೆಗೆ ಆದ ಕಮ್ಯುನಲ್ ಡಿಸ್ಟರ್ಬೆನ್ಸಸ್ ನಾವು ನೋಡಿದರೆ ಪೋಲೀಸ್ ಫೋರ್ಸ್‌ನ್ನು ದೊಡ್ಡದು ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವು ಕೂಡಾ ಅಭಿಪ್ರಾಯಪಟ್ಟಿದ್ದೀರಿ. ಆದಕ್ಕೆ ಅನುಸರಿಸಿ ಹೆಚ್ಚಿಗೆ ಹಣವನ್ನು ಒದಗಿಸಿದ್ದೇವೆ. ಅಗ್ನಿಶಾಮಕ ದಳವನ್ನು ಉತ್ತಮಪಡಿಸುವುದಕ್ಕಾಗಿ ಹಣವನ್ನು ಜಾಸ್ತಿ ಒದಗಿಸಿದ್ದೇವೆ. ಈಗಾಗಲೇ ಗೃಹ ಸಚಿವರು ಪ್ರವಾಸ ಮಾಡಿ ಕೆಲವು ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡಿ ಹಣವನ್ನೂ ಮಂಜೂರು ಮಾಡಿದ್ದಾರೆ. ಸರ್ಕಾರಿ ನೌಕರರಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಕೆಲವು ತೀರ್ಮಾನ ಮಾಡಿದ್ದೇವೆ. ಕೆಲವು ಶ್ರೇಣಿಯ ನೌಕರರಿಗೆ ಬಡ್ತಿ ಕೊಡತಕ್ಕ ವಿಚಾರದಲ್ಲಿ ಇದನ್ನು ಮಾಡಿದ್ದೇವೆ. ಏಕೆಂದರೆ ಈಗಿರತಕ್ಕ ನಿಯಮದಲ್ಲಿ ಒಬ್ಬ ಕಾನ್‌ಸ್ಟೇಬಲ್ ಕಾನ್‌ಸ್ಟೇಬಲ್ ಆಗಿ ಸತ್ತು ಹೋಗಿಬಿಡುತ್ತಾನೆ. ಒಬ್ಬ ಗುಮಾಸ್ತ ಕೊನೆಯವರೆಗೂ ಗುಮಾಸ್ತನಾಗಿಯೇ ಇರುತ್ತಾನೆ. 15 ವರ್ಷಕ್ಕೆ ಒಂದು ಸಾರಿ ಬಡ್ತಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವು ಏನು ಅವನಿಗೆ ಹೆಚ್ಚಿಗೆ ಹಣ ಕೊಡುವ ಅವಶ್ಯಕತೆ ಬರುವುದಿಲ್ಲ, ಅವನು ಆಗಲೇ ಸಂಬಳದಲ್ಲಿ ರೀಚ್ ಆಗಿರುತ್ತಾನೆ. ಸುಮ್ಮನೆ ಬಡ್ತಿ ಕೊಡುವುದಷ್ಟೇ. ನಾನು ಒಬ್ಬ ಹೆಡ್‌ಕಾನ್‌ಸ್ಟೇಬಲ್ ಆದೆ ಎಂದರೆ ಅವನಿಗೆ ಏನೋ ಒಂದು ತರಹ ಸಂತೋಷ. ಇಂಥ ಕಾರ್ಯಕ್ರಮವನ್ನು ಸರ್ಕಾರಿ ನೌಕರರ ಬಗ್ಗೆ ಹಾಕಿದ್ದೇವೆ. ಆಮೇಲೆ ಮಾದರಿ ಗ್ರಾಮ ಮತ್ತು ರೈತರ ಬಗ್ಗೆ 10 ಕೋಟಿ ರೂಪಾಯಿ ಹಣವನ್ನು ತೆಗೆದಿಟ್ಟಿದ್ದೇವೆ. ಇದಕ್ಕೆ ಒಂದು ಸ್ಪೆಷಲ್ ಸ್ಕೀಮ್ ತಯಾರು ಮಾಡಿದ್ದೇವೆ. ಇನ್ನು ರಾಜ್ಯದ ಹೆದ್ದಾರಿಗಳ ಅಭಿವೃದ್ಧಿ ಮಾಡುವ ಬಗ್ಗೆ ಖಾಸಗಿಯವರಿಗೆ ಬೇಕಾದರೆ ಕೊಡುತ್ತೇವೆ. ಬೆಂಗಳೂರು ಮೈಸೂರು ರೋಡ್. ಇದನ್ನು ಅಭಿವೃದ್ಧಿ ಮಾಡುವ ಬಗ್ಗೆ ಖಾಸಗಿಯವರು ಮುಂದೆ ಬಂದರೆ ಅದರ ಬಗ್ಗೆ ವಿಚಾರ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಇರುವ ರೋಡ್‌ಗಳನ್ನು ನಮ್ಮಿಂದ ರಿಪೇರಿ ಮಾಡಿಸುವುದಕ್ಕಾಗುತ್ತಿಲ್ಲ, ಒಂದು ವಾಸ್ತವಾಂಶದ ವಿಚಾರ. ರಸ್ತೆಗಳಲ್ಲಿ ಆಗುತ್ತಿರುವ ಆಕ್ಸಿಡೆಂಟ್ ಮತ್ತು ಜನ ಸಾಯುತ್ತಿರುವ ಸಂಖ್ಯೆಯನ್ನು ನೋಡಿದರೆ ಇದನ್ನು ವಿಚಾರ ಮಾಡಬೇಕಾಗುತ್ತದೆ. ರಸ್ತೆಗಳ ಅಭಿವೃದ್ಧಿ ಬಗ್ಗೆ ಖಾಸಗಿಯವರು ಮುಂದೆ ಬರಲಿ, ಅದಕ್ಕೆ ಬೆಂಬಲ ಕೊಡುವುದಕ್ಕೆ ಸರ್ಕಾರದವರು ನಾವು ಇದ್ದೇವೆ. ಇದು ಸರ್ಕಾರದ ನೀತಿಯಾಗಿದೆ. ಇನ್ನು ಬೆಂಗಳೂರು ನಗರದ ಬಗ್ಗೆ ಬೆಂಗಳೂರು ಸಿಟಿ ಡೆವೆಲಪ್‌ಮೆಂಟ್ ಫಂಡ್ ಆಫ್ ಹಂಡ್ರೆಡ್ ಕ್ರೋರ್ಸ್, ನಾನು ಇದರ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿರಬಹುದು. ಇವತ್ತು ನ್ಯಾಷನಲ್ ಮತ್ತು ಮಲ್ಟಿ ನ್ಯಾಷನಲ್ ಕಂಪನಿಗಳು ಕೂಡ ಬೆಂಗಳೂರಿನಲ್ಲೇ ಇವೆ. ಉದಾಹರಣೆ ಲಿಪ್ಟ್‌ನ್ನು ಬ್ರೂಕ್ ಬಾಂಡ್ ಇನ್ನೂ ಅನೇಕ ಇವೆ. ಅವರುಗಳು ಎಲ್ಲಿಂದಲೋ ಇಲ್ಲಿಗೆ ಬರೋದು ಅವರ ಬಗ್ಗೆ ನಾವು ವಿರೋಧವಾಗಿ ಮಾತಾನಾಡುತ್ತಿಲ್ಲ. ಒಂದು ಕಂಪನಿ, ಎರಡು ಕಂಪನಿ ನೋಡಿದ್ದೇನೆ. 13 ಕೋಟಿ 15 ಕೋಟಿ, 20-25 ಕೋಟಿ ಲಾಭ ಮಾಡತಕ್ಕಂಥವರು ಇಲ್ಲೇಯೇ ಇದ್ದಾರೆ.

ಅವರ ಕಾಂಟ್ರಿಬ್ಯೂಷನ್ ಬೆಂಗಳೂರು ನಗರಕ್ಕೆ ಏನೆಂದರೆ, ಹೌಸ್ ಟ್ಯಾಕ್ಸ್ ಒಂದನ್ನೂ ಬಿಟ್ಟರೆ ಬೇರೆ 5 ಪೈಸೆ ಸಹಕೊಟ್ಟಿಲ್ಲ. Everybody is thinking that Bangalore is a green pasture and they can come to Bangalore and Start grazing.

ಬೆಂಗಳೂರಿನಲ್ಲಿ ವೆಹಿಕಲ್ಸ್ ಬಂದು ತುಂಬುತ್ತಿದ್ದಾವೆ. ಒಂದು ಬಸ್ ಸರಿಯಾಗಿ ಹೋಗುವುದಕ್ಕಾಗುತ್ತಿಲ್ಲ, ರೋಡ್‌ಗಳು ಅಗಲ ಆಗುತ್ತಿಲ್ಲ, ಅವಕ್ಕೆ ಫ್ಲೈ ಓವರ್ಸ್ ಸಬ್ ವೇಸ್, ಕುಡಿಯುವ ನೀರು ಇರಬಹುದು. ಇಂಥ ಅನೇಕ ವಿಚಾರಗಳು ಇರಬಹುದು.

ಇವತ್ತು ನಮ್ಮ ಸರ್ಕಾರ ಇರಲಿ, ನಿಮ್ಮ ಸರ್ಕಾರ ಇರಲಿ, ಯಾವ ಸರ್ಕಾರ ಇದ್ದರೂ ಇವಕ್ಕೆಲ್ಲಾ ಏನಾದರೂ ಮಾಡಬೇಕಲ್ಲಾ.

ಅದಕ್ಕೆ ಹಣ ಕೊಡದೇ ಹೋದರೆ ಆಗುವುದಿಲ್ಲ. ಅದಕ್ಕೆ 100 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದೇವೆ. ಈಗಾಗಲೇ ಅನೇಕ ಜನ ನಮ್ಮನ್ನು ಕಾಂಟ್ಯಾಕ್ಟ್ ಮಾಡಿದ್ದರು. ಅನೇಕ ಜನ ನಾವು 25 ಲಕ್ಷ ರೂಪಾಯಿ ಕೊಡುತ್ತೇವೆ,50 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದರು. ಒಬ್ಬರಂತೂ ನಾನು ಒಂದು ಕೋಟಿ ರೂಪಾಯಿ ಕೊಡುತ್ತೇನೆ ಎಂದು ಈಗಾಗಲೇ ಬಂದಿದ್ದರು. ನಾನೇನು ಒಬ್ಬರಿಗೂ ಫೋನ್ ಮಾಡಿಲ್ಲ. ಅವರ ಸಭೆ ಕರೆಯೋಣ. ಕುಳಿತುಕೊಂಡು ಮಾತನಾಡೋಣ. ಮಾತನಾಡಿ ಎಲ್ಲಾ ಸೇರಿ ನೀವು ಇಷ್ಟು ಕೊಡಬೇಕೆಂದು ಹೇಳೋಣ.

ಅವರೆಲ್ಲಾ ನ್ಯಾಷನಲ್, ವಲಲ್ಟಿ ನ್ಯಾಶನಲ್ ಬಾಡೀಸ್. ಯಾಕೆ ಹಣವನ್ನು ಕೊಡಬಾರದು? ಇದು ನನಗೆ ಅರ್ಥ ಆಗದೇ ಇರುವ ವಿಚಾರ ಅದೇ ರೀತಿಯಾಗಿ ನಾಳೆ ಗುಲ್ಬರ್ಗ, ರಾಯಚೂರು, ಬಳ್ಳಾರಿ, ಮಂಗಳೂರು ಇರಬಹುದು ಹುಬ್ಬಳ್ಳಿ - ಧಾರವಾಡ ಇರಬಹುದು. ಬೆಳಗಾಂ ಇರಬಹುದು. ಶಿವಮೊಗ್ಗ ಇರಬಹುದು. ಇವೆಲ್ಲವೂ ಕೂಡ ಬೆಳೆಯುತ್ತಾ ಹೊರಟು ಹೋಗಿ ' ಬಿಟ್ಟಿವೆ. ನಾವು ವಿಚಾರ ಮಾಡದೇ ಇದ್ದರೆ ಕಷ್ಟ.ಈ ನಗರಗಳ ಗ್ರೋಶ್ ರೇಟ್‌ನ್ನು ನೋಡಬೇಕು. ಇವುಗಳಿಗೆ ಬೇಕಾದಂತಹ ಸೌಲಭ್ಯಗಳನ್ನು ನಾವು ವಿಚಾರ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕ ದೃಷ್ಟಿಯಿಂದ ನಾವು ಇದರ ಬಗ್ಗೆ ವಿಚಾರವನ್ನು ಕೂಡ ಮಾಡಿದ್ದೇವೆ. ಇನ್ನೂ ಕೃಷ್ಣಾ ಮೇಲ್ದಂಡೆ ವಿಚಾರದಲ್ಲಿ ಹಣವನ್ನು ನಾವು ತೆಗೆದಿಟ್ಟಿದ್ದೇವೆ. ಅದು ಅನೇಕ ಸಾರಿ ರೀ ಷೆಡ್ಯೂಲಿಂಗ್ ರೀ ಷೆಡ್ಯೂಲಿಂಗ್ ಆಗಿ ಬಹಳ ವ್ಯತ್ಯಾಸ ಆಗಿದೆ. ನಮಗೆ ಆದರಿಂದ ಸಮಾಧಾನ ಆಗಿಲ್ಲ. ಅಧಿಕಾರಿಗಳು ಅಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದಕ್ಕೋಸ್ಕರ ಈಗ ಹಣವನ್ನು ಜಾಸ್ತಿ ತೆಗೆದಿಟ್ಟು ಕೆಲಸ ಮಾಡಿಸಬೇಕು ಎನ್ನತಕ್ಕ ವಿಚಾರ ಮಾಡಿದ್ದೇವೆ. ಅಧಿಕಾರಿಗಳು ಅಲ್ಲಿಗೆ ಹೋದವರೂ ಯಾರೂ ಇರುವುದಿಲ್ಲ ಈ ಕಡೆ ವರ್ಗ ಮಾಡಿಸಿಕೊಂಡು ಬರುತ್ತಾರೆ. ಆದ್ದರಿಂದ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕೆಂದು ಇದ್ದೇವೆ. ಹೆಚ್‌ಕೆಡಿಬಿ ಏರಿಯಾದಲ್ಲಿ ಮಾನ್ಯ ಚಂದ್ರೇಗೌಡರ ಗಮನಕ್ಕೆ ತರುವ ಹಾಗೆ ಇದ್ದರೆ ಇವತ್ತು ಹೆಚ್‌ಕೆಡಿಬಿ ಮಾಡಿದ್ದೇವೆ, ಮಲೆನಾಡಿನಲ್ಲಿ ಒಂದು ಬೋರ್ಡ್ ಮಾಡಬೇಕು. ಏಕೆಂದರೆ ಅಲ್ಲಿ ಕಮ್ಯುನಿಕೇಷನ್ ಫೆಸಿಲಿಟೀಸ್ ಇಲ್ಲ. ಬ್ರಿಜ್ ಮತ್ತೊಂದು ಅದೆಲ್ಲ ಬರುವುದಿಲ್ಲ. ಬಹಳ ತೊಂದರೆ ಆಗಿದೆ. 15-20 ಮೈಲಿ ಸುತ್ತು ಹಾಕಿಕೊಂಡು ಬರಬೇಕು ಎನ್ನತಕ್ಕ ಮಾತು ಇದೆ ಅದೇ ರೀತಿಯಾಗಿ ಇವತ್ತು ಬಾಂಬೆ ಕರ್ನಾಟಕ ಭಾಗದಲ್ಲಿ ನಾವು ಮುಳುವಾಡ ಏತ ನೀರಾವರಿ ಯೋಜನೆ ಹಿಪ್ಪರಗಿ ಬ್ಯಾರೇಜ್ ಆಗಿದೆ. ಅದು ಆನ್‌ಗೋಯಿಂಗ್ ವರ್ಕ್. ಹಣವನ್ನು ಜಾಸ್ತಿ ಇಡಬೇಕು ಎನ್ನತಕ್ಕದ್ದು, ಮಾದಾಯಿ ಅದು ಮಲಪ್ರಭಾಕ್ಕೆ ಡೈವರ್ಷನ್ ಸ್ಕೀಮ್. ಅದು ಹುಬ್ಬಳ್ಳಿ - ಧಾರವಾಡಕ್ಕೆ ಕುಡಿಯುವ ನೀರು ಅಲ್ಲದೆ ಅದು ಮಲ್ಟಿ ಪರ್ಪಸ್ ಪ್ರಾಜೆಕ್ಟ್ ನೀರಾವರಿ, ವಿದ್ಯುತ್ ಇತ್ಯಾದಿ, ಇದಕ್ಕೂ ಕೂಡ ನಾವು ಹಣವನ್ನು ಸ್ಪೆಸಿಫೈ ಮಾಡಿಲ್ಲ. ಈ ವರ್ಷದಲ್ಲಿ ನಾವು ಹೆಚ್ಚಿನ ಹಣವನ್ನು ನಿರೀಕ್ಷಣೆ ಮಾಡುತ್ತಿದ್ದೇವೆ. ಎನ್‌ಡಿಸಿ ಮೀಟಿಂಗ್ ಆದ ಮೇಲೆ ನಾವು ಹಣವನ್ನು ಅಲ್ಲಿಗೆ ಡೈವರ್ಟ್ ಮಾಡುವುದಕ್ಕೋಸ್ಕರ ಎತ್ತಿಕೊಂಡಿದ್ದೇವೆ. ಹಣವನ್ನು ಆ ಭಾಗಕ್ಕೆ ಕೂಡ ನಾವು ಕೊಡುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ತುಂಗಾ ಮೇಲ್ದಂಡೆ ಯೋಜನೆ ಹೋದ ಸಾರಿ ಬಜೆಟ್‌ನಲ್ಲಿ ಸೇರಿಸಿತ್ತು. ಈ ಸಾರಿ ಸೇರಿಸಿಲ್ಲ. ಅದಕ್ಕೆ ಹಣ ಒದಗಿಸಿಲ್ಲ. ಹಣವನ್ನು ಒದಗಿಸಬೇಕು. ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಅದನ್ನು ವಿಚಾರ ಮಾಡೋಣ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾರ್ಪೊರೇಷನ್‌ಗೆ ಹಿಂದುಳಿದ ವರ್ಗದ ಕಾರ್ಪೊರೇಷನ್‌ಗೆ ಹೆಣ್ಣು ಮಕ್ಕಳ ಕಾರ್ಪೊರೇಷನ್‌ಗೆ ಬರೀ 80ಲಕ್ಷ ರೂಪಾಯಿ ಇರುವುದು. ಅದನ್ನು ಯಾರು ನೋಡುವುದಕ್ಕೆ ಹೋಗುತ್ತಾರೆ. ಈ ಸಾರಿ ನಾವು ಐದು ಕೋಟಿ ಚಿಲ್ಲರೆ ಅಂದರೆ ಆರು ಕೋಟಿ ರೂಪಾಯಿಗಳನ್ನು ತೆಗೆದುಇಟ್ಟಿದ್ದೇವೆ. ಮೈನಾರಿಟೀಸ್ ಕಾರ್ಪೊರೇಷನ್‌ಗೆ ಹಣವನ್ನು ಕೊಡತಕ್ಕದ್ದನ್ನು ನಾವು ಜಾಸ್ತಿ ಮಾಡಿದ್ದೇವೆ. ಎಲ್ಲಾ ಅಂಕಿ ಅಂಶಗಳನ್ನು ಬಜೆಟ್ ಸ್ಪೀಚಿನಲ್ಲಿ ಕೊಟ್ಟಿದ್ದೇವೆ. ವೃದ್ಧಾಪ್ಯ ವೇತನ, ತಮಗೆ ಗೊತ್ತಿರುವ ಹಾಗೆ 50ರೂಪಾಯಿ ಇದ್ದುದನ್ನು ನಾವು 75ರೂಪಾಯಿಗಳಿಗೆ ಏರಿಸಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದರ ಜೊತೆಗೆ ವಿಧವಾ ವೇತನ, ಅಂಗವಿಕಲರ ವೇತನ ಕೂಡ ಇದೆ. ಎರಡೂ ಒಟ್ಟಿಗೆ ಇರುಪಂತಹ ವಿಚಾರ. ಒಬ್ಬರಿಗೆ 50 ರೂಪಾಯಿ ಕೊಡುವುದು, ಮತ್ತೆ ಇನ್ನೊಬ್ಬರಿಗೆ 75 ರೂಪಾಯಿ ತೆಗೆದುಕೊಳ್ಳುತ್ತಾರೆ. ಇದು ತುಂಬಾ ಅನ್ಯಾಯ ಆಗುತ್ತದೆ. ತಾವು ಪರಿಶೀಲನೆ ಮಾಡಿ. ತಾವು ನಿಧಾನವಾಗಿ ಬೇಕಾದರೆ ಘೋಷಣೆ ಮಾಡಿ. ವಯಸ್ಸಾದಂತಹ ಹೆಣ್ಣು ಮಕ್ಕಳಿಗೆ ವಿಧವಾ ವೇತನಾ ಕೊಡುವ ವಿಚಾರ ಯಾರು ಇನ್ನೊಬ್ಬರ ಮೇಲೆ ಡಿಪೆಂಡ್ ಆಗಿ ಏನೂ ಕೆಲಸ ಇಲ್ಲದೇ ಇರುತ್ತಾಳೆ, ಅವಳಿಗೆ 50 ರೂಪಾಯಿ ಇದ್ದುದು ಅಷ್ಟು ಕೊಡುವುದು ಸಾಕೆ? ನಾವು ಹೇಳುತ್ತಾ ಇರುವುದು 100 ರೂಪಾಯಿಗಳವರೆಗಾದರೂ ಏರಿಸಬೇಕು ಎಂದು ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ಮೇಲೆ ಮಾಡಿ. ಕೊನೆಯಪಕ್ಷ ಅಂಗ ವಿಕಲರಿಗೆ ಮತ್ತು ವಿಧವಯರಿಗೆ 75 ರೂಪಾಯಿಗಳಿಗೆ ಏರಿಸಿದ್ದೇವೆ ಎನ್ನುವಂತಹ ಘೋಷಣೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ : ಇನ್ನು ಯುವ ಜನರ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಮ್ಮ ಕಡೆಯಿಂದ ಬಂದಂತಹ ಯಾವ ಸಲಹೆಗಳನ್ನು ತೆಗೆದುಕೊಳ್ಳುವುದಿಲ್ಲ. ನೀವು ಬೇಡಿ ಎಂದು ಹೇಳಿಬಿಡಿ ನಾವು ಹೊರಟು ಹೋಗುತ್ತೇವೆ.

ಶ್ರೀ ಎಸ್. ಬಂಗಾರಪ್ಪ : ನಾನು ಹೇಳುತ್ತೇನೆ ಕೇಳಿ

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಏನು ಅಂದುಕೊಂಡಿದ್ದೇನೆ ಎಂದರೆ ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಏನು ಕೆಲವು ಸಲಹೆಗಳನ್ನು ಕೊಡುತ್ತೇವೆ ಅದನ್ನು ತಾವು ಸ್ವಾಗತ ಮಾಡಬೇಕು.ಈ ಕಡೆಯಿಂದ ಹೇಳುವಂಥಾದ್ದು ಜನತೆಗೆ ಸಂಬಂಧಪಟ್ಟಿದ್ದು ಅಲ್ಲವೋ? ನಮ್ಮ ಸಲಹೆಗಳಲ್ಲಿ ಯಾವುದು ಸರಿ ಯಾವುದು ಅಸಾಧ್ಯವಿದೆ ಎನ್ನುವುದಾದರೂ ನಮಗೆ ತಿಳಿಸಿದರೆ ನಾವು ಸಲಹೆ ಕೊಟ್ಟಿದ್ದಕ್ಕೂ ಒಂದು ಅರ್ಥ ಉಂಟು. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಏನು ಹೇಳುತ್ತೇವೆ ಅದಕ್ಕೆ ತಾವು ತದ್ವಿರುದ್ಧವಾಗಿ ಹೇಳುವುದಾದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ : ಯಾವುದು ತದ್ವಿರುದ್ಧ? ನೀವು ಪ್ರಶ್ನೆ ಹಾಕಿಕೊಂಡು ನಾವು ತದ್ವಿರುದ್ಧ ಉತ್ತರ ಕೊಡುತ್ತೇವೆ. ಎಂದು ತಿಳಿದುಕೊಂಡರೆ ಬಹಳ ಕಷ್ಟ. ನಾನು ಇನ್ನೂ ಉತ್ತರ ಕೊಟ್ಟಿಲ್ಲ. ನೀವು ಅಕ್ಷರಲ್ಲಿಯೇ ತದ್ವಿರುದ್ದ ಎಂದು ತಿಳಿದುಕೊಂಡರೆ ಮುಂದಕ್ಕೆ ಹೋಗಿ ಬಿಟ್ಟರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಆಗಲೇ ಹೇಳಿದಂಥ ಇಬ್ಬರಿಗೂ 75 ರೂಪಾಯಿಗಳಂತೆ ಕೊಟ್ಟಿದ್ದೇವೆ. ಅದನ್ನು ಹೇಳುವುದನ್ನು ಮರೆತಿದ್ದೇನೆ, ಅದು ಪ್ರಿಂಟ್ ಆಗಿಲ್ಲ ಎಂದು ಹೇಳಿದ್ದರೆ, ಅದನ್ನು ನಾವು ಸ್ವಾಗತ ಮಾಡುತ್ತಿದ್ದೆವು.

ಶ್ರೀ ಎಸ್. ಬಂಗಾರಪ್ಪ : ನೀವು ಸ್ವಾಗತ ಮಾಡಿಯೇ ಮಾಡುತ್ತೀರಿ. ಹಣದ ಲೆಕ್ಕವನ್ನು ಹಾಕಿಕೊಂಡು ನಾವು ಹೇಳಬೇಕಾಗುತ್ತದೆ. ಅಷ್ಟು ಸುಲಭವೇ? ನೀವು ಪೂರ್ತಿ ಎಲ್ಲಾ ಆಗುತ್ತದೆಂದು ಫಿಲ್‌ಅಪ್‌ದಿ ಬ್ಲಾಂಕ್ಸ್ ಮಾಡಿಕೊಂಡು ಮುಂದಕ್ಕೆ ಹೋಗಿ ಬಿಟ್ಟರೆ ಹೇಗೆ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಎದ್ದ ಕೂಡಲೇ ಕೂಡಿ ಎಂದು ಹೇಳುತ್ತೀರಿ, ಎರಡು ವರ್ಷಗಳ ಹಿಂದೆ ಬಜೆಟ್‌ನಲ್ಲಿ ತುಂಗಾ ಮೇಲ್ದಂಡೆ ಯೋಜನೆ ಇತ್ತು. ಅದನ್ನು ತೆಗೆದು ಹಾಕಿದ್ದೀರಿ. ಎರಡೂವರೆ ಲಕ್ಷ ಎಕರೆಗೆ ನೀರಾವರಿ ಆಗುವಂಥಾದ್ದು ಬರಗಾಲ ಬವಣೆಗೆ ಒಳಗಾಗಿರುವಂತಹ ಜನರ ಬಗ್ಗೆ ನಾನು ಕೇಳುತ್ತಾ ಇದ್ದೇನೆ. ತಾವು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ : ಇತ್ತೀಚೆಗೆ ಒಂದು ಪ್ರಶ್ನೆ ಕೇಳಿದ್ದಿರಿ. ಸದನದಲ್ಲಿ ಬಂದಿದೆ. ನಾವು ಉತ್ತರ ಕೊಟ್ಟಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಉತ್ತರ ಕೊಟ್ಟಿಲ್ಲ. ಬಜೆಟ್‌ನಲ್ಲಿ ಇಟ್ಟಿದ್ದನ್ನು ತೆಗೆದು ಹಾಕಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಅದನ್ನು ಎಷ್ಟು ಸಾರಿ ಹೇಳಬೇಕು?

(ಗೊಂದಲ)

ಈಗಾಗಲೇ ಸದನದಲ್ಲಿ ಈ ಪ್ರಶ್ನೆಯು ಒಂದು ಸಾರಿ ಬಂದಿದೆ. ನಿಮಗೆ ಆ ಬಗ್ಗೆ ಉತ್ತರ ಕೊಟ್ಟಿದ್ದು ಆಗಿದೆ. ಆದ್ದರಿಂದ ಮತ್ತೊಮ್ಮೆ ತಮಗೆ ಹೇಳುವ ಅಗತ್ಯವಿಲ್ಲ ಒಂದು ವೇಳೆ ಹೇಳಿದರೂ ಪರಿಶೀಲಿಸುತ್ತೇನೆ. ಎಂದು ಹೇಳಬೇಕಾಗುತ್ತದೆ. ಆದರಿಂದ ಏನು ಪ್ರಯೋಜನ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಆ ಬಗ್ಗೆ ನಿರ್ದಿಷ್ಟವಾಗಿ ಏನಾದರೂ ಒಂದು ಹೇಳಿ ಎಂಬುದು ನಮ್ಮ ಒತ್ತಾಯವಾಗಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ವಿಧವಾ ವೇತನ ವಿಚಾರ ಕೂಡ ಈ ಅಂಗವಿಕಲರ ಬಗೆಗಿನ ವಿಚಾರದ ಜೊತೆಯಲ್ಲಿಯೇ ಬರುತ್ತದೆ. ಅಂಗವಿಕಲರ ಬಗ್ಗೆ ಬರೇ ವೇತನದ ಪ್ರಶ್ನೆ ಅಲ್ಲ. ಅಂಗವಿಕಲರನ್ನು ನಾವು ಡೈರೆಕ್ಟ್ ರಿಕ್ರೂಟ್‌ಮೆಂಟಿನಲ್ಲಿ ಕೆಲವೊಂದು ಪರ್‌ಸೆಂಟೇಜ್ ಮೂಲಕ ತರುತ್ತೇವೆ ಎಂದು ಹೇಳಿದ್ದೇವೆ. ಬಿ.ಎ., ಬಿ.ಎಸ್‌ಸಿ. ಮುಂತಾಗಿ ಮಾಡಿಕೊಂಡು ನಿರುದ್ಯೋಗಿಗಳಾಗಿ ಇರುವಂಥವರು ಎಷ್ಟು ಜನ ಅಂಗವಿಕಲರಿದ್ದಾರೆ. ಅವರಿಗೆ ಈ ಸರ್ಟನ್ ಪರ್‌ಸೆಂಟೇಜ್ ಪ್ರಕಾರ ಡೈರೆಕ್ಟ್ ರಿಕ್ರೂಟಮೆಂಟ್ ಮೂಲಕ ಕೊಟ್ಟ ಮೇಲೆಯೂ ಎಷ್ಟು ಜನ ಉಳಿಯುತ್ತಾರೆ ಇತ್ಯಾದಿಯನ್ನು ನೋಡಬೇಕಾಗಿದೆ. ಆ ಬಗ್ಗೆ ನಿಗದಿತ ಅಂಕಿಅಂಶಗಳನ್ನು ಪಡೆಯುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದನ್ನು ಮೇ, ಜೂನ್ ಒಳಗಾಗಿ ಮಾಡಬೇಕೆಂದಿದ್ದೇವೆ. ...

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನಮ್ಮ ರಾಜ್ಯದಲ್ಲಿ ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ಇತ್ಯಾದಿ ಕೊಡುತ್ತಾ ಇದ್ದೀರಿ. ವೃದ್ಧಾಪ್ಯ ವೇತನವನ್ನು ತಾವುಗಳು 50 ರಿಂದ 75 ರೂ.ಗಳಿಗೆ ಏರಿಸಿದ್ದೀರಿ. ಅದೇ ರೀತಿಯಲ್ಲಿ ವಿಧವಾ ವೇತನವನ್ನು ಕೂಡ ಏರಿಸಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನೋಡೋಣ ಪರಿಶೀಲನೆ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಧ್ಯಪ್ರದೇಶದಲ್ಲಿ ನಾವು ಅದನ್ನು 100 ರೂಪಾಯಿಗಳು ಎಂದು ಮಾಡಿದ್ದೇವೆ. 'ಬೇಕಾದರೆ ತಾವುಗಳು ಅಲ್ಲಿನ ವಿವರಗಳನ್ನು ಕೂಡ ತರಿಸಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಜೇಬಿನಲ್ಲಿ ಜಾಸ್ತಿ ಹಣ ಇದ್ದರೆ ನೀವು ಜಾಸ್ತಿ ಕೊಡುತ್ತೀರಿ, ಕಡಿಮೆ ಹಣ ಇದ್ದರೆ ಕಡಿಮೆ ಕೊಡುತ್ತೀರಿ. ನಾವಂತೂ ಒಂದು ವರ್ಗಕ್ಕಾದರೂ 50 ರೂಪಾಯಿಗಳು ಇದ್ದುದನ್ನು 75 ರೂಪಾಯಿಗಳಿಗೆ ಏರಿಸಿದ್ದೇವೆ. ತಾವುಗಳು ಹೇಳಿದ ವಿಚಾರದ ಬಗ್ಗೆಯೂ ಪರಿಶೀಲನೆ ಮಾಡೋಣ. ಅದಕ್ಕೆ ಬೇರೆ ಬೇರೆ ಕಾರಣಗಳು ಇವೆ. ಹೀಗೆ ಒಂದನ್ನು ಮಾಡಿ ಇನ್ನೊಂದನ್ನು ಬಿಡುತ್ತೇವೆಯೇ? ಅಷ್ಟು ನಮಗೆ ಹೊಳೆಯುವುದಿಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ವೇಳೆ ನಿಮ್ಮ ಮನಸ್ಸಿನಲ್ಲಿ ಅವರುಗಳು ಮೆರವಣಿಗೆ ಚಳುವಳಿ ಮುಂತಾದವುಗಳನ್ನು ಮಾಡಿಲ್ಲ ಅಂದರೆ ಅದನ್ನು ಕೂಡ ಮಾಡಿಸೋಣ.

ಶ್ರೀ ಎಸ್. ಬಂಗಾರಪ್ಪ : ಯಡಿಯೂರಪ್ಪನವರೆ, ಈ ನಿಮ್ಮ ಮೆರವಣಿಗೆ ಚಳುವಳಿ, ಜೈಕಾರ, ಇವೆಲ್ಲಾ ನಮಗೆ ಬಹಳ ಹಳೆಯದಾಗಿದೆ. ಇವೆಲ್ಲಾ ಪುಸ್ತಕದಲ್ಲಿನ ಹಳೆಯ ಅಧ್ಯಾಯಗಳು, ಏತಕ್ಕಾಗಿ ಅವುಗಳ ಬಗ್ಗೆ ಹೇಳುತ್ತಿದ್ದೀರಿ?

ಇನ್ನು ಜೋಗ ಜಲಪಾತ ಪ್ರದೇಶಕ್ಕೆ ಬಹಳಷ್ಟು ಜನ ಪ್ರವಾಸಿಗರು ಬಂದು ಹೋಗುತ್ತಾರೆ. ಅದೇ ರೀತಿಯಲ್ಲಿ ಅದನ್ನು ಮತ್ತಷ್ಟು ಆಕರ್ಷಣೀಯವಾಗಿ ಮಾಡಬೇಕಾಗಿತ್ತು. ಆದರೆ ಮಾಡಿಲ್ಲವಾದ ಕಾರಣ ಬಹಳಷ್ಟು ಜನರು ಅಲ್ಲಿಗೆ ಹೋಗಲು ಇಚ್ಛಿಸುವುದಿಲ್ಲ ಎಂಬ ಮಾತು ಇದೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಆ ಬಗ್ಗೆ ಒಂದು ಯೋಜನೆಯನ್ನು ಮಾಡಿದ್ದರು. ಅಲ್ಲಿಗೆ ಜಪಾನ್ ದೇಶದ ನೆರವನ್ನು ಪಡೆದು ಒಂದು ಮಾಸ್ಟರ್ ಪ್ಲಾನ್‌ನ್ನು ತಯಾರು ಮಾಡಿದ್ದಾರೆ. ಅದೇ ರೀತಿಯಲ್ಲಿ ರಾಜ್ಯದಲ್ಲಿರುವ ಇಂಥ ಎಲ್ಲಾ ಕೇಂದ್ರಗಳಿಗೂ ನಾವು ಹೆಚ್ಚಿನ ಗಮನ ಮತ್ತು ಬೆಂಬಲ ಕೊಡಬೇಕೆಂಬ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಜೋಗದ ಮೇಲ್ದಂಡೆಗೆ ಒಡ್ಡು ಹಾಕಬೇಕೆಂಬ ಒಂದು ವಿಚಾರವನ್ನು ಇಟ್ಟುಕೊಂಡಿದ್ದೇವೆ ಅದಕ್ಕೆ ಸುಮಾರು 2-3 ಕೋಟಿ ರೂಪಾಯಿಗಳ ವೆಚ್ಚ ತಗಲಬಹುದು. ಶನಿವಾರ ಭಾನುವಾರ ಅದಕ್ಕೆ ಹೊಸದಾಗಿ ನೀರು ಬಿಡಬೇಕಾಗಿಲ್ಲ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿ ಸೋರಿ ಹೋಗುವ ನೀರು ಏನಿದೆ ಅದನ್ನು ಉಪಯೋಗಿಸಿಕೊಂಡು ಶನಿವಾರ, ಭಾನುವಾರಗಳಂದು ಪ್ರವಾಸಿಗರಿಗೆ ಆಕರ್ಷಣೀಯವಾಗಿರುವಂತೆ ಮಾಡಬೇಕೆಂಬ ಒಂದು ದೃಷ್ಟಿಯಿಂದ ಸೂಕ್ತ ಕಾರ್ಯವನ್ನು ಮಾಡುತ್ತೇವೆ. ಯುವಜನ ಸೇವಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೈದ್ರಾಬಾದ್‌ನಲ್ಲಿರುವ ಹಾಗೆ ನಮ್ಮ ಎಲ್ಲಾ 30-31 ತಾಲ್ಲೂಕುಗಳಲ್ಲಿಯೂ ಒಂದೊಂದು ಸ್ಟೇಡಿಯಂ ಮಾಡಬೇಕೆಂದಿದ್ದೇವೆ. ಅಂತೆಯೇ ಜಿಲ್ಲಾ ಕೇಂದ್ರಗಳಲ್ಲಿಯೂ ಕೂಡ ಇರತಕ್ಕಂಥ ಸ್ಟೇಡಿಯಂಗಳನ್ನು ಸುಮಾರು 4-5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸರಿಪಡಿಸಬೇಕೆಂದು ಇದ್ದೇವೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕೂಡ ಈ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿ ಯುವಜನ ಸೇವೆಗೆ ಸಂಬಂಧಪಟ್ಟ ಹಾಗೆ ಕಾರ್ಯಕ್ರಮಗಳನ್ನು ಮಾಡಬೇಕೆಂದಿದ್ದೇವೆ.

ಕನ್ನಡ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟಂತೆ ಮತ್ತೊಂದು ಗಮನಾರ್ಹ ವಿಚಾರವನ್ನು ಹೇಳಬೇಕಾಗಿದೆ. ವೀಡಿಯೋ ಪಾರ್ಲರ್ಸ್ ಕೇಬಲ್ ಟಿವಿ, ಡಿಸ್ಕ್ ಅಂಟೇನಾಗಳು, ಇವೇ ಮುಂತಾದವುಗಳು ಹುಟ್ಟಿಕೊಂಡು ಚಲನ ಚಿತ್ರೋದ್ಯಮಕ್ಕೆ ಹಾನಿಯುಂಟಾಗಿದೆ. ಅವೆಲ್ಲವನ್ನೂ ನಾವು ನಿಲ್ಲಿಸಬೇಕೆಂಬ ವಿಚಾರವನ್ನು ಕೂಡ ಮಾಡಿದ್ದೇವೆ. ಇದರ ಬಗ್ಗೆ ಕಾನೂನಿನ ಒತ್ತಾಯವನ್ನು ತರುತ್ತೇವೆ. ಇನ್ನು ದ.ರಾ. ಬೇಂದ್ರೆಯವರ ಸ್ಮಾರಕ

ಮಾನ್ಯ ಕುವೆಂಪುರವರು ಹುಟ್ಟಿದ ಕುಪ್ಪಳ್ಳಿಯಲ್ಲಿ ಒಂದು ಟ್ರಸ್ಟ್ ಮಾಡುವ ವಿಚಾರ ಪು.ತಿ. ನರಸಿಂಹಾಚಾರ್‌ರವರ ಬಗ್ಗೆ- ಇವೇ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಡಬೇಕೆಂದು ಇದ್ದೇವೆ. ಕನ್ನಡ ರಂಗಭೂಮಿ ಕಲಾವಿದರ ವಿಚಾರದಲ್ಲಿ ಸಿರಗಲ್‌ವಿಂದೋ ಏಜೆನ್ಸಿ ಮಾಡಬೇಕೆಂದು ಮಾಡಿದ್ದೇವೆ. ಏಕೆಂದರೆ ಅವರಿಗೆ ತಮ್ಮ ಕೆಲಸಕ್ಕಾಗಿ ಬೇರೆ ಬೇರೆ ಕಡೆಗಳಿಗೆ ಹೋಗುವುದು ತುಂಬಾ ಕಷ್ಟದಾಯಕವಾಗಿ ಆದಕಾರಣ ಅವರಿಗೆ ಬೇಕಾದ ವಿಚಾರಗಳನ್ನು ಒಂದೇ ಕಡೆಯಲ್ಲಿ ಮಾಡಬೇಕೆಂಬ ವಿಚಾರ ಇಟ್ಟು ಕೊಂಡಿದ್ದೇವೆ. ಇನ್ನೂ ಅನೇಕ ವಿಚಾರಗಳು ಬಂದಿದ್ದಾವೆ. ಎಲ್ಲಾ ವಿಚಾರಗಳಿಗೆ ಅಂತಿಮವಾಗಿ ಹೆಚ್ಚಿನ ಗಮನ ಕೊಡುತ್ತೇವೆ ಎಂದು ತಿಳಿಸಿ ಈ ಒಂದು ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಉಪನಾಯಕರು, ಮತ್ತಿತರ ಪಕ್ಷಗಳ ನಾಯಕರು. ಎಲ್ಲಾ ಮಾನ್ಯ ಸದಸ್ಯರು ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಉತ್ತರ ಕೊಡುವಾಗ ಕೆಲವುಗಳನ್ನು ಬಿಟ್ಟಿರಬಹುದು. ಎಲ್ಲವಕ್ಕೂ ಉತ್ತರ ಕೊಡುವುದಕ್ಕೆ ಆಗಿಲ್ಲದಿರಬಹುದು. ಆ ಬಗ್ಗೆ ಕ್ಷಮೆ ಕೋರಿ, ಇಷ್ಟು ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಯಿತು. ಎಂದು ಹೇಳುತ್ತಾ ಶಾಂತಿಯುತವಾಗಿ, ಅಭಿಮಾನದಿಂದ ನನ್ನ ಉತ್ತರವನ್ನು ಕೇಳಿದಕ್ಕಾಗಿ ತಮ್ಮೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಹಾಗೇಯೆ ಈ ಸಂದರ್ಭದಲ್ಲಿ ಓಟ್ ಅನ್ ಅಕೌಂಟ್‌ನ್ನು ಕೂಡ ಪಾಸ್ ಮಾಡಿಕೊಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಸಪ್ಲಿಮೆಂಟರಿ ಡಿಮಾಂಡ್ಸ್‌ನ್ನು ಕೂಡ ಚರ್ಚೆಗೆ ಇಟ್ಟಕೊಂಡಿದ್ದೇವೆ. ಅದಕ್ಕೂ ಕೂಡ ತಾವುಗಳು ಒಪ್ಪಿಗೆ ಕೊಟ್ಟರೆ ಒಳ್ಳೆಯದು ಏತಕ್ಕೆಂದರೆ ಇವುಗಳು ಆ ಸದನದಲ್ಲಿಯೂ ಇವತ್ತು ಒಪ್ಪಿಗೆ ಪಡೆಯಬೇಕಾಗಿರುವುದರಿಂದ ಅದಕ್ಕೆ ತಾವುಗಳು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಮಾನ್ಯ ಮುಖ್ಯಮಂತ್ರಿಗಳವರಿಂದ ಉತ್ತರವನ್ನು ನಿರೀಕ್ಷೆ ಮಾಡಿದ್ದೆ. ಆದರೆ ಅವರು ಇಲ್ಲಿ ಉತ್ತರ ಕೊಡದೆ ತಮ್ಮ ತಮ್ಮ ಕಾರ್ಯಕ್ರಮಗಳನ್ನು ಮಾತ್ರ ಹೇಳಿದ್ದಾರೆ. ಹಾಗಾದರೆ ನಾವು ಇಲ್ಲಿ ಚರ್ಚೆ ಮಾಡುವ ಅರ್ಥವಾದರೂ ಏನು? ಅನೇಕ ವಿಚಾರಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಹಲವಾರು ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಉತ್ತರ ಕೊಡುವಾಗ ಬಿಟ್ಟು ಹೋದ ಅಥವಾ ಆಲೋಚನೆ ಮಾಡಬೇಕಾಗಿರುವಂಥವುಗಳನ್ನು ಹೊರತುಪಡಿಸಿ ಬೇರೆಯವುಗಳಿಗಾದರೂ ಉತ್ತರವನ್ನು ಕೊಡಬೇಕಾಗಿತ್ತು. ನಾನು ಮೊದಲೇ ಹೇಳಿದ್ದೆ Conflict between Article 202 and 206.

ಅದರ ಬಗ್ಗೆ ಒಂದು ಶಬ್ದವನ್ನು ಕೂಡ ತಾವು ಹೇಳಿಲ್ಲ. These are all vital important matters.

ಬ್ಯುರೋ ಅಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಹೊರತು ಪಡಿಸಿ, ಒಂದು ತಾಂತ್ರಿಕ ಸಮಿತಿಯ ಮೂಲಕ ವಿವರವಾದ ವಿಚಾರಣೆ ಮಾಡಿಸಿ, ಏಕೆಂದರೆ ಬರೀ ಐಎಎಸ್ ಅಧಿಕಾರಿಗಳು ಅಲ್ಲಿಯೂ ಇರುತ್ತಾರೆ ಅವರಿಂದಲೇ ಮಾಡಿಸಿದರೆ The report will be the same.

ಆದ್ದರಿಂದ ಈ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅದನ್ನು ಮಾಡಿ, ಏಕೆಂದರೆ ಈ ಸದನದ ಸಮಿತಿಯನ್ನು ಮಾಡಿ ಅಂದರೆ ಅದಕ್ಕೆ ತಾವುಗಳು ಒಪ್ಪಲಿಲ್ಲ. ಆದ್ದರಿಂದ ತಾಂತ್ರಿಕ ಸಮಿತಿಯನ್ನಾದರೂ ಮಾಡಿ ಎಂದು ಕೇಳಿಕೊಂಡಿದ್ದೇವೆ. ಆ ಬಗ್ಗೆ ನಿಮ್ಮ ಅಭಿಪ್ರಾಯವೇನು? ಹಿಂದುಳಿದ ವರ್ಗದವರಿಗೆ 32 ಶೇಕಡಾ ಮೀಸಲಾತಿ ಇತ್ತು That is our plan

ಇವರದ್ದು ಬ್ಲಾಂಕ್‌ನಲ್ಲಿ ಇದೆ ಎಂದು ಹೇಳಿದ್ದೀರಿ. ಏನಾದರೂ ಒಂದು ವಿವರಣೆಯನ್ನು ಇದರ ಬಗ್ಗೆ ಹೇಳಬೇಕಾಗಿತ್ತು, ಆದರೆ ಆ ಕುರಿತು ಚಕಾರ ಎತ್ತಲಿಲ್ಲ. ನಾನು ಮುಖ್ಯವಾಗಿ ಕೋಮುಗಲಭೆ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಅದಕ್ಕೆ ತಾವುಗಳು ಉತ್ತರಿಸಿಲ್ಲ, ನಿಂಗೋಜಿರಾವ್ ಕಮಿಶನ್ ರಾಮನಗರಂ ಕಮಿಟಿ ಎನ್‌ಕ್ವೈಯರಿ, ಇವುಗಳ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಅದರ ಬಗ್ಗೆ ಹೇಳಿಲ್ಲ. ರೈತರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಆ ಬಗ್ಗೆ ಇನ್ನೂ ಕೂಡ ಅಲೋಚನೆ ಮಾಡುವುದಕ್ಕೆ ಏನಿದೆ? ಮುಖ್ಯವಾಗಿ ಕೆರೆಗಳಲ್ಲಿ ಹೂಳು ಎತ್ತತಕ್ಕಂಥ ಕೆಲಸ ಕಾರ್ಯಗಳ ಬಗ್ಗೆ, ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ ಕಾರ್ಯದ ಬಗ್ಗೆ, ಹನಿ ನೀರಾವರಿಗಳಿಗೆ ಸ್ವಲ್ಪ ಹೆಚ್ಚಿಗೆ ಅನುದಾನವನ್ನು ಕೊಡುವ ಬಗ್ಗೆ ಮುಂತಾಗಿ ಹೇಳಿದ್ದಕ್ಕೆ, ಸಲಹೆ ಕೊಟ್ಟಿರವುದಕ್ಕೆ ಇವರು ಯಾವ ಉತ್ತರವನ್ನೂ ಕೊಟ್ಟಿಲ್ಲ. ಅದೆಲ್ಲಾ ಬಿಟ್ಟರೂ ಪಂಚಸೂತ್ರದ ಬಗ್ಗೆ ಕೂಡ ಅವರು ಮಾತನಾಡಿಲ್ಲ. ಕನ್ನಡ ಭಾಷೆಯ ಅಭಿವೃದ್ಧಿ ಕುರಿತು ಒಂದು ಮಾತು ಇದೆ. ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಗಾರರನ್ನು ಸಿದ್ಧಗೊಳಿಸಲು ವಾಣಿಜ್ಯ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಕೂಡ ವೃತ್ತಿ ತೆರಿಗೆಯನ್ನು ಹಾಕುತ್ತಿದ್ದೀರಿ. ಕನಿಷ್ಟ ಪಕ್ಷ ಕನ್ನಡ ಭಾಷಾ ಅಭಿವೃದ್ಧಿ ಮಾಡುತ್ತಿರುವ ಇವರಿಗೆ ವಿನಾಯತಿಯನ್ನು ಕೊಡುವ ಬಗ್ಗೆ ವಿಚಾರ ಮಾಡುತ್ತೀರಾ ಎಂದು ದಯಮಾಡಿ ಹೇಳಬೇಕು. ಇದಕ್ಕೆಲ್ಲಾ ತಾವುಗಳು ಉತ್ತರವನ್ನು ಹೇಳುವುದಿಲ್ಲ ಅಂದರೆ ನಾನು ಏನು ಮಾಡಲಿ? ಉತ್ತರಿಸಲು ತಮಗೊಂದು ಅವಕಾಶ ಇದ್ದರೂ ಅದನ್ನು ಕಳೆದುಕೊಂಡರು ಎಂದು ತಿಳಿದುಕೊಳ್ಳ ಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಎರಡು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಕನಿಷ್ಟ ಕೂಲಿಯನ್ನು ನಿಗದಿ ಮಾಡತಕ್ಕಂಥ ವಿಚಾರದಲ್ಲಿ ಸರಕಾರದವರು ಏಕೆ ತಡಮಾಡುತ್ತಿದ್ದಾರೆ? ಇದರಿಂದ ಸರಕಾರಕ್ಕೆ ಯಾವುದೇ ಖರ್ಚು ಕೂಡ ಬರುವುದಿಲ್ಲ. ಮಾನ್ಯ ಕೆ.ಹೆಚ್. ಪಾಟೀಲರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ವೇಜ್‌ಬೋರ್ಡ್‌ನ್ನು ಫಿಕ್ಸ್ ಮಾಡಿ ಒಂದು ರೆಕಮೆಂಡೇಶನ್‌ನನ್ನು ಮಾಡಿದ್ದಾರೆ. 610 ರೂ.ಗಳ ಕನಿಷ್ಟ ಕೂಲಿಯನ್ನು ಅವರು ರೆಕಮೆಂಡ್ ಮಾಡಿದ್ದಾರೆ. ಈಗ ತಾವುಗಳು ವೇಜ್‌ಬೋರ್ಡ್‌ನ್ನು ಪುನಃ ಕಾನ್ಸಿಟಿಟ್ಯೂಟೆಡ್ ಮಾಡುತ್ತಿದ್ದೀರಿ ಎಂದು ಕೇಳಿದ್ದೇನೆ. ಅದನ್ನು ಮಾಡಿ. ಕನಿಷ್ಟ ಕೂಲಿಯನ್ನು ನಿಗದಿ ಮಾಡುವ ಬಗ್ಗೆ ತಕ್ಷಣ ನೋಟಿಫಿಕೇಶನ್‌ನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಹೋಟೆಲ್‌ಗಳಲ್ಲಿ ತಿಂಡಿಯ ಬೆಲೆ ಹೆಚ್ಚಿಗೆಯಾಗುತ್ತಿದೆ. ಈ ತಿಂಡಿ ಪದಾರ್ಥಗಳ ಬೆಲೆಯನ್ನು ನಿಯಂತ್ರಣ ಮಾಡಲು ಮಾನ್ಯ ಆಹಾರಸಚಿವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ತಾವುಗಳು ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹೋಟೆಲ್ ಮಾಲೀಕರು 100 ಪರ್ಸೆಂಟ್ ಲಾಭವನ್ನು ಇವೊತ್ತು ಆ ಉದ್ಯಮದಲ್ಲಿ ಇಟ್ಟುಕೊಂಡಿದ್ದಾರೆ. ನೀವು ಸರ್ಕಾರದವರು ಇದನ್ನು ನಿಗದಿ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಂಡರೆ ಇದು ತಕ್ಷಣ ಸಾಧ್ಯವಾಗುತ್ತದೆ. ನೀವು ಹೇಳಿಕೆ ಕೊಟ್ಟರೂ ಕೂಡ ಇದು ಸಾಧ್ಯವಾಗುತ್ತದೆ. ನೀವು ನಿಗದಿ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಲು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಮತ್ತು ಇದರ ಬಗ್ಗೆ ಒಂದು ಅಸೆಸ್ ಮಾಡುತ್ತೇವೆ. ಎಂದು ಹೇಳಿದರೂ ಸಾಕು ಬೆಲೆಗಳು ಕಡಿಮೆಯಾಗುತ್ತದೆ. ಅದರ ಬಗ್ಗೆ ತಾವು ಗಮನವನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ತಮ್ಮ ಭಾಷಣದಲ್ಲಿ ಮುಖ್ಯವಾಗಿ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ನಿರ್ದೇಶಕ ತತ್ವದಲ್ಲಿ ಹೇಳಿರುವಂಥ ರಾಜ್ಯ ನೀತಿಯ ಬಗ್ಗೆ ಪ್ರಮುಖವಾದಂಥ ಬದಲಾವಣೆಯನ್ನು ತಮ್ಮ

ಸರ್ಕಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತದೆ ಎಂಬ ಮಾತನ್ನು ಸೂಚ್ಯವಾಗಿ ಹೇಳಿದ್ದಾರೆ. ನಾನು ಅದರ ಬಗ್ಗೆ ಅವರಿಂದ ಸ್ಪಷ್ಟವಾದಂಥ ವಿವರಣೆಯನ್ನು ಬಯಸುತ್ತೇನೆ. ರಾಷ್ಟ್ರೀಕರಣದಿಂದ ಹೊರಗಡೆ ನಿಂತು ಖಾಸಗೀಕರಣದ ಕಡೆಗೆ ಏನು ಅವರು ಹೋಗುತ್ತಿದ್ದಾರೆ. ಅದು ನಮ್ಮ ಸಂವಿಧಾನದಲ್ಲಿನ ನಿರ್ದೇಶಕ ತತ್ವದಲ್ಲಿ ಅಡಗಿರುವಂಥ ರಾಜ್ಯ ನೀತಿಗೆ ವಿರುದ್ಧವಾಗಿಲ್ಲವೇ? ಇದು ಒಂದು ಏನು ಆರ್ಥಿಕ ಅಸಮಾನತೆಯನ್ನು ತೆಗೆದುಹಾಕುವುದಕ್ಕೆ ನಮ್ಮ ರಾಷ್ಟ್ರ ಅಥವಾ ನಮ್ಮ ರಾಜ್ಯದಲ್ಲಿನ ಸಾಧನ ಸಂಪತ್ತುಗಳು ಮತ್ತು ಒಡೆತನ ಏನು ಇದೆ. ಅದರ ಬಗ್ಗೆ ನಿಯಂತ್ರಣ ಮಾಡಬೇಕು ಎನ್ನುವ ಮಾತನ್ನು ನಾವು ನಮ್ಮ ನಿರ್ದೇಶಕ ತತ್ವದಲ್ಲಿ ಹೇಳುತ್ತೇವೆ. ಮತ್ತು ನಮ್ಮ ಅರ್ಥ ವ್ಯವಸ್ಥೆಯು ಪ್ರವರ್ತನೆಯು ಅಂದರೆ ಏಕಾನಾಮಿಕ್ ಆಪರೇಷನ್ ಸರ್ವಸಾಮಾನ್ಯರ ಹಿತಸಾಧನೆಗೆ ಬಾಧಕವಾಗುವ ರೀತಿಯಲ್ಲಿ ಸಂಪತ್ತು ಮತ್ತು ಉತ್ಪಾದನಾ ಸಾಧನೆಗಳು ಕೇಂದ್ರೀಕೃತವಾಗದಂತೆ ನಾವು ನೋಡಿಕೊಳ್ಳಬೇಕು ಎನ್ನುವ ಮಾತನ್ನು ನಾವು ಸಂವಿಧಾನದಲ್ಲಿ ಹೇಳುತ್ತೇವೆ. ಈ ರೀತಿ ನಮ್ಮ ನಿರ್ದೇಶಕ ತತ್ವದಲ್ಲಿ ನಮ್ಮ ರಾಜ್ಯ ನೀತಿಯಲ್ಲಿ ಪ್ರಕಟವಾಗಿದ್ದರೂ ಸಹಿತ ಅದಕ್ಕೆ ತದ್ವಿರುದ್ಧವಾದಂಥ ರೀತಿಯಲ್ಲಿ ನಮ್ಮ ಸರ್ಕಾರ ಇವತ್ತಿನ ದಿವಸ ನಡೆಯುತ್ತಿದೆ ಎನ್ನುವ ಮಾತನ್ನು ಸೂಚ್ಯವಾಗಿ ಹೇಳಿದ್ದಾರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸರ್ಕಾರದ ರಾಜ್ಯದ ನೀತಿಯ ಬಗ್ಗೆ ವಿವರವಾದಂಥ ಹೇಳಿಕೆಯನ್ನು ಈ ಸಂದರ್ಭದಲ್ಲಿ ಹೇಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು, ಉಪನಾಯಕರು ಮತ್ತು ಏಕಾಂತಯ್ಯನವರು ಏನು ಹೇಳಿದ್ದಾರೆ ಈಗಾಗಲೇ ನಾನು ಏಕಾಂತಯ್ಯನವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ ಏಕೆಂದರೆ ಸಾರ್ವಜನಿಕ ವಲಯದಲ್ಲಿರತಕ್ಕಂಥ ವಿಚಾರಧಾರೆ ಖಾಸಗೀಕರಣ ಅದರ ಬಗ್ಗೆ. .....

ಶ್ರೀ ಹೆಚ್. ಏಕಾಂತಯ್ಯ : ತಾವು ಹೇಳಿದ್ದೀರಿ. ತಾವು ಹೇಳುವಂಥ ಹೇಳಿಕೆ ಮೂಲಭೂತವಾಗಿ ನಮ್ಮ ಸಂವಿಧಾನದಲ್ಲಿರುವಂತೆ 39ನೇ ಅನುಚ್ಛೇಧದಲ್ಲಿ ಏನು ಇದೆ. ಈ ಅನುಚ್ಛೇಧದ 2 ಮತ್ತು 3 ನೇ ಉಪ ಕಂಡಿಕೆಗೆ ತೀವ್ರವಾಗಿ ವಿರುದ್ಧವಾಗಿದೆ. ಆದುದರಿಂದ ನಾನು ತಮ್ಮನ್ನು ಕೇಳುತ್ತೇನೆ. ಈ ಸಂವಿಧಾನದಲ್ಲಿ ಹೇಳಿರುವಂಥ ನೀತಿಗಳನ್ನು ತಾವು ಒಪ್ಪುತ್ತೀರಾ? ಅಥವಾ ಇಲ್ಲವೇ? ಅದಕ್ಕೆ ವಿರುದ್ಧವಾದಂಥ ರೀತಿಯಲ್ಲಿ ತಮ್ಮ ಸರ್ಕಾರದ ಕಾರ್ಯಕ್ರಮವನ್ನು ರೂಪಿಸಿ ಜಾರಿ ಮಾಡುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ : ನಾನು ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. Government is in favour of Public Sector only. It is not favour of private sector undertakings. Let me be very very clear

ನಾವು ನ್ಯಾಷನಲೈಸ್ ಮಾಡಬೇಕು. ಎಂದು ಹೇಳುವ ವಿಚಾರ ಬಂದಾಗ. ನಾವು ಅದರ ಪರವಾಗಿದ್ದೇವೆ. ಆದರೆ ಪರಿಸ್ಥಿತಿಯನ್ನು ತಾವು ಕೂಡ ನೋಡಿದ್ದೀರಿ. ಏಕೆಂದರೆ ತಾವು ಕೂಡಾ ಅಧಿಕಾರದಲ್ಲಿ ಇದ್ದಂಥವರು , ನೋಡಿರತಕ್ಕಂಥವರು ಈ ಹಣಕಾಸಿನ ಪರಿಸ್ಥಿತಿಯಲ್ಲಿ ಲಾಸ್ ಆಗುತ್ತಿರುವುದನ್ನು ನೋಡಿ ಅದನ್ನು ಎಲ್ಲಿಯವರೆಗೆ ತಡೆದು ಕೊಳ್ಳಬೇಕು ಎನ್ನುತಕ್ಕಂಥ ದೃಷ್ಟಿಯಿಂದ ಪ್ರಾಕ್ಟಿಕಲ್ ಆಗಿ ವಿಚಾರ ಮಾಡಿ ಇದನ್ನು ಮಾಡಿದ್ದೇವೆ. ಆ ದೃಷ್ಟಿಯಿಂದ ನಾವು ಖಾಸಗೀಕರಣಕ್ಕೆ ಹೋಗಬೇಕು ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ಇಟ್ಟು ನಾನು ಮಾತನಾಡುತ್ತಿಲ್ಲ. ಮೊದಲು ನಾವು ಸಾರ್ವಜನಿಕ ವಲಯದಲ್ಲಿರತಕ್ಕಂಥ ಉದ್ಯಮಗಳು ಉಳಿದವುಗಳಾದರೂ ಕೂಡ ಘನತೆ ಗೌರವದಿಂದ ಉಳಿಯಬೇಕು ಎಂದು ಇದ್ದರೆ ಇವತ್ತು ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ರಾಜ್ಯದಲ್ಲಿ ಟ್ಯಾಕ್ಸ್ ಹಾಕಿರತಕ್ಕಂಥದ್ದರ ಬಗ್ಗೆ ನೋಡಿದಾಗ ಜಾಸ್ತಿ ಟ್ಯಾಕ್ಸ್ ಹಾಕಿರತಕ್ಕಂಥ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಕೂಡಾ ಒಂದು hope,

you will agree with me. ನಾವು ಎಷ್ಟು ತೆರಿಗೆ ಹಾಕಬೇಕು ಎನ್ನತಕ್ಕಂಥದ್ದು ಒಂದು ವಿಚಾರ. ಅದಕ್ಕೋಸ್ಕರ ನಾವು ಖಾಸಗೀಕರಣದ ಪರ ಎಂದಲ್ಲ ಮೊದಲು ನಾವು ಆದರಿಂದ ಉಳಿದುಕೊಳ್ಳಬೇಕು ಎನ್ನತಕ್ಕಂಥ ಒಂದು ಅಭಿಪ್ರಾಯದಿಂದ ಪ್ರಾಕ್ಟಿಕಲ್ ಆಗಿ ವಿಚಾರ ಮಾಡಿದ್ದೇವೆ. ಇದನ್ನು ಬಿಟ್ಟು ಬೇರೆ ಏನೂ ಇಲ್ಲ. I agree with you basically but the whole thing is, how long we can go on sustaining these losses, how long we can undergo these huge debt position? ಎನ್ನತಕ್ಕಂತ ವಿಚಾರ, ಇದನ್ನು ತಪ್ಪಿಸದಿದ್ದರೆ We are doing a great injustice of the tax payers of Karnataka. This is all the thing.

ಅದನ್ನು ಬಿಟ್ಟರೆ ಇನ್ನೇನು ಇಲ್ಲ ಮಾನ್ಯ ವಿರೋಧಪಕ್ಷದ ನಾಯಕರು ಕ್ಷಮಿಸಬೇಕು. ನಾನು ಕಾಲದ ಅಭಾವದಿಂದ ಅಂತ ಹೇಳಿದೆ. ಪಂಚ ಸೂತ್ರವನ್ನು ಮಾಡಿದ್ದೇವೆ. ಅದಕ್ಕೆ ಒಂದು ಕಾನೂನನ್ನು ಇಡೀ ದೇಶದಲ್ಲಿ ಎಲ್ಲೂ ಇಲ್ಲ ಎಂದು ಹೇಳಿದ್ದೇನೆ. ನಾವು ಅದನ್ನು ಮಾಡುತ್ತೇನೆ. ಅದಕ್ಕೆ ಲೀಗಲ್ ಡ್ರಾಫ್ಟ್ ಮಾಡಬೇಕು. ಅದನ್ನು ಏಕ್ಸಾಮಿನ್ ಮಾಡುವುದಕ್ಕೆ ಟೈಂ ಬೇಕು. ಅದು ತಮಗೆ ಗೊತ್ತಿದೆ. ಕಾಲದ ಅಭಾವದಿಂದ ನಾವು ಏನು ಹೇಳುವುದಕ್ಕೆ ಹೋಗಲಿಲ್ಲ. ಮುಂದಿನ ಅಧಿವೇಶನದ ಹೊತ್ತಿಗೆ ನಾವು ಅದನ್ನು ತರುತ್ತೇವೆ. ಹಿಂದುಳಿದ ವರ್ಗಗಳ ಬಗ್ಗೆ ತಾವು ಹೇಳಿದ್ದೀರಿ we have already are going to invest on these classes.

ಅಂದಾಜಿನ ಮೇಲೆ ನಾವು ಹೇಳಿದ್ದೇವೆ. ಹಿಂದುಳಿದ ವರ್ಗದವರನ್ನು ಮೇಲಕ್ಕೆ ತರಬೇಕೆಂಬ ಇಚ್ಚೆ ಸರ್ಕಾರಕ್ಕೆ ಇದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ. apart from what we are providing for the cause of bringing up the minorities, SC/STs,

ಅದು ಅಲ್ಲದೆ ಇನ್ ಅಡಿಷನ್ ಟೂ ದಟ್ ಅದನ್ನು ಕೂಡ ಜಾರಿಗೆ ತಂದಿದ್ದೇವೆ. ಮತ್ತು ಬಡವರು ಎಲ್ಲಾ ಜಾತಿ ಎಲ್ಲಾ ಕೋಮಿನಲ್ಲಿಯೂ ಕೂಡ ಇದ್ದಾರೆ. ಲಿಂಗಾಯಿತರಲ್ಲಿ ಇಲ್ಲವೇ? ಒಕ್ಕಲಿಗರಲ್ಲಿ ಇಲ್ಲವೇ? ಬ್ರಾಹ್ಮಣರಲ್ಲಿ ಇಲ್ಲವೇ? ಆ ವರ್ಗವನ್ನು ಬಿಟ್ಟು ಮಾತನಾಡುವ ಹಾಗಿಲ್ಲ. ಹಿಂದುಳಿದವರ್ಗದವರ ವಿಚಾರ ಬಂದಾಗ ಆ ವರ್ಗವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಪಬ್ಲಿಕ್ ಅಂಡರ್ ಟೇಕಿಂಗ್ಸ್ ವಿಚಾರದಲ್ಲಿ ತಾಂತ್ರಿಕ ಸಮಿತಿ ಬಗ್ಗೆ ಮಾತನಾಡಿದ್ದೀರಿ, That is why I said,

ಒಂದು ಸಮಿತಿಯನ್ನು ಮಾಡಿ ಅದರ ಅಭಿಪ್ರಾಯವನ್ನು ತೆಗೆದುಕೊಂಡು ಮುಂದಕ್ಕೆ ಹೋಗುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೇವೆ. ತಮ್ಮ ಅಭಿಪ್ರಾಯವನ್ನು ಗಮನದಲ್ಲಿಟ್ಟು ಕೊಳ್ಳುತ್ತೇವೆ.. ಯಾವರೀತಿ ಹೋಗಬೇಕು, ಹೇಗೆ ಹೋಗಬೇಕೆಂಬ ವಿವರಗಳಿಗೆ ನಾನು ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಬಹಳ ಕಾಲಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ವಿರೋದ ಪಕ್ಷದ ಉಪನಾಯಕರು ವೇಜ್ ಬೋರ್ಡ್ ವಿಚಾರದಲ್ಲಿ ಕನಿಷ್ಠ ಕೂಲಿ ವಿಚಾರದಲ್ಲಿ ಪ್ರಯತ್ನ ಮಾಡಿರುವುದನ್ನು ನಮ್ಮ ಕಾರ್ಮಿಕ ಸಚಿವರಾದಂತಹ ನಾಡಗೌಡರು ಈಗಾಗಲೇ ಅದನ್ನು ಗಮನದಲ್ಲಿಟ್ಟುಕೊಂಡಿದ್ದಾರೆ. ಕನಿಷ್ಠ ಕೂಲಿಯ ವಿಚಾರದಲ್ಲಿ ನಾನು ಈಗಾಗಲೇ ಗಮನದಲ್ಲಿಟ್ಟುಕೊಂಡಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡಿ ಕೆಲವು ಅಮೆಂಡ್‌ಮೆಂಟ್ಸ್ ಅನ್ನು ತರಬೇಕೆಂದು ಇಟ್ಟುಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆ ಸಮಿತಿಯವರು ರೆಕಮೆಂಡ್ ಮಾಡಿದ್ದಾರೆ. ಸರ್ಕಾರ ಒಂದು ನೋಟಿಫಿಕೇಶನ್ ಹೊರಡಿಸಿದರೆ ಅದು ಫಿಕ್ಸ್ ಆಗುತ್ತದೆ. ವಿಶೇಷವಾಗಿ ಪ್ಲಾಂಟೇಶನ್ ವರ್ಕರ್ಸ್ ಮತ್ತು ಬೀಡಿ ವರ್ಕರ್ಸ್ ವೇಜಸ್ ಫಿಕ್ಸ್ ಮಾಡುವ ಬಗ್ಗೆ ಸರ್ಕಾರಕ್ಕೆ ಹೋಗಿ ಅರು ತಿಂಗಳು ಅಗಿದೆ. ಅದು ಸರ್ಕಾರದಲ್ಲಿದೆ. ಅದನ್ನು

ಹೊರಡಿಸಿ ಎಂದು ಕೇಳುತ್ತಿದ್ದೇವೆ. ಅಮೆಂಡ್‌ಮೆಂಟ್ ಬೇಕಾಗಿಲ್ಲ ಹೊಸದು ಏನೂ ಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ: ಅದರ ಬಗ್ಗೆ ನಾವು ಸೀರಿಯಸ್ ಆಗಿದ್ದೇವೆ. ಅನಂತರ ಎಸೆನ್‌ಷಿಯಲ್ ಕಾಮಾಡಿಟೀಸ್ ವಿಚಾರದಲ್ಲಿ ತಾವು ಹೇಳಿದ್ದೀರಿ. ಹೋಟೆಲ್ ತಿಂಡಿಗಳ ಬೆಲೆಯ ವಿಚಾರದ ಬಗ್ಗೆ ನಾವು ಈ ಸದನ ಮುಗಿಯುವುದರೊಳಗೆ ಕಾರ್ಯಕ್ರಮವನ್ನು ಹಾಕಿಕೊಂಡು ಪ್ರತ್ಯೇಕವಾದಂತಹ ಹೇಳಿಕೆಯನ್ನು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಇಡ್ಲಿಗೆ ಎಷ್ಟು ದೋಸೆಗೆ ಎಷ್ಟು ಎಂದು ಲೆಕ್ಕ ಹಾಗಬೇಕು

ಶ್ರೀ ಎಸ್. ಬಂಗಾರಪ್ಪ: ನಾಗರಾಜ್‌ರವರೆ ತಮಗೆ ಗೊತ್ತಿರಬೇಕು. ನಾವು ಹಿಂದೆಲ್ಲಾ ಮಾಡಿದ್ದೇವೆ. ನಾವು ರೇಟ್ ಇಳಿಸಿದ್ದೇವೆಂದು ಹೇಳಿ ಶ್ರೀ ರಾಮಲು ಸಚಿವರಾಗಿದ್ದಂತಹ ಕಾಲದಲ್ಲಿ ಇಡ್ಲಿ ಸೈಜ್ ಬೊಂಡಾದ ಸೈಜನ್ನೆ ಕಡಿಮೆ ಮಾಡಿಬಿಟ್ಟರು. ಅದೊಂದೇ ಹೆದರಿಕೆ ಇದೆ. ಆ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನೀವು ಒಂದು ರೇಟನ್ನು ಫಿಕ್ಸ್ ಮಾಡಿಸಬೇಕು ಆಗ ಅವರು ರೇಟನ್ನು ಕಡಿಮೆ ಮಾಡುತ್ತಾರೆ. ಅವರು ಇನ್ನೇನು ಮಾಡುತ್ತಾರೆ. ಹೇಳಿ? ಇವತ್ತು ಹೋಟೆಲ್‌ಗಳಲ್ಲಿ ಶೇಕಡ 100ಕ್ಕೆ 100 ಆದಾಯ ಇಟ್ಟುಕೊಂಡಿದ್ದಾರೆ. ನೀವು ನಿರ್ಧಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಂದು ದೋಸೆಗೆ 8 ರೂಪಾಯಿಯನ್ನು ತೆಗೆದುಕೊಳ್ಳುತ್ತಾರೆಂದರೆ ಅರ್ಥ ಏನು? ಮಾರ್ಕೆಟಿನಲ್ಲಿ ಸಿಗುವುದಿಲ್ಲವೆಂದರೆ ಅರ್ಥವೇನು? ಏಕೆ ಸಿಕ್ಕುವುದಿಲ್ಲ ಅವರು ಪಾಮಾಯಿಲ್ ತೆಗೆದುಕೊಳ್ಳುತ್ತಿಲ್ಲವಾ? ಅಕ್ಕಿ ತೆಗೆದುಕೊಳ್ಳುತ್ತಿಲ್ಲವಾ? ಗ್ಯಾಸ್ ತೆಗೆದುಕೊಳ್ಳುತ್ತಿಲ್ಲವಾ? ಲೈಟ್ ತೆಗೆದುಕೊಳ್ಳುತ್ತಿಲ್ಲವಾ? ನೀರು ತೆಗೆದುಕೊಳ್ಳುತ್ತಿಲ್ಲವಾ? ನಿಮಗೆ ಅಧಿಕಾರ ಇದೆ ಆದ್ದರಿಂದ ರಾಜ್ಯದ ಸಾಮಾನ್ಯ ಜನತೆಗೆ ಅನುಕೂಲವಾಗುವ ಹಾಗೆ ರೇಟ್‌ಗಳನ್ನು ನಿಗದಿ ಮಾಡಿ.

ಶ್ರೀ ಎಸ್. ಬಂಗಾರಪ್ಪ: ತಮ್ಮ ಅಭಿಪ್ರಾಯಕ್ಕೆ ಸಂಪೂರ್ಣ ಒಪ್ಪಿಗೆ ಇದೆ. ಆ ಕಾರ್ಯಕ್ರಮ ಹಾಕುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ನಿಸರ್ಗದ ಸಂಪತ್ತು ಬಗ್ಗೆ ಮಾನ್ಯ ಮಂತ್ರಿಗಳಿಗೆ ಕಾಳಜಿ ಇದೆ. ನನ್ನದು ಒಂದೇ ಸೂತ್ರ ನಿಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಗಮನಕ್ಕೆ ತರುತ್ತಿದ್ದೇನೆ. ಇಡೀ ವಿರೋದಪಕ್ಷದ ಎಲ್ಲಾ ಮುಖಂಡರು ಸಹ ಸರ್ಕಾರದ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದು ಗ್ರಾನೈಟ್ ಕಲ್ಲುಗಳ ಲೂಟಿ ಬಗ್ಗೆ ನಿಸರ್ಗ ಸಂಪತ್ತು ನಾಶವಾಗುತ್ತಿದೆ. ನೀವು ನಮ್ಮನ್ನು ಕರೆದು ಮಾತನಾಡಬೇಕು ಮಾತನಾಡಿ ನಿಮಗೆ ಒಳ್ಳೆಯ ಸಲಹೆಯನ್ನು ಕೊಡುತ್ತೇನೆ. ಸಲಹೆಯ ಪ್ರಕಾರ ಮಾಡಿ ಅಂತ ಹೇಳತಕ್ಕದ್ದು ಇವತ್ತು ಅದರಿಂದ ನೂರಾರು ಕೋಟಿ ರೂಪಾಯಿಗಳು ಅನ್ಯಾಯವಾಗುತ್ತಿದೆ. ಧಾರ್ಮಿಕ ಸ್ಥಳಗಳು ಹಾಳಾಗುತ್ತಿವೆ. ನಿಸರ್ಗ ಸಂಪತ್ತು ನಾಶ ಅಗುತ್ತಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ಯಾವುದೇ ನಿರ್ಧಾರಕ್ಕೆ ಬರುವುದಕ್ಕೆ ಮುಂದೆ ವಿರೋಧ ಪಕ್ಷದವರನ್ನು ಕರೆದು ಮಾತುಕತೆ ಮಾಡಿ ನಮ್ಮ ಕೆಲವು ಸಲಹೆಗಳನ್ನು ತೆಗೆದುಕೊಳ್ಳಲಿ ಅದು ತಮಗೆ ಇಷ್ಟಪಟ್ಟರೆ ಇಟ್ಟುಕೊಳ್ಳಬಹುದು ಇಲ್ಲದಿದ್ದರೆ ಬಿಡಬಹುದು. ಈ ಸಂದರ್ಭದಲ್ಲಿ ಪ್ರಾಮಾಣಿಕವಾದಂತಹ ತೀರ್ಮಾನಕ್ಕೆ ಬರಬೇಕು. ಹಿಂದಿನ ಸರ್ಕಾರದವರು ನನ್ನನ್ನು ಮತ್ತು ಸಿಂಧ್ಯಾರವರನ್ನು ಕರೆದು ಗ್ರಾನೈಟ್ ಕಲ್ಲುಗಳ ಲೂಟಿಯ ಬಗ್ಗೆ ನಿಮ್ಮ ವಿಚಾರ ಏನಿದೆ ಆ ಬಗ್ಗೆ ಮಾತನಾಡೋಣ ಎಂದು ಹೇಳಿದ್ದರು. ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆ. ಈಗಾಗಲೇ ಎರಡು ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದೇನೆ. ನಾನು ಸಹಿ ಮಾಡಿದ್ದೇನೆ ಮಾನ್ಯ ಸಿಂಧ್ಯಾರವರು ಮಾನ್ಯ ನಂಜುಂಡಸ್ವಾಮಿಯವರು ಮಾನ್ಯ ಕಮರುಲ್ ಇಸ್ಲಾಂ ಅವರು ಮಾನ್ಯ

ಯಡಿಯೂರಪ್ಪನವರು ಎಲ್ಲರೂ ಸಹಿ ಮಾಡಿದ್ದೇವೆ. ತಾವು ನಮ್ಮನ್ನು ಕರೆದು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಅಲ್ಲಿಯವರೆಗೂ ಸರ್ಕಾರ ಯಾವುದೇ ಒಂದು ನಿರ್ಧಾರಕ್ಕೆ ಬರಬಾರದು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ ಅದರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾನು ತಮ್ಮನ್ನು ಕರೆಯುತ್ತೇನೆ. ಎಲ್ಲ ವಿರೋಧಪಕ್ಷದ ನಾಯಕರನ್ನು ಉಪ ನಾಯಕರನ್ನು ಆ ಸದನದ ಎಲ್ಲ ಪಕ್ಷದ ನಾಯಕರನ್ನು ಆ ಸಭೆಗೆ ಕರೆಯುತ್ತೇನೆ. ಎಲ್ಲರೂ ಕುಳಿತುಕೊಂಡು ರಾಜ್ಯದ ಹಿತದೃಷ್ಟಿಯಿಂದ ಏನು ಮಾಡಬೇಕು ಹೇಗೆ ಮಾಡಬೇಕು ಎಂದು ಮಾತನಾಡೋಣ ತಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ನಾವು ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ. ಆದರೆ ಸದನ ಮುಗಿಯುವುದರೊಳಗೆ ಸಭೆ ಕರೆಯಲಿಕ್ಕೆ ಆಗುವುದಿಲ್ಲ. ಅತಿ ಶೀಘ್ರವಾಗಿ ಕರೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಜೆಟ್ ಭಾಷಣದ ಕೆಲವು ಅಂಶಗಳನ್ನು ಇಲ್ಲದಿದ್ದರೂ ಸಹ ಕೊನೆಯ ಪಕ್ಷ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೆಲವು ತೀರ್ಮಾನಗಳನ್ನು ಜನಹಿತ ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತೀರೆಂದು ನಾವು ಭಾವಿಸಿದ್ದೆವು ಕೊನೆಯ ಪಕ್ಷ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಿಮ್ಮ ಹಿಂದೆ ಇದ್ದ ಸರ್ಕಾರ ಹೋದ ಬಜೆಟ್ ಸದನದಲ್ಲಿ ಏನೇನು ಆಶ್ವಾಸನೆಗಳನ್ನು ರಾಜ್ಯದ ಜನತೆಗೆ ಕೊಟ್ಟಿತ್ತು ಅದು ಯಾವುದು ಕಾರ್ಯರೂಪಕ್ಕೆ ಬಂದಿದೆ ಎಂಬುದರ ಬಗ್ಗೆ ನಾನು ನೇರವಾಗಿ ತಮಗೆ ಪ್ರಶ್ನೆ ಕೇಳಿದ್ದೆ ತಮಗೆ ಉದಾಹರಣೆ ಹೇಳಬೇಕೆಂದರೆ ಶೌಚಾಲಯದ ಬಗ್ಗೆ ಒಂದು ಕಟ್ಟಡದ ಕೆಲಸ ಪ್ರಾರಂಭವಾಗಿಲ್ಲ ಬರಗಾಲ ಪರಿಸ್ಥಿತಿ ತೀವ್ರವಾಗಿದೆ. ಇವೊತ್ತು ದೂರವಾಣಿ ಮೂಲಕ ಅಧಿಕಾರಿಗಳ ಹತ್ತಿರ ಮಾತನಾಡಿ ಬಂದರೆ ಶಿಕಾರಿಪುರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಬರಗಾಲ ಕಾಮಗಾರಿಗೆ 16-17 ಲಕ್ಷ ರೂಪಾಯಿ ಬಾಕಿ ಇತ್ತು. ಒಂದೆರಡು ಲಕ್ಷ ರೂಪಾಯಿಗಳು ಕೂಡ ಬಿಡುಗಡೆ ಆಗಿಲ್ಲ ಕೆಲಸಗಳೆಲ್ಲಾ ಅಲ್ಲಿ ನಿಂತಿವೆ ಇವೊತ್ತು ಇಡೀ ರಾಜ್ಯದಲ್ಲಿ ಬರಗಾಲ ಕಾಮಗಾರಿ ಕೆಲಸ ಆಗಬೇಕಾಗಿದೆ. ಈಗ ಬರಗಾಲ ಪರಿಹಾರ ಕಾಮಗಾರಿ ಕೆಲಸಮಾಡಿದವರಿಗೆ ಮಾರ್ಚಿ ಕೊನೆಯಲ್ಲಿ ಅವರಿಗೆ ಕೂಲಿ ಕೊಟ್ಟಿಲ್ಲ. ಕಳೆದ ಎರಡು ವರ್ಷಗಳಿಂದ ನೀರಾವರಿ ಮತ್ತು ಪಿಡಬ್ಲ್ಯೂಡಿ ಇಲಾಖೆಯಲ್ಲಿ ಯಾವುದೇ ಕಾಮಗಾರಿ ಕೆಲಸ ನಡೆಯುತ್ತಿಲ್ಲ ತಾವೇನು ಅಶ್ವಾಸನೆಗಳನ್ನು ಕೊಟ್ಟಿದ್ದೀರಿ ಅದನ್ನು ಈಡೇರಿಸಲಿಕ್ಕೆ ಹಣ ಇಟ್ಟಿಲ್ಲ ಇನ್ನು ಮನೆಗಳ ವಿಷಯದ ಬಗ್ಗೆ ನಾನು ತಮ್ಮನ್ನು ಕೇಳಿದೆ. ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆ ಎಂದು ಹೇಳಿದರೆ ಒಂದು ಮನೆಗೆ 700 ರೂಪಾಯಿ ಖರ್ಚು ಇಟ್ಟುಕೊಂಡರು. 70 ಲಕ್ಷ ರೂಪಾಯಿ ಬೇಕಾಗುತ್ತದೆ. ಇಡೀ ರಾಜ್ಯದಲ್ಲಿ 175 ತಾಲ್ಲೂಕಿಗೆ ಸಾವಿರಾರು ಮನೆಗಳನ್ನು ಕಟ್ಟಲಿಕ್ಕೆ 172 ಕೋಟಿ ರೂಪಾಯಿ ನಿಮಗೆ ಬೇಕಾಗುತ್ತದೆ. ಅದರಲ್ಲಿ ನೀವು ಎರಡು ಕೋಟಿ ರೂಪಾಯಿಗಳನ್ನು ಸಹಾ ತೆಗೆದಿಟ್ಟಿಲ್ಲ. ಜನತೆಗೆ ಏನೋ ಒಂದು ಆಶ್ವಾಸನೆ ಕೊಟ್ಟು ಹೇಗೋ ಕಾಲ ತಳ್ಳುವಂತಾದ್ದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ ಅದು ನಿಮ್ಮ ಕಾಲದಲ್ಲಿಯೂ ನಡೆಯುತ್ತಿದೆ ಇದು ನಮ್ಮ ದುರಾದೃಷ್ಟ ಅದಕ್ಕೆ ನಾನು ವಿನಂತಿ ಮಾಡುವುದು ಏನೆಂದರೆ ರೈತರ ಬಗ್ಗೆ ನಾನು ಅನೇಕ ಪ್ರಶ್ನೆಗಳನ್ನು ಕೇಳಿದಾಗ ಪ್ರತ್ಯೇಕವಾದ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇವೊತ್ತು ತಾವು ಕೊಟ್ಟಂಥ ಉತ್ತರದಲ್ಲಿ ಯಾವುದೇ ಜನಪರ ಕಾರ್ಯಕ್ರಮಗಳು ಇಲ್ಲ. ಹೊಸ ಘೋಷಣೆ ಇಲ್ಲ. ಹಿಂದಿನ ಸರ್ಕಾರ ಕೊಟ್ಟಂಥ ಯಾವುದೇ ಆಶ್ವಾಸನೆಯನ್ನು ಈಡೇರಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ ರೈತರ ಪರವಾಗಿ ಉತ್ತರ ಕೊಡುವಂಥ ಸಂದರ್ಭದಲ್ಲಿ ರಾಜ್ಯದ ರೈತರಿಗೆ ನೇಕಾರರಿಗೆ ಹತ್ತು ಸಾವಿರದವರೆಗೆ ಸಾಲದ ಬಗ್ಗೆ ಯಾವುದೇ ನಿಬಂಧನೆ ಹಾಕದೆ ಎಲ್ಲಾ ಕಂಡೀಷನ್ ತೆಗೆದುಹಾಕಿ ಆ ಸಾಲ ಮನ್ನಾ

ಮಾಡುವ ಬಗ್ಗೆ ಘೋಷಣೆ ಮಾಡುವಂಥ ಸದ್ಬುದ್ಧಿ ಭಗವಂತ ನಿಮಗೆ ಕೊಡಲಿ ಎಂದು ಹೇಳಿ ಈ ಉತ್ತರದಲ್ಲಿ ರಾಜ್ಯದ ಜನರಿಗೆ ಯಾವುದೇ ಒಂದು ಹಿತ ಇಲ್ಲದೇ ಇರುವುದರಿಂದ ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ ತಾವು ಏಪ್ರಿಲ್ ಫೂಲ್ ಮಾಡುವಂಥ ಕೆಲಸ ಮಾಡುತ್ತಿದ್ದೀರಿ ಎಂದು ಹೇಳಿ ನಾವು ಹೊರಗೆ ಹೋಗುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಇದು ಏಪ್ರಿಲ್ ಫೂಲ್ ಬಜೆಟ್ ಎಂದು ಹೇಳಿ ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ: ಸಭಾತ್ಯಾಗ ಮಾಡುವುದಕ್ಕೋಸ್ಕರ ಅವರು ಇಲ್ಲಿಗೆ ಬಂದಿದ್ದಾರೆಂದು ನನಗೆ ಈಗ ಗೊತ್ತಾಯಿತು. ಏಕೆಂದರೆ ರೈತರ ವಿಚಾರದಲ್ಲಿ ಅವರು ಹೇಳಿಬಿಟ್ಟು ಹೊರಟು ಹೋಗುತ್ತಿದ್ದಾರೆ. ನಾನು ಏನು ಹೇಳಿದ್ದೇನೆ. ರೈತರ ಬಗ್ಗೆ ಬಹಳ ವಿಚಾರಗಳು ಇವೆ. ಅಂಶಗಳು ಇವೆ ಆ ಬಗ್ಗೆ ಚರ್ಚೆ ಮಾಡಿದ್ದೇವೆ. ತಾವು ಹೇಳಿದ್ದೀರಿ ನಮ್ಮ ಹತ್ತಿರ ಕೂಡ ಇವೆ. ಈ ಬಗ್ಗೆ ನಾನು ಪ್ರತ್ಯೇಕ ಹೇಳಿಕೆ ಕೊಡುತ್ತೇನೆಂದು ಹೇಳಿದರೂ ಕೂಡ ಅವರು ಸಭಾತ್ಯಾಗ ಮಾಡುತ್ತೇವೆಂದರೆ ನಮ್ಮ ಹೇಳಿಕೆ ಮತ್ತೊಂದು ಕೇಳಲಿಕ್ಕೆ ಇವರಿಗೆ ಇಂಟರೆಸ್ಟ್ ಇಲ್ಲ ಎಂದು ಇದರಿಂದಲೇ ಗೊತ್ತಾಗುತ್ತದೆ. ಈಗಲಾದರೂ ಕೂಡ ಅವರಿಗೆ ಸದ್‌ಬುದ್ಧಿ ಬರಲಿ. ನಾನು ಏನು ಹೇಳುತ್ತೇನೆ ಎಂದು ಅರ್ಥಮಾಡಿಕೊಂಡು ಬೇಕಾದರೆ ಏನಾದರೂ ಪಾಯಿಂಟ್ ಹುಡುಕಿ ವಾಚ್ ಮಾಡಲಿಕ್ಕೆ ಬರುತ್ತದೆ. ನಾನು ಇನ್ನೂ ಹೇಳಿಕೆ ಕೊಟ್ಟಿಲ್ಲ ಈಗಲೇ ವಾಕೌಟ್ ಅಂದರೆ ಇದಕ್ಕೆ ಬುಡ ತುದಿ ಒಂದೂ ಇಲ್ಲ ಯಾವ ರೀತಿ ವಾದ ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಪಾಟೀಲ್ ಬಾಬಗೌಡ ರುದ್ರಗೌಡ: ರೈತರ ಸಾಲದ ಮೇಲೆ ಸ್ಟ್ಯಾಂಪ್ ಡ್ಯೂಟಿ ಹಾಕಿದ್ದೀರಿ, ವ್ಯಾಪಾರಸ್ಥರು ಕಾರ್ಖಾನೆ ಮಾಲೀಕರ ಸಾಲದ ಮೇಲೆ ಸ್ಟ್ಯಾಂಪ್ ಡ್ಯೂಟಿಯನ್ನು ಹಾಕಿದ್ದೀರಾ?

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಉಪಾಧ್ಯಕ್ಷಣಿಯವರೆ ಮಾನ್ಯ ಸದಸ್ಯರ ಹಲವಾರು ಬೇಡಿಕೆಗಳಲ್ಲಿ ಇದೂ ಕೂಡ ಒಂದು. ನಾನು ಉತ್ತರವನ್ನು ಕೊಡುವಾಗ ಈ ಎಲ್ಲ ಅಂಶಗಳನ್ನೂ ಕವರ್ ಮಾಡುತ್ತೇನೆ. ಇದರಲ್ಲಿ ಎಲ್ಲವನ್ನೂ ನಾವು ಮಾಡುತ್ತೇವೆಂದು ಅಲ್ಲ ಯಾವುದು ಆಗುತ್ತದೆ ಅದನ್ನು ಮಾಡುತ್ತೇವೆ. ಮಾಡುವುದಕ್ಕಾಗದಿದ್ದರೆ ಏನು ಕಾರಣ ಏತಕ್ಕೆ ಸಾಧ್ಯವಿಲ್ಲ ಎಂಬುದನ್ನು ಹೇಳುತ್ತೇನೆ. ಆ ಸ್ಟೇಟ್‌ಮೆಂಟ್ ಬಂದಮೇಲೆ ನಾನು ತಮಗೆ ಹೇಳುತ್ತೇನೆ.

ಅಧ್ಯಕ್ಷರು: ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:

31-3-1991-92 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ: 1 ರಿಂದ 61ರವರೆಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ,

ಅಭಿಯಾಚನೆ ಕ್ರಮಾಂಕ 1 - ಭೂಸಾರ ಮತ್ತು ಜಲ ರಕ್ಷಣೆ ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು.)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಜಲ ರಕ್ಷಣೆ ಮತ್ತು ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ದಿ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 101,22,90,000 ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,44,35,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 2 - ಖುಷ್ಕಿ ಭೂಮಿ ಅಭಿವೃದ್ದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3- 1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖುಷ್ಕಿ ಭೂಮಿ ಅಭಿವೃದ್ದಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3 - ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,65,00,000ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4 - ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಾಂಗೋಪನಾ ಮತ್ತು ಡೈರಿ ಅಭಿವೃದ್ದಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 27,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 5 - ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 5,45,00,000 ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 42,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 6-ಉದ್ಯಮಗಳ (ಚಿಕ್ಕಪುಟ್ಟ) ಉದ್ಯಮಗಳು ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 18,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7 - ಗಣಿಗಳು ಮತ್ತು ಭೂ ವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,80,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8 - ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,24,00,000 ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,26,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9 - ಸಹಕಾರ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,37,50,000 ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,25,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10-ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 41,11,00,000 ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,75,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 11 - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,00,00,000 ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12 - ಉಚ್ಚ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 104,00,00,000 ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13 - ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,00,00,000 ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14 - ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,15,00,000 ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 15 - ಪ್ರಾಥಮಿಕ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,43,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 16 - ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಂಕೆಂಡರಿ ಶಿಕ್ಷಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,45,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭೀಯಾಚನೆ ಕ್ರಮಾಂಕ 17 - ವರಮಾನ ತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡಲು ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 37,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 18 - ವಿಮೆ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ ಖಜಾನೆ ಮತ್ತು ಲೆಖಾ ಇಲಾಖೆಗಳ ಆಡಳಿತ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,20,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 19 - ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 150,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 20 - ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,45,00,000 ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 - ಸಣ್ಣ ಉಳಿತಾಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಗಳಿಗೆ ಸಂದಾಯ ಮಾಡಲು ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,50,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22 - ಇತರ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 23 - ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜಿಗೆ ಸಂದಾಯ ಮಾಡವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 38,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24 - ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 56,00,00,000 ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೩,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 25 - ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಸರಕಾರಕ್ಕೆ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,60,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 26 - ವಾಹನ ತೆರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಸರಕಾರಕ್ಕೆ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,95,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27 - ಪೋಲೀಸ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಸರಕಾರಕ್ಕೆ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 105,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28 - ಜೈಲು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,85,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 29 - ವಾರ್ತಾ ಮತ್ತು ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಾವಾಸೋದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 5,25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮತ್ತು ಬಂಡವಾಳ ಖಾತೆಯಲ್ಲಿ 55,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 30 - ರಸ್ತೆ ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 25,00,000 ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 31 - ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 225,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 32 - ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 33 - ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಬಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,02,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 650,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 34 - ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರ ಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 38,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 35 - ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 22,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 36 - ನೀರಾವರಿ, ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 115,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 188,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 37 - ರಾಜ್ಯ ವಿಧಾನಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,60,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 38 - ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 18,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 39 - ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಸರಕಾರಕ್ಕೆ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 40 - ರಾಜ್ಯಪಾಲರು ಮತ್ತು ಮಂತ್ರಿಗಳು ಲೋಕಸೇವಾ ಅಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು ಮಂತ್ರಿಗಳು ಮತ್ತು ಲೋಗ ಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 87,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41 - ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 42 - ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 43 - ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯ ಮಂತ್ರಿಯವರ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,75,00,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44 - ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆ ಅಭಿಯಾಚೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 43,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45 - ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗೆ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 54,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 46 - ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,32,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 47 - ರಸ್ತೆ ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 64,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,00,00,000 ರೂ.ಗಳಿಗಿಂತ ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 48 - ರೇವು ಮತ್ತು ಜಲ ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 175,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 49 - ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 168,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 - ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 35,12,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 51 - ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,85,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 52 - ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,00,000 ರೂ.ಗಳಿಗಿಂತ ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 53 - ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,11,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 54 - ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 45,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 55 - ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮ ಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 28,25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,50,00,000 ರೂ.ಗಳಿಗಿಂತ ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 56 - ಕ್ರಮ ಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮ ಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 57 - ಗ್ರಾಮಾಂತರ ನೀರು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 57,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 58 - ಗ್ರಾಮೀಣ ಅಭಿವೃದ್ದಿ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಅಭಿವೃದ್ದಿ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 207,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 59 - ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 23,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 60 - ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 58,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,70,00,000 ರೂ.ಗಳಿಗಿಂತ ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 61 - ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 71,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧ್ಯಕ್ಷರು: ಯಾವುದರ ಬಗ್ಗೆ ಚರ್ಚೆಯಾಗಬೇಕು ಹೇಳಿ. ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಹೆಚ್. ಏಕಾಂತಯ್ಯ : 1991-92ರ ಓಟ್ ಅನ್ ಅಕೌಂಟ್ ಎಂದು ಹೇಳಿದರೆ ಅದಕ್ಕೆ ನಮ್ಮದೇನು ತಕರಾರು ಇರುವುದಿಲ್ಲ.

ಅಧ್ಯಕ್ಷರು : ಅರ್ಥ ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಕೇಳೋಣ.

ಶ್ರೀ ಎಸ್. ಬಂಗಾರಪ್ಪ : ಈ ಬಜೆಟ್ ಬಗ್ಗೆ ಜನರಲ್ ಡಿಸ್‌ಕಷನ್ ಆಗಬೇಕಾದರೆ ಮಾನ್ಯ ವಿರೋಧಪಕ್ಷದ ನಾಯಕರ ಗಮನದಲ್ಲೂ ಕೂಡ ಬಂದಿರಬಹುದು. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಏನಿದೆ ಅದನ್ನೂ ಕೂಡಾ ಇಟ್ಟೆ ಒಟ್ಟಿಗೆ ಚರ್ಚೆಯಾಗಬೇಕೆಂದು ಹೇಳಿ ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ತೀರ್ಮಾನವಾಗಿ ಅದೆಲ್ಲ ಆದಮೇಲೆ ಒಟ್ಟಿಗೆ ಚರ್ಚೆಯಾಗಬೇಕೆಂದು ಹೇಳಿ ತೀರ್ಮಾನವಾಗಿದೆ. ಅದಕ್ಕೋಸ್ಕರ ಈಗ ಚರ್ಚೆ ಮಾಡಲಿಕ್ಕೆ ಏನು ಉಳಿದಿದೆ ಅದರಲ್ಲಿ? ಒಟ್ಟಿಗೆ ಚರ್ಚೆಗೆ ಇಟ್ಟಿರತಕ್ಕಂಥದ್ದು ಆಗಿದೆ. ಸರ್ಕಾರಕ್ಕೆ ನಾವೇ ಚರ್ಚೆ ಮಾಡುವುದು ಬೇಡವೆಂದು ಹೇಳುವುದಕ್ಕೆ ಆಗುತ್ತದೆಯೇ ಸ್ವಾಮಿ? ನಾವು ಒಟ್ಟಿಗೆ ಮಂಡಿಸಿದ್ದೇವೆ. ಮಾನ್ಯ ಏಕಾಂತಯ್ಯನವರೆ ಇದು ಪಾಸ್ ಆಗಿಹೋಗಿದೆ. ಮತಕ್ಕೆ ಹಾಕಿ ಆಗಿಹೋಯಿತು.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ ಈ ಪೂರಕ ಅಂದಾಜುಗಳ ಬಗ್ಗೆ ಯಾವತ್ತೂ ಚರ್ಚೆಯಿಲ್ಲದೆ ಪಾಸ್‌ಮಾಡತಕ್ಕಂಥ ಒಂದು ಸಂಪ್ರದಾಯ ನಮ್ಮ ಮನೆಯಲ್ಲಿ ಬಂದಿಲ್ಲ. 1990-91ನೇ ಸಾಲಿಗೆ ಲೇಖಾನುದಾನ ತಾವು ಮಾಡಿದ್ದೀರಿ. ಅದರ ಜೊತೆಗೆ ಇದನ್ನು ಚರ್ಚೆ ಮಾಡಬೇಕೆಂದರೆ ಏಷ್ಟರಮಟ್ಟಿಗೆ ಸಂಬಂಧವಾಗುತ್ತದೆ. ಅದಕ್ಕೂ ಇದಕ್ಕೂ ಸಂಬಂಧವೇನಿದೆ. 1990-91ನೇ ಸಾಲಿಗೆ ಪೂರಕ ಅಂದಾಜುಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಇದು ಹೇಗೆ ಆಗುತ್ತದೆ.

ಅಧ್ಯಕ್ಷರು : ಕಾರ್ಯಕಲಾಪಗಳ ಸಮಿತಿಯಲ್ಲಿ ಎರಡು ಒಟ್ಟಿಗೆ ಆಗಬೇಕೆಂದು ತೀರ್ಮಾನವಾಗಿದೆ. I left it to the Leader of the Opposition. ಎಲ್ಲ ಒಪ್ಪಿದ್ದಾರೆ. ಲೀಡರ್ ಆಫ್ ದಿ ಅಪೋಜಿಷನ್ ಒಪ್ಪಿದ್ದಾರೆ. (Interruptions)

Mr. Speaker : It is already put to vote.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಅದು ಸಪ್ಲಿಮೆಂಟರಿ ಬಜೆಟ್ ನಾನೇ ಅದನ್ನು ಇಲ್ಲಿ ಮಂಡಿಸಿದೆ. ಮಂಡಿಸಿದಾಗ ನಾನು ಚರ್ಚೆಗೆ ತೆಗೆದುಕೊಳ್ಳುವ ಮೊದಲು ಇಲ್ಲಿ ಪ್ರಸ್ಥಾಪನೆ ಮಾಡಿದೆ. ಪೂರಕ ಬಜೆಟ್ ಮತ್ತು ಈ ಬಜೆಟ್ ಜನರಲ್ ಡಿಸ್‌ಕಷನ್ ಜೊತೆಯಲ್ಲಿ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಂಡೆ. ಅದಕ್ಕೆ ತಾವು ಒಪ್ಪಿಗೆ ಕೊಟ್ಟಿರಿ. ಅದು ರೆಕಾರ್ಡ್‌ನಲ್ಲಿದೆ ದಯವಿಟ್ಟು ತಿಳಿದುಕೊಳ್ಳಿ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

1990-91ನೇ ಸಾಲಿನ ಅನುಪೂರಕ ಅನುದಾನ ಬೇಡಿಕೆಗಳ (2ನೇ ಕಂತ)ನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಪೂರಕ ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

(1) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಭೂಸಾರ ಮತ್ತು ಜಲರಕ್ಷಣೆ ಮತ್ತು ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು)" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದ್ದಲ್ಲಿ 97,25,000 ಬಂಡವಾಳ ಲೆಕ್ಕದಲ್ಲಿ 1,25,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(2) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಖುಷ್ಕಿ ಭೂಮಿ ಅಭಿವೃದ್ಧಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3,00,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(3) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಮೀನುಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 55,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(4) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ಸಹಕಾರ ಉದ್ಯಮಗಳ ಮತ್ತು ರೇಷ್ಮೆ ವ್ಯವಸಾಯದ ಹೊರತು)"

ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,24,94,000ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(5) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಚಿಕ್ಕಪುಟ್ಟ ಉದ್ಯಮಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3,00,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(6) 1991ರ ಮಾರ್ಚ್ 31ರ ಅಂತ್ಯದೊಳಗಾಗಿ ರೇಷ್ಮೆ ವ್ಯವಸಾಯ ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 25,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(7) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಲೇಖನ ಸಾಮಗ್ರಿ ಮತ್ತು ಮುದ್ರಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 21,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(8) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಉಚ್ಚ ಶಿಕ್ಷಣ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 85,51,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(9) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಯುವಜನ ಸೇವೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 6,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(10) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಸೆಕೆಂಡರಿ ಶಿಕ್ಷಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3,85,69,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(11)1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 7,55,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(12) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಅರಣ್ಯ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,52,61,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(13) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 9,74,85,000ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(14) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಜೈಲು ಇತ್ಯಾದಿಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,68,25,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(15) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ವಾರ್ತಾ ಮತ್ತು ಪ್ರವಾಸೋದ್ಯಮಗಳು" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,29,12,000 ಮತ್ತು ಬಂಡವಾಳ ಲೆಕ್ಕದಲ್ಲಿ 15,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(16) 1991ರ ಮಾರ್ಚ್ 31ರ ಅಂತ್ಯದೊಳಗಾಗಿ 'ನಗರಾಭಿವೃದ್ಧಿ ಇತ್ಯಾದಿ'ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,22,34,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(17) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಣ್ಣ ನೀರಾವರಿ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,71,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ ೬೦,೦೩,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(18) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 16,35,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(19) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ನ್ಯಾಯಪರಿಪಾಲನೆಗೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,09,47,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(20) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ನ್ಯಾಯಪರಿಪಾಲನೆಗೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 8,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(21) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಚುನಾವಣೆಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 32,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(22) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 30,53,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(23) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಚಿವಾಲಯ"ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 75,000 ರೂಪಾಯಿಗಳ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(24) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಜಿಲ್ಲಾಡಳಿತ"ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 98,93,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(25) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ"ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 25,25,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(26) 1991ರ ಮಾರ್ಚ್ 31ರ ಅಂತ್ಯದೊಳಗಾಗಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(27) 1991ರ ಮಾರ್ಚ್ 31ರ ಅಂತ್ಯದೊಳಗಾಗಿ ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು) ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 25,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(28) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ರಸ್ತೆಗಳು ಮತ್ತು ಸೇತುವೆಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10,00,009 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 5,00,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(29) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಭೂಕಂದಾಯ ಇತ್ಯಾದಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(30) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 8,75,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(31) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 13,01,32,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1,41,51,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(32) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,73,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(33) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 19,38,58,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(34) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಕಾರ್ಮಿಕ ಮತ್ತು ಉದ್ಯೋಗ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,47,00,000ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(35) 1991ರ ಮಾರ್ಚ್ 31ರ ಅಂತ್ಯದೊಳಗಾಗಿ "ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 30,57,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

(36) 1990ರ ಮಾರ್ಚ್ 31ರ ಅಂತ್ಯದೊಳಗಾಗಿ "ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

1. 1991ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ 1991 ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ "1991ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೋಕಾನುದಾನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್ ಬಂಗಾರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ 1991ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. Annexure 1 & 2